# ಕನ್ನಡ - ಅಧ್ಯಾಪಕ ಪಠ್ಯ
# KANNADA - TEACHER TEXT

## ಮುಂದುವರಿದ ಪಠ್ಯ
## ADVANCED TEXT

### ತರಗತಿ

### IX

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

**ಘಟಕ 1**

# ನಿಸರ್ಗ-ಸೌರಭ

ಹಚ್ಚಹಸುರಿನಿಂದ ಕೂಡಿದ ಕಾಡುಮೇಡುಗಳು, ಜುಳುಜುಳು ನಿನಾದದೊಂದಿಗೆ ಹರಿಯುವ ತೊರೆಗಳು, ಹುಗಳ ಸೌಗಂಧವನ್ನು ಸುತ್ತಲೂ ಪಸರಿಸಿರುವ ತಂಗಾಳಿ, ಹಕ್ಕಿಗಳ ಇಳಿದನಿಯ ಕೂಜನ, ಜೀರುಂಡೆಗಳ ಸದ್ದು ಹೀಗೆ ನಮ್ಮ ಮನಸನ್ನು ಮುದಗೊಳಿಸುವ ನಿಸರ್ಗಅದರಷ್ಟಕ್ಕೇ ಬಹಳ ಸುಂದರವಾದುದು. ಮಾನವನ ಹಸ್ತಕ್ಷೇಪದಿಂದ ನಮ್ಮ ಪರಿಸರ ನಾಶವಾಗುತ್ತಿವೆ. ಬುಲ್ಡೋಜರ್‌ಗಳ ಕೋರೆದಾಡೆಗೆ ಸಿಲುಕಿ ಅರ್ಧಂಬರ್ಧ ಉಳಿದ ಬೆಟ್ಟಗುಟ್ಟಗಳು ನಮ್ಮ ಪ್ರಗತಿಯನ್ನು ಅಣಕಿಸುತ್ತಾ ನಿಂತಿವೆ. ಕಾಂಕ್ರೀಟ್ ಕಾಡುಗಳಿಂದ ಭೂಮಿಯ ಒಟ್ಟು ತಾಪಮಾನ ಹೆಚ್ಚಿ ಹವಾಮಾನ ವೈಪರೀತ್ಯಗಳು ಕಾಣಿಸಿಕೊಳ್ಳುತ್ತಿವೆ. ಜೀವವಾಸ್ತವ್ಯವಿರುವ ಏಕೈಕ ಗ್ರಹವಾದ ಭೂಮಿಯೂ ವಾಸಯೋಗ್ಯವಲ್ಲದ ಸ್ಥಿತಿಗೆ ಬರುತ್ತಿದ್ದರೆ ಅದಕ್ಕೆ ಕಾರಣ ಮನುಷ್ಯರು ಮಾತ್ರ.

ನಮ್ಮ ಪರಿಸರವನ್ನು ಮುಂದಿನ ತಲೆಮಾರಿಗೆ ಉಳಿಸಬೇಕಿದ್ದರೆ ಪರಿಸರದ ಸೌಂದರ್ಯ ಮಹತ್ವದ ಅರಿವು ನಮ್ಮ ಮಕ್ಕಳಿಗಿರಬೇಕು. ಕೇವಲ ಸಂಪನ್ಮೂಲಕ್ಕಾಗಿ ಮಾತ್ರವಲ್ಲ ಅದಕ್ಕಿಂತಲೂ ಮಹತ್ತಾದ ಆನಂದವನ್ನು ನೀಡುವ ಮೋಹಕ ಸೌಂದರ್ಯ ನಮ್ಮ ಪರಿಸರಕ್ಕಿದೆ ಎನ್ನುವ ಅರಿವು ಮಕ್ಕಳಲ್ಲಿ ಮೂಡಬೇಕು. ಪರಿಸರದ ಸೌಂದರ್ಯವನ್ನು ಪರಿಚಯಿಸಬೇಕು, ಅದನ್ನು ಆಸ್ವಾದಿಸುವ ಬಗೆಯನ್ನು ತಿಳಿಸಿಕೊಡಬೇಕು. ಅದರ ಜೊತೆಗೆ ಪರಿಸರದ ನಾಶವು ಇಂದಿನ ಸಂದರ್ಭದಲ್ಲಿ ಒಂದು ಜ್ವಲಂತ ಸಮಸ್ಯೆಯಾಗಿದೆ ಎಂದು ತಿಳಿದುಕೊಂಡು ಅದನ್ನು ಪರಿಹರಿಸುವ ಯೋಜನೆಗಳನ್ನು ರೂಪಿಸಲು ನಮ್ಮ ವಿದ್ಯಾರ್ಥಿಗಳು ಶಕ್ತರಾಗಬೇಕು ಎಂಬ ಆಶಯದೊಂದಿಗೆ ಈ ಘಟಕವನ್ನು ರೂಪಿಸಲಾಗಿದೆ.

ಅರಣ್ಯನಾಶ ಹಾಗೂ ಅದರ ಪರಿಣಾಮಗಳನ್ನು ಸಂಕ್ಷಿಪ್ತವಾಗಿ ಮನದಟ್ಟು ಮಾಡುವ ಒಂದು ಕೊಲಾಷನ್ನು ಈ ಘಟಕಕ್ಕೆ ಪ್ರವೇಶ ಚಟುವಟಿಕೆಯಾಗಿ ನೀಡಲಾಗಿದೆ. ಪರಿಸರ ಸಂರಕ್ಷಣೆಯ ಅಗತ್ಯವನ್ನು ಕುರಿತು ಮನದಟ್ಟು ಮಾಡಿಕೊಡಲು ಈ ಚಟುವಟಿಕೆಗೆ ಸಾಧ್ಯವಾಗಬಹುದು.

ರಾಷ್ಟ್ರಕವಿ ಕುವೆಂಪುರವರ ರಚನೆಯಾದ "ಹೋಗುವೆನು ನಾ" ಕವನವು ಘಟಕದ ಮೊದನೆಯ ಕವನವಾಗಿದೆ. ಮಲೆನಾಡಿನ ಸೌಂದರ್ಯವನ್ನು ಈ ಕವನ ವರ್ಣಿಸುತ್ತದೆ. ಗುಡ್ಡ, ಬೆಟ್ಟ ನದಿ ತೊರೆಗಳು ಎಲ್ಲ ಜೀವಜಾಲಗಳಿಗೂ ಅನಿವಾರ್ಯ ಮಾತ್ರವಲ್ಲ ಮನುಷ್ಯ ನಿಸರ್ಗದೊಂದಿಗೆ ಭಾವನಾತ್ಮಕ ಸಂಬಂಧವನ್ನೂ ಹೊಂದಿದ್ದಾನೆ ಎಂದು ಈ ಕವನ ತಿಳಿಸಿಕೊಡುತ್ತದೆ.

ಡಾ. ಶಿವರಾಮಕಾರಂತರ ಬೆಟ್ಟದಜೀವ ಕಾದಂಬರಿಯ ಆಯ್ದ ಭಾಗವಾದ ಬೆಟ್ಟದನೋಟ ಮನುಷ್ಯ ಹಾಗೂ ಕಾಡುಪ್ರಾಣಿಗಳ ಸಂಘರ್ಷದ ಸ್ಥೂಲ ಚಿತ್ರಣವನ್ನು ನಮ್ಮ ಕಣ್ಣಮುಂದೆ ತೆರೆದಿರಿಸುತ್ತದೆ. ಬೆಟ್ಟದ ಬುಡದ ಹಳ್ಳಿಯ ಜನರ ಪರಿಸರಕ್ಕೆ ಹೊಂದಿಕೊಂಡ ಬದುಕು ಮನುಷ್ಯ ಪ್ರಕೃತಿಯೊಂದಿಗೆ ಹೇಗೆ ಸಹಬಾಳ್ವೆ ಮಾಡಬೇಕು ಎನ್ನುದಕ್ಕೆ ಉತ್ತಮ ಉದಾಹರಣೆಯಾಗಿದೆ.

ಲೇಖಕ ನಿರಂಜನ ವಾನಳ್ಳಿಯವರ ಗ್ರಾಮಭಾರತ ಅಂಕಣ ಬರಹವು ಹಿಂದೆ ಗ್ರಾಮ ಭಾರತವಾಗಿದ್ದ ಭಾರತದಲ್ಲಿ

ಗ್ರಾಮೀಣ ಸಂಸ್ಕೃತಿ ಹೇಗೆ ಮರೆಯಾಗುತ್ತಿದೆ ಎನ್ನುವುದನ್ನು ತೀಕ್ಷ್ಣ ರೂಪದಲ್ಲಿ ತೋರಿಸಿಕೊಡುತ್ತದೆ.

ಈ ಘಟಕದ ಮೂರು ಪಾಠಗಳು ಪರಿಸರದ ಸೌಂದರ್ಯದ ಆಸ್ವಾದನೆಯೊಂದಿಗೆ ನಾವು ಎದುರಿಸುತ್ತಿರುವ ಗಂಭೀರ ಸಮಸ್ಯೆಯಾದ ಪರಿಸರ ನಾಶದ ಮೇಲೆಯೂ ಬೆಳಕನ್ನು ಚೆಲ್ಲಿವೆ. ಕಿರುಚಿತ್ರ , ಭಿತ್ತಿಪತ್ರ, ಲೇಖನ, ಪ್ರಬಂಧ, ಜಾಹೀರಾತು ರಚನೆ ಮೊದಲಾದ ಚಟುವಟಿಕೆಗಳನ್ನು ಮಾಡುವುದರ ಮೂಲಕ ವಿದ್ಯಾರ್ಥಿಗಳ ಮನಸಿನಲ್ಲಿ ನಿಸರ್ಗದ ಆರಾಧನೆಯ ಮನೋಭಾವ ಮೂಡುವುದರೊಂದಿಗೆ ಪರಿಸರ ಸಂರಕ್ಷಣೆಗೆ ಕಟಿಬದ್ಧರಾಗುವಂತೆ ಮಾಡಬಹುದು.

## ಕಲಿಕಾ ಗುರಿಗಳು

- ಕಥೆ, ಕವನ, ಕಾದಂಬರಿಯ ಭಾಗ, ಅಂಕಣ ಬರಹ ಮೊದಲಾದ ಕೃತಿಗಳ ಸೌಂದರ್ಯ ಮತ್ತು ನಿರೂಪಣ ರೀತಿಯನ್ನು ತಿಳಿದುಕೊಳ್ಳುವುದು.
- ಸಾಹಿತ್ಯ ಕೃತಿಗಳ ಶೈಲಿ, ಹೇಳಿಕೆಗಳು ಮೊದಲಾದವುಗಳನ್ನು ತಿಳಿದುಕೊಂಡು ಸ್ವತಂತ್ರವಾಗಿ ಪ್ರಯೋಗಿಸುವುದು.
- ಅಕ್ಷರಗಳ ಉಚ್ಚಾರಣೆಗೆ ಸಂಬಂಧಿಸಿ ಪದಗಳು ಸಂಧಿಯಾಗುವ ವಿಭಿನ್ನ ರೀತಿಗಳನ್ನು ತಿಳಿದುಕೊಳ್ಳುವುದು.
- ಕಥೆ, ಕವನ ಇತ್ಯಾದಿ ಸಾಹಿತ್ಯಪ್ರಕಾರಗಳಲ್ಲಿರುವ ಪ್ರತಿಮೆ, ಪ್ರತೀಕಗಳು ಮೊದಲಾದವುಗಳ ಸೌಂದರ್ಯಾಂಶಗಳನ್ನು ಕಂಡುಕೊಂಡು ಆವಿಷ್ಕರಿಸುವುದು.
- ವಿವಿಧ ಭಾಷಾ ವ್ಯವಹಾರಗಳ ವಿಶೇಷತೆಗಳನ್ನು ತಿಳಿದುಕೊಂಡು ವೈಯಕ್ತಿಕವಾಗಿ ಪ್ರಕಟಿಸುವುದು.
- ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಕಿರುಚಿತ್ರ ಜಾಹೀರಾತು ಭಿತ್ತಿ ಪತ್ರ ಮುಂತಾದವುಗಳನ್ನು ಕಂಪ್ಯೂಟರ್ ನ ಸಹಾಯದೊಂದಿಗೆ ಅಭಿವೃದ್ಧಿಪಡಿಸುವುದು.

## ಸಿಲೆಬಸ್ ಗ್ರಿಡ್

| | | |
|---|---|---|
| ವಿಷಯ | : | **ಮುಂದುವರಿದ ಪಠ್ಯ** |
| ತರಗತಿ | : | **9** |
| ಸಮಯ | : | **25 ಪಿರೀಡುಗಳು** |
| ಘಟಕದ ಹೆಸರು | : | **ನಿಸರ್ಗ ಸೌರಭ** |
| ಆಶಯ | : | **ಪರಿಸರ** |

### ಉಪ ಆಶಯಗಳು :

- ನದಿ ತೊರೆಗಳ ಸೌಂದರ್ಯ
- ಪರಿಸರ ಮಾಲಿನ್ಯ
- ಮನುಷ್ಯ ಮತ್ತು ಕಾಡು ಪ್ರಾಣಿಗಳ ಸಂಘರ್ಷ

### ಸಾಹಿತ್ಯ ಪ್ರಕಾರಗಳು

- ಕವನ
- ಕಾದಂಬರಿಯ ಭಾಗ
- ಅಂಕಣ ಬರಹ

### ಕಲಿಕಾ ಉದ್ದೇಶಗಳು:

- ಕವನ, ಕಥೆ, ಅಂಕಣ ಬರಹ ಇತ್ಯಾದಿಗಳಲ್ಲಿ ಅಭಿವ್ಯಕ್ತವಾಗಿರುವ ತೊರೆ ಇತ್ಯಾದಿ ಜಲಮೂಲಗಳ ಸೌಂದರ್ಯಾಸ್ವಾದನೆ ಹಾಗೂ ಪರಿಸರ ಶುಚಿತ್ವ, ಮನುಷ್ಯ – ಕಾಡುಪ್ರಾಣಿಗಳ ನಡುವಿನ ಸಂಘರ್ಷ ಇತ್ಯಾದಿಗಳನ್ನು ಅರ್ಥೈಸಿಕೊಂಡು, ವಿಶ್ಲೇಷಿಸಿ ವಿವಿಧ ಭಾಷಾ ವ್ಯವಹಾರ ರೂಪಗಳಲ್ಲಿ ಅಭಿವ್ಯಕ್ತಗೊಳಿಸುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| **1. ಹೋಗುವೆನು ನಾ** | ● ನದಿ, ತೊರೆಗಳಂತಹ ಜಲಮೂಲಗಳ ಸಕಲ ಜೀವಜಾಲಗಳಿಗೆ ಅನಿವಾರ್ಯವಾಗಿದೆ.<br>● ನದಿಗಳು ನಮ್ಮ ಸಾಂಸ್ಕೃತಿಕ ಬದುಕಿನ ಪ್ರತೀಕಗಳಾಗಿವೆ.<br>● ಕಾಡು ಪ್ರಾಣಿಗಳಿಗೂ ಪ್ರಕೃತಿಯಲ್ಲಿ ಜೀವಿಸುವ ಹಕ್ಕಿದೆ.ಅವುಗಳ ನಿರಾಂತಕವಾದ ಬದುಕಿಗೆ ಅಡ್ಡಿ ಆತಂಕಗಳು ಎದುರಾಗುತ್ತಿವೆ. | ● ವಿವಿಧ ಸಾಹಿತ್ಯ ರೂಪಗಳ ಓದುವಿಕೆ,ಆಸ್ವಾದನೆ, ವಿಶ್ಲೇಷಣೆಯ ಸಾಮರ್ಥ್ಯ<br>● ಓದಿದ ಮತ್ತು ವಿಶ್ಲೇಷಣೆ ನಡೆಸಿ ಕಂಡುಕೊಂಡ ವಿಚಾರಧಾರೆಗಳನ್ನು ಅಭಿವ್ಯಕ್ತಗೊಳಿಸಲು ವಿವಿಧ ಭಾಷಾ ರೂಪಗಳನ್ನು ಸಮರ್ಪಕವಾಗಿ ಬಳಸುವುದು. | ● ಜಲಮೂಲಗಳನ್ನು ಸಂರಕ್ಷಿಸುವ ಮನೋಭಾವ<br>● ಅರಣ್ಯ ಸಂರಕ್ಷಣೆಯ ಮನೋಭಾವ<br>● ಕಾಡುಪ್ರಾಣಿಗಳನ್ನು ಸಂರಕ್ಷಿಸುವ ಮನೋಭಾವ ಬೆಳೆಸುವುದು.<br>● ಸಾಹಿತ್ಯಕೃತಿಗಳನ್ನು ಓದಿ ಆಸ್ವಾದಿಸುವ ಮನೋಭಾವ ಬೆಳೆಸುವುದು.<br>● ಪ್ರಕೃತಿಯನ್ನು ವೀಕ್ಷಿಸುವ ಮತ್ತು ಆಸ್ವಾದಿಸುವ ಮನೋಭಾವ ಬೆಳೆಸುವುದು. | ● ಸಂಧಿ ಪದಗಳು, ಪರ್ಯಾಯ ಪದಗಳು, ಪ್ರಾಸ, ಸರ್ವನಾಮ<br>● ಸಂಸ್ಕೃತ – ತದ್ಭವ | ● ಕಥೆ<br>● ಕವನ<br>● ಕರಪತ್ರ<br>● ಪತ್ರಿಕಾವರದಿ<br>● ಭಿತ್ತಿಪತ್ರ<br>● ಲೇಖನ<br>● ವರ್ಣನೆ<br>● ಪ್ರಬಂಧ<br>● ಘೋಷಣ ವಾಕ್ಯ<br>● ಜಾಹೀರಾತು<br>● ಕಿರುಚಿತ್ರ | ● ಬೆಟ್ಟದ ಜೀವ ಕಾದಂಬರಿ<br>● ಕುವೆಂಪುರವರ ಕವನ ಸಂಕಲನ<br>● ವಿಡಿಯೋಗಳು<br>● ಹಾಡಿನ ಆಡಿಯೋ | ● ರಾಗ, ತಾಳಬದ್ಧವಾಗಿ ಹಾಡುವಿಕೆ<br>● ಆಸ್ವಾದನ ಟಿಪ್ಪಣಿ<br>● ಸ್ವಾರಸ್ಯ ಟಿಪ್ಪಣಿ<br>● ಕರಪತ್ರ<br>● ಪ್ರಬಂಧ<br>● ಕಿರುಚಿತ್ರ |
| **2. ಬೆಟ್ಟದ ಜೀವ** | ● ನದಿ ತೊರೆಗಳ ಸೌಂದರ್ಯ, ಕಾಡು ಪ್ರಾಣಿಗಳ ಕುರಿತಾದ ಕಥೆ, ಕವಿತೆಗಳು ಕನ್ನಡ ಸಾಹಿತ್ಯದಲ್ಲಿವೆ. | | | | | | |
| **3. ಗ್ರಾಮ ಭಾರತ** | ● ಜಲಮೂಲಗಳನ್ನು ಕಲುಷಿತಗೊಳಿಸುವುದು ಜೀವಜಾಲಗಳ ಬದುಕಿಗೆ ಸಂಚಕಾರ ತಂದೊಡ್ಡುತ್ತದೆ. | | | | | | |

## ಪ್ರವೇಶ ಚಟುವಟಿಕೆ

ಪ್ರವೇಶ ಚಟುವಟಿಕೆಯಾಗಿ ಕೊಟ್ಟ ಕೊಲಾಶನ್ನು ವಿದ್ಯಾರ್ಥಿಗಳು ಸೂಕ್ಷ್ಮವಾಗಿ ಗಮನಿಸಲಿ. ಕೊಲಾಶ್ ನ ವಿಷಯಗಳನ್ನು ಓದಲಿ. ಈ ಕೆಳಗಿನ ಪ್ರಶ್ನೆಗಳನ್ನು ವಿದ್ಯಾರ್ಥಿಗಳ ಮುಂದಿಡುವುದು.

ಯಾವ ವಿಷಯದ ಬಗ್ಗೆ ಕೊಲಾಶನ್ನು ರಚಿಸಲಾಗಿದೆ?

ಕೊಲಾಶ್ ನಿಂದ ಏನೆಲ್ಲ ವಿಚಾರಗಳನ್ನು ತಿಳಿಯಬಹುದು?

ಹಾಗಾದರೆ ಕೊಲಾಶ್ ನೀಡುವ ಸಂದೇಶವೇನು? ವಿದ್ಯಾರ್ಥಿಗಳು ಬರೆಯಲಿ. ಕೆಲವರು ಮಂಡಿಸಲಿ.

### ಸಂದೇಶ ಹೀಗೂ ಇರಬಹುದಲ್ಲವೇ?

ನಗರೀಕರಣದ ಕಾರಣದಿಂದಾಗಿ ಅರಣ್ಯನಾಶವಾಗುತ್ತಿದೆ. ಇದರಿಂದ ಕಾಡುಪ್ರಾಣಿಗಳು ನಾಡಿಗಿಳಿದು ಅಪಾರ ಹಾನಿಯುಂಟಾಗುತ್ತದೆ. ಹಾಗಾಗಿ ಪ್ರಕೃತಿಯ ಸಮತೋಲನವನ್ನು ಕಾಪಾಡಬೇಕು. ಅರಣ್ಯಸಂರಕ್ಷಣೆ ಮಾಡಬೇಕು.

## ಹೋಗುವೆನು ನಾ

ಕವನವನ್ನು ಮೌನವಾಗಿ ಓದಲು ವಿದ್ಯಾರ್ಥಿಗಳಿಗೆ ಸಮಯಾವಕಾಶ ನೀಡುವುದು. ವಿದ್ಯಾರ್ಥಿಗಳು ಕವನವನ್ನು ಬಾಯ್ದೆರೆಯಾಗಿ ಓದಲಿ. ಒಂದೊಂದು ಪದ್ಯವನ್ನು ಒಬ್ಬೊಬ್ಬರಿಂದ ಓದಿಸುವುದು. ಹೀಗೆ ತರಗತಿಯ ಎಲ್ಲ ವಿದ್ಯಾರ್ಥಿಗಳೂ ಓದಲಿ. ಕವನವನ್ನು ರಚಿಸಿದರವರು ಯಾರು? ಎಂದು ಪ್ರಶ್ನಿಸುವುದು. ಕವಿ ಪರಿಚಯ ಮಾಡಿಸುವುದು. ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡದ ಕವಿಗಳ ಹೆಸರುಗಳನ್ನು ವಿದ್ಯಾರ್ಥಿಗಳಿಂದ ಹೇಳಿಸಿ ಕರಿಹಲಗೆಯಲ್ಲಿ ಬರೆಯುವುದು. ಅವುಗಳ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡುವುದು. ಗುಂಪುಗಳಲ್ಲಿ ಕುಳಿತು ವಿದ್ಯಾರ್ಥಿಗಳು ಹಾಡಿಗೆ ರಾಗಸಂಯೋಜನೆ ಮಾಡಲಿ. ಹಾಡುವಾಗ ಗಮನಿಸಬೇಕಾದ ಅಂಶಗಳ ಬಗ್ಗೆ ಚರ್ಚಿಸುವುದು.

- ರಾಗ
- ಉಚ್ಛಾರ ಸ್ಪಷ್ಟತೆ
- ಗುಂಪಿನ ಎಲ್ಲರ ಸಕ್ರಿಯ ಪಾಲ್ಗೊಳ್ಳುವಿಕೆ
- ..........
- .........ಇತ್ಯಾದಿ

ನಿರ್ದಿಷ್ಟ ಸಮಯದ ಬಳಿಕ ಪ್ರತಿ ಗುಂಪಿನವರಿಂದಲೂ ಹಾಡಿಸುವುದು. ಒಂದು ಗುಂಪು ಹಾಡುವಾಗ ಇತರ ಗುಂಪಿನವರು ಆ ಗುಂಪಿಗೆ ಅಂಕಗಳನ್ನು ನೀಡಲಿ. ಎಲ್ಲ ಗುಂಪಿನವರು ಹಾಡಿದ ಬಳಿಕ ಉಳಿದ ಗುಂಪಿನವರು ತಾವು ನೀಡಿದ ಅಂಕ ಹಾಗೂ ಅದಕ್ಕೆ ಕಾರಣಗಳನ್ನು ಮಂಡಿಸಲಿ. ಉತ್ತಮವಾಗಿ ಹಾಡಿದ ಎಲ್ಲರನ್ನೂ ಅಭಿನಂದಿಸುವುದು. ಅಧ್ಯಾಪಕರು ಹಾಡನ್ನು ಹಾಡುವುದು. ಪದ್ಯದ ವಿಡಿಯೋ ತೋರಿಸುವುದು. ವಿದ್ಯಾರ್ಥಿಗಳ ಗುಂಪುಗಳಲ್ಲಿ ವಿಂಗಡಿಸಬೇಕಾದ ಪದಗಳು ಹಾಗೂ ನವೀನ ಪದಗಳನ್ನು ಗುರುತಿಸಲು ಹೇಳುವುದು. ಪದವಿಂಗಡಣೆ ಹಾಗೂ ನವೀನ ಪದಗಳ ಅರ್ಥ ಬರೆಯಲು ಹೇಳುವುದು. ಗುಂಪುಗಳಲ್ಲಿ ಚರ್ಚಿಸಿ ಸರಿಪಡಿಸಲಿ. ತರಗತಿಯಲ್ಲಿ ಮಂಡಿಸಲಿ. ಅಗತ್ಯವಿದ್ದರೆ ಅಧ್ಯಾಪಕರು ಪರಿಷ್ಕರಿಸಿ ಕರಿಹಲಗೆಯಲ್ಲಿ ಬರೆಯಲಿ. ವಿದ್ಯಾರ್ಥಿಗಳು ಪದ್ಯವನ್ನು ಮತ್ತೊಮ್ಮೆ ಮೌನವಾಗಿ ಓದಲಿ. ಗುಂಪುಗಳಲ್ಲಿ ಕುಳಿತು ಆಶಯ ಚರ್ಚೆ ನಡೆಸಲಿ. ಆಶಯಗ್ರಹಣಕ್ಕೆ ಸಹಾಯಕವಾಗುವಂತೆ ಈ ಕೆಳಗಿನ ಪ್ರಶ್ನಾವಳಿಗಳನ್ನು ಉಪಯೋಗಿಸಬಹುದು.

- ಕವನದ ವಸ್ತು ಯಾವುದು? ಕವನದಲ್ಲಿ ಯಾವುದರ ಬಗ್ಗೆ ಹೇಳಲಾಗಿದೆ?
- ಕವಿತೆಯ ನಿರೂಪಕ ಮಲೆನಾಡಿಗೆ ಹೋಗಲು ಬಯಸಲು ಕಾರಣವೇನು?
- ಮಲೆನಾಡನ್ನು "ಮಧುರ ಸುಂದರ ಶೈಲವನ ಲಲಿತಾಂಗ" ಎಂದು ಕವಿ ಹೇಳಲು ಕಾರಣವೇನು?
- “ಅಲ್ಲಿ ಸಗ್ಗವೆ ಸೂರೆ ಹೋಗಿದೆ" ಎಂದು ಕವಿ ಹೇಳಲು ಕಾರಣವೇನು?
- ..............................
- ..............................
- ..............................

ಆಶಯವನ್ನು ಗುಂಪುಗಳೊಳಗೆ ಓದಿ ಪರಿಷ್ಕರಿಸಲಿ. ಬಳಿಕ ಗುಂಪಿನಿಂದ ಒಬ್ಬರಂತೆ ತರಗತಿಯಲ್ಲಿ ಮಂಡಿಸಲಿ. ಎಲ್ಲ ಗುಂಪುಗಳ ಮಂಡನೆ ಮುಗಿದ ಬಳಿಕ ಅಧ್ಯಾಪಕರು ಆಶಯದ ಮಾದರಿಯೊಂದನ್ನು ನೀಡುವುದು.

### ಆಶಯ ಈ ರೀತಿ ಇರಬಹುದಲ್ಲವೇ?

ಕವಿ ಕುವೆಂಪುರವರ ‘ಹೋಗುವೆನು ನಾ’ ಕವನವು ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ವರ್ಣಿಸುತ್ತದೆ. ಕವಿತೆಯ ನಿರೂಪಕ ಮಲೆನಾಡಿನಲ್ಲಿ ಹುಟ್ಟಿ ಬೆಳೆದವನು. ಈಗ ಉದ್ಯೋಗ ಅಥವಾ ಇನ್ನಾವುದೋ ಕಾರಣಕ್ಕಾಗಿ ಬಯಲುಸೀಮೆಯ ನಗರಪ್ರದೇಶಕ್ಕೆ  ಬಂದು ನೆಲೆಸಿದ್ದಾನೆ. ಮಲೆನಾಡಿನ ಸುಂದರವಾದ ಪ್ರಕೃತಿಯ ಮಡಿಲಲ್ಲಿ ಬೆಳೆದ ನಿರೂಪಕನಿಗೆ ಬಯಲುಸೀಮೆಯ ನಗರ ನಾಗರಿಕತೆ ಬಹುಬೇಗ ಬೇಸರವನ್ನು ಮೂಡಿಸಿದೆ. ಹಾಗಾಗಿ ಅವನು ಮಲೆನಾಡಿಗೆ ಹಿಂತಿರುಗುವ ಬಗ್ಗೆ ಯೋಚಿಸುತ್ತಾನೆ. ಅಲ್ಲಿನ ಸೌಂದರ್ಯ ಹಾಗೂ ತನ್ನನ್ನು ಸೆಳೆಯುವ ಅಲ್ಲಿನ

ವಿಶೇಷತೆಗಳ ಕುರಿತು ಅವನು ಕವಿತೆಯಲ್ಲಿ ವಿವರಿಸುತ್ತಾನೆ.

'ಹೋಗುವೆನು ನಾ ಹೋಗುವೆನು ನಾ' ಎಂದು ಕವಿತೆ ಆರಂಭಗೊಳ್ಳುತ್ತದೆ. ನಿರೂಪಕನಿಗೆ ಮಲೆನಾಡಿಗೆ ಹಿಂತಿರುಗುವ ಹಂಬಲದ ಆಳವನ್ನು ಓದುಗರಿಗೆ ಮನದಟ್ಟುಗೊಳಿಸಲು ಈ ದ್ವಿರುಕ್ತಿ ಪ್ರಯೋಗದಿಂದ ಸಾಧ್ಯವಾಗಿದೆ. ಮಲೆನಾಡು ಎನ್ನುವುದು ಅವನಿಗೆ ಒಲುಮೆಯ ಗೂಡು; ಅದು ಬೆಟ್ಟಗುಡ್ಡಗಳ ನಾಡು, ವರ್ಷಪೂರ್ತಿ ಮಳೆಸುರಿಯುವ ಮಳೆಯ ಬೀಡು; ಹಾಗಾಗಿಯೇ ಅದು ಸಂಪದ್ಭರಿತವಾದ ಚೆಲುವಿನ ಭೂಮಿ. ಬೆಟ್ಟಕಣಿವೆಗಳ ಮಲೆನಾಡಿನಲ್ಲಿ ಕಾಡು ಹೆಚ್ಚಿದೆ; ಹಸುರು ಸೊಂಪಾಗಿ ಬೆಳೆದಿದೆ. ಹಸುರು ಹೆಚ್ಚಿರುವ ಕಾರಣ ಬಿಸಿಲು ಸುಡುವುದಿಲ್ಲ. ಅಲ್ಲಿ ಬಿಸಿಲು ಬೆಳದಿಂಗಳಂತೆ ತಂಪಾಗಿದೆ. ಸದಾ ಕಾಲವು ಹಕ್ಕಿಗಳ ಇಂಪಾದ ಗಾಯನ ಮನಸಿಗೆ ಮುದ ನೀಡುತ್ತದೆ.

ಅದು ರವಿಕಿರಣವು ತನ್ನ ಪ್ರಭಾವವನ್ನು ತೋರಿಸಿದ ನಿರ್ಜನವಾದ ಅರಣ್ಯ ಪ್ರದೇಶವಾಗಿದೆ. ತನ್ನ ಬಳಿಗೆ ಬರುವ ಮುಗಿಲುಗಳನ್ನು ಅಲೆದಾಡುವಂತೆ ಮಾಡುತ್ತ ನಿಂತಿರುವ ಧೀರವಾದ ಪರ್ವತ ಶೃಂಗ ಅಲ್ಲಿದೆ. ಅಲ್ಲಿ ಬೀಸುವ ಗಾಳಿಯು ವಿಶೇಷವಾದುದು. ಕಾಡಿನ ಹಕ್ಕಿಗಳ ಸ್ವರದಿಂದ ತರಂಗಿತವಾದ ಪಾವನವಾದ ಪವನವದು. ಅದರ ಸಹವಾಸ ಮಾಡಲು(ಹಕ್ಕಿಗಳ ಕೂಗು ಗಾಳಿಯಲ್ಲಿ ಅಲೆಗಳನ್ನು ಎಬ್ಬಿಸುತ್ತದೆ). ಅದು ಮಧುರ ಹಾಗೂ ಸುಂದರವಾದ ಬೆಟ್ಟ ಹಾಗೂ ಅರಣ್ಯಗಳೆಂಬ ಲಲಿತವಾದ ಅಂಗಗಳಿಂದ ಕೂಡಿದೆ.

ಅಲ್ಲಿ ವಿಶೇಷವಾದ ಪ್ರಾಣಿ ಪಕ್ಷಿಗಳೂ ಗಿಡಮರಗಳೂ ಇವೆ. ಕಾಜಾಣ, ಕೋಗಿಲೆ, ತೇನೆ, ಗಿಳಿ, ಕಾಮಳ್ಳಿ ಮೊದಲಾದ ಹಕ್ಕಿಗಳಿವೆ. ಸೀತಾಳಿ, ಕೇದಗೆ, ಬಕುಳ, ಮಲ್ಲಿಗೆ ಮೊದಲಾದ ಪರಿಮಳ ಸೂಸುವ ಹೂಗಳ ಗಿಡ ಬಳ್ಳಿಗಳು ಇಲ್ಲಿವೆ. ಅಲ್ಲಿ ನೀಲಿ ಮತ್ತು ಹಸುರು ಈ ಎರಡು ಬಣ್ಣಗಳೇ ಮೇಲುಗೈಸಾಧಿಸಿವೆ. ಯಾಕೆಂದರೆ ಮೇಲೆ ನೋಡಿದರೆ ನೀಲಿ ಬಣ್ಣದ ಆಕಾಶ ಹಾಗೂ ಕೆಳಗಡೆ ದಟ್ಟ ಹಸುರು ಅರಣ್ಯವಿದೆ. ಹಾಗಾಗಿ ಎತ್ತ ನೋಡಿದರತ್ತ ಕಣ್ಣುಗಳಿಗೆ ನೀಲಿ ಹಾಗೂ ಹಸುರು ಬಣ್ಣಗಳೇ ಕಾಣಿಸುತ್ತವೆ. ಮಾತ್ರವಲ್ಲ, ಅಲ್ಲಿ ಸ್ವರ್ಗವೇ ಸೂರೆ ಹೋದಂತಿದೆ. ಮಲೆನಾಡು ಇಂದ್ರನ ಉದ್ಯಾನವಾದ ನಂದನವನವೇ ಆಗಿದೆ.

ಅಲ್ಲಿ ಕಾನನದ ಮಧ್ಯೆ ತುಂಗಾನದಿ ಹರಿಯುತ್ತಿದ್ದಾಳೆ. ಕಾನನದ ನಡುವೆಯಿರುವ ತುಂಗಾನದಿಯು ನೋಡುವ ಕಣ್ಣಿಗೆ ಮುತ್ತನ್ನಿಡುತ್ತಾಳೆ, ಅಂದರೆ ರೋಮಾಂಚನವನ್ನು ಉಂಟುಮಾಡುತ್ತಾಳೆ. ಆ ನದಿಯ ದಡದಲ್ಲಿ ಕಿಕ್ಕಿರಿದು ಬೆಳೆದ ಬಿದಿರು ಮೆಳೆಗಳ ಹಸುರು ಚಾಮರ ತಣ್ಣನೆಯ ಬೀಸುಗಾಳಿಗೆ ಒಲೆಯುತ್ತಿರುವಾಗ, ತಲೆದೂಗುತ್ತಿರುವಾಗ ಭದ್ರಾನದಿ ತುಂಬಿ ಹರಿಯುತ್ತಾಳೆ. ಆ ನದಿಯಲ್ಲಿ ಮೂಡುವ ಹೊನಲುಗಳು ಬೆಟ್ಟದ ವಿಸ್ತಾರದ ಎದುರು ಬಹಳ ಸಣ್ಣದಾಗಿ ಕಾಣಿಸುತ್ತವೆ.

ಇಲ್ಲಿ ನನಗೆ ಬೇಸರವಾಗಿದೆ, ಆದುದರಿಂದ ನಾನು ಅಲ್ಲಿಗೆ ಹೋಗುವೆ. ಕಾಡುಮಲೆಗಳನ್ನು ಅಲೆಯುವ ಹುಚ್ಚು ಹೃದಯದಲ್ಲಿ ಬೆಂಕಿಯಂತೆ ಉರಿಯುತ್ತಿದೆ. ಹಾಗಾಗಿ ಆ ಬೇಗೆಯನ್ನು ತಣಿಸಲು ಮಲೆನಾಡಿಗೆ ನಾನು ಹೋಗಿಯೇ ಹೋಗುತ್ತೇನೆ.

ನಗರ ನಾಗರಿಕತೆಯ ಗಲಿಬಿಲಿ ಅಲ್ಲಿಗೆ ತಲುಪುವುದಿಲ್ಲ. ದೇಶದೇಶದ ವೈರದ ಸುದ್ದಿಯೊಂದೂ ತಿಳಿಯದು. ತಿಳಿಯದಿರುವುದೆ ತಿಳಿವು ಎನ್ನುವ ಸತ್ಯ ಮಲೆನಾಡಿಗೆ ಬಂದಾಗ ತಿಳಿಯುತ್ತದೆ. ತಿಳಿವು ನೋವನ್ನು ಕೊಡುತ್ತದೆ. ಹಾಗಾಗಿ ತಿಳಿಯದಿರುವುದೆ ಜಾಣ್ಮೆ ಎನ್ನುವ ಅರಿವು ಉಳಿಯುತ್ತದೆ.

- **ಆಸ್ವಾದನ ಟಿಪ್ಪಣಿ ಬರೆಯುವುದು**

ಪದ್ಯ ನಿಮಗೆ ಇಷ್ಟವಾಯಿತೇ? ಇಷ್ಟವಾಗಲು ಕಾರಣವೇನು ಎಂದು ಪ್ರಶ್ನಿಸುವುದು. ಹಾಗಾದರೆ ಇದರಲ್ಲಿ ನಿಮಗೆ ಇಷ್ಟವಾದ ಸಾಲುಗಳು ಯಾವುವು? ಎಂದು ಪ್ರಶ್ನಿಸುವುದು. ಸಾಲುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಈ ಸಾಲುಗಳ ವಿಶೇಷತೆಗಳೇನು ಎಂದು ಪ್ರಶ್ನಿಸುವುದು. ಹಾಗಾದರೆ ಈ ಸಾಲುಗಳ ಆಸ್ವಾದನ ಟಿಪ್ಪಣಿ ಬರೆಯುವುದು ಹೇಗೆ? ಆಸ್ವಾದನ ಟಿಪ್ಪಣಿಯಲ್ಲಿರಬೇಕಾದ ಅಂಶಗಳು ಯಾವುವು? ಎಂದು ಪ್ರಶ್ನಿಸುವುದು. ವಿದ್ಯಾರ್ಥಿಗಳು ಹೇಳಿದ ಅಂಶಗಳನ್ನು ಕರಿಹಲಗೆಯಲ್ಲಿ ಬರೆಯುವುದು.

- ಕವಿ, ಕವಿತೆಯ ಹೆಸರು
- ಕೊಟ್ಟ ಸಾಲುಗಳ ಆಶಯ\
- ಸ್ವಾರಸ್ಯದ ಅಂಶಗಳು
- ಧ್ವನಿ / ಉಪಮೆ / ಹೋಲಿಕೆಗಳು
- ಪ್ರಾಸ, ಅನುಪ್ರಾಸ
- .................
- .................

ಪುಸ್ತಕದಲ್ಲಿ ಕೊಟ್ಟಿರುವ ಸಾಲುಗಳ ಆಸ್ವಾದನ ಟಿಪ್ಪಣಿಯನ್ನು ಗುಂಪುಗಳಲ್ಲಿ ಚರ್ಚಿಸಿ ಬರೆಯಲಿ. ಪ್ರತಿ ಗುಂಪಿನಿಂದ ಒಬ್ಬರು ಮಂಡಿಸಲಿ. ಅವುಗಳ ಆಧಾರದಲ್ಲಿ ತಮ್ಮ ಬರಹಗಳನ್ನು ವಿದ್ಯಾರ್ಥಿಗಳು ಪರಿಷ್ಕರಿಸಲಿ. ಬಳಿಕ. ಅಧ್ಯಾಪಕ ಮಾದರಿಯೊಂದನ್ನು ವಿದ್ಯಾರ್ಥಿಗಳ ಮುಂದಿಡುವುದು.

## ಆಸ್ವಾದನ ಟಿಪ್ಪಣಿ ಹೀಗೆಯೂ ಇರಬಹುದಲ್ಲವೇ?

ಕವಿ ಕುವೆಂಪುರವರ ಹೋಗುವೆನು ನಾ ಕವನದ ಈ ಸಾಲುಗಳಲ್ಲಿ ಮಲೆನಾಡಿಗೆ ಹಿಂತಿರುಗಿ ಹೋಗುವ ಕವಿತೆಯ ನಿರೂಪಕನ ಅದಮ್ಯ ಬಯಕೆ ವ್ಯಕ್ತವಾಗುತ್ತದೆ. ಬಯಲುನಾಡಿನ ಏಕತಾನತೆಯಿಂದ ಬೇಸರಗೊಂಡ ಆತ ಮಲೆನಾಡಿಗೆ ಹಿಂತಿರುಗಿ ಹೋಗಲು ಬಯಸುತ್ತಾನೆ. ಅಲ್ಲಿ ಹೋಗಿ ಕಾಡುಮಲೆಗಳನ್ನು ಅಲೆಯಲು ಅವನ ಮನಸು ಬಯಸುತ್ತದೆ. ಮಲೆನಾಡು ಅವನ ಒಲುಮೆಯ ಗೂಡು. ಅದು ಸೊಂಪಾದ ಹಸುರಿನಿಂದ ಕೂಡಿದೆ. ಅಲ್ಲಿ ಬೀಳುವ ಬಿಸಿಲು ತಂಪಾಗಿದೆ. ಅಲ್ಲಿ ಕೇಳುವ ಹಕ್ಕಿಗಳ ಗಾಯನ ಇಂಪಾಗಿದೆ.

ಈ ಸಾಲುಗಳಲ್ಲಿ ಕವಿ ಮಲೆನಾಡಿನ ವಿಶೇಷತೆಗಳನ್ನು ವರ್ಣಿಸುತ್ತಾ ಆ ಮೂಲಕ ಮಲೆನಾಡಿನ ಕುರಿತಾಗಿ ತನಗಿರುವ ಪ್ರೀತಿ ಅಭಿಮಾನಗಳನ್ನು ಓದುಗರ ಮನಮುಟ್ಟುವಂತೆ ವರ್ಣಿಸಿದ್ದಾರೆ. 'ಅಲ್ಲಿಗೈದುವೆನಲ್ಲಿಗೈದುವೆನು' ಎಂಬ ದ್ವಿರುಕ್ತಿ ಆದಷ್ಟು ಬೇಗ ಮಲೆನಾಡಿಗೆ ಹಿಂತಿರುಗಿ ಹೋಗುವ ನಿರೂಪಕನ ಮನದ ಹಂಬಲವನ್ನೂ ನಿರ್ಧಾರವನ್ನೂ ಹಿಡಿದಿಡುತ್ತದೆ. 'ಕಾಡುಮಲೆಗಳನಲೆವ ಹುಚ್ಚಿನ ಕಿಚ್ಚು ಹೃದಯದಿ ರೇಗಿದೆ' - ಕಾಡುಮಲೆಗಳನು ಅಲೆಯುವ ಹುಚ್ಚು ಸಾಧಾರಣವಾಗಿ ಪ್ರಕೃತಿ ಪ್ರಿಯರಿಗಿರುತ್ತದೆ. ಆದರೆ ಇಲ್ಲಿ ಕಾಡುಮಲೆಗಳನಲೆವ ಹುಚ್ಚು ಕಿಚ್ಚಿನಂತೆ ಹಬ್ಬುತ್ತಿದೆ. ಹೃದಯವನ್ನು ಸುಡುತ್ತಿದೆ. ಮಾತ್ರವಲ್ಲ ಅದು 'ರೇಗಿದೆ'. ಸಿಟ್ಟಿನ ಒತ್ತಡ ಹೆಚ್ಚಾದಾಗ ರೇಗುವುದು ಸಾಮಾನ್ಯ. ಅದೇ ರೀತಿಯಲ್ಲಿ ಇಲ್ಲಿ ಕಾಡುಮಲೆಗಳನಲೆವ ಹುಚ್ಚಿನ ಕಿಚ್ಚು ಹೆಚ್ಚಾಗಿ ಹೃದಯದಲ್ಲಿ ರೇಗಿದೆ. ಹಾಗಾಗಿ ನಿರೂಪಕ ತನ್ನ ಒಲುಮೆಯ ಗೂಡಿಗೆ ಹೋಗುವೆನು ನಾ ಹೋಗುವೆನು ನಾ ಎಂದು ಉತ್ಸಾಹ ಪ್ರಕಟಿಸುತ್ತಾರೆ. ಅಲ್ಲಿ ಹಸುರು ಸೊಂಪಾಗಿದೆ, ಸಹಜವಾಗಿಯೇ ಬಿಸಿಲು ತಂಪಾಗುತ್ತದೆ. ಆಗಿದೆ - ರೇಗಿದೆ, ಗೂಡಿಗೆ- ಕೂಡಿಗೆ ಮೊದಲಾದ ಅಂತ್ಯಪ್ರಾಸ ಪದಗಳು ಹಾಗೂ ಅಲ್ಲಿ - ಇಲ್ಲಿ, ಮಲೆ- ಅಲೆ, ಹುಚ್ಚು - ಕಿಚ್ಚು.ಸೊಂಪು, ತಂಪು, ಇಂಪು ಮೊದಲಾದ ಅನುಪ್ರಾಸ ಪದಗಳು ಸಾಲಿನ ಸೊಗಸನ್ನು ಹೆಚ್ಚಿಸಿವೆ.

- **ಸ್ವಾರಸ್ಯ ಬರೆಯುವುದು**

ಪುಸ್ತಕದಲ್ಲಿ ಕೊಟ್ಟಿರುವ ಸಾಲುಗಳನ್ನು ವಿದ್ಯಾರ್ಥಿಗಳಲ್ಲಿ ಬಾಯ್ದೆರೆಯಾಗಿ ಓದಿಸುವುದು. ಬಳಿಕ ಆ ಸಾಲುಗಳ ಸ್ವಾರಸ್ಯದ ಅಂಶಗಳನ್ನು ವಿದ್ಯಾರ್ಥಿಗಳು ಗುರುತಿಸಿ ಹೇಳಲಿ. ಅವುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಸ್ವಾರಸ್ಯ ಬರವಣಿಗೆಯ ಬಗ್ಗೆ ತರಗತಿ ಚರ್ಚೆ ನಡೆಸುವುದು. ಬಳಿಕ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಸ್ವಾರಸ್ಯ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಉತ್ತಮವಾಗಿ ಬರೆದವರನ್ನು ಅಭಿನಂದಿಸುವುದು. ಬಳಿಕ ಅಧ್ಯಾಪಕ ಮಾದರಿಯೊಂದನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು. ಸ್ವಾರಸ್ಯ ಬರವಣಿಗೆ ಹೀಗೆಯೂ ಇರಬಹುದಲ್ಲವೇ?

ವನ ವಿಹಂಗಸ್ವನ ತರಂಗಿತ ಪವನ ಪಾವನ ಸಂಗಕೆ

ಹೋಗುವೆನು ನಾ ಮಧುರ ಸುಂದರ ಶೈಲವನ ಲಲಿತಾಂಗಕೆ

ಈ ಸಾಲುಗಳಲ್ಲಿ ಕವಿ ತಾನು ಹಿಂತಿರುಗಲು ಬಯಸಿದ ಮಲೆನಾಡಿನ ವಿಶೇಷತೆಗಳನ್ನು ಹೇಳಿದ್ದಾರೆ. ಮೊದಲ ಸಾಲಿನಲ್ಲಿ ಮಲೆನಾಡಿನಲ್ಲಿ ಬೀಸುವ ಗಾಳಿಯ ವಿಶೇಷತೆಯನ್ನು ಮನೋಹರವಾಗಿ ವರ್ಣಿಸಿದ್ದಾರೆ. ಕಾಡಿನ ಪಕ್ಷಿಗಳ ಕೂಜನದಿಂದ ತರಂಗಗಳೆದ್ದ ಪವನವು ಪಾವನವಾಗಿದೆ. ತರಂಗ ಚಲನೆಯನ್ನು ಸೂಚಿಸುತ್ತದೆ. ಚಲಿಸುವುದು ಯಾವಾಗಲೂ ಪರಿಶುದ್ಧವಾಗಿರುತ್ತದೆ. ಅಂತಹ ಪವನದ ಸಂಗವನ್ನು ಸಹಾವಾಸವನ್ನು ಕವಿ ಬಯಸುತ್ತಾರೆ. ಅಲ್ಲಿ ಶೈಲವನವಿದೆ. ಅಂದರೆ ಬೆಟ್ಟ ಕಾಡುಗಳಿವೆ. ಅವು ಮಧುರವೂ ಸುಂದರವೂ ಆಗಿವೆ. ಬೆಟ್ಟ ಕಾಡುಗಳು ಸಾಧಾರಣವಾಗಿ ಕಠಿಣವಾದುದು ಎಂದು ಭಾವವಿದೆ. ಆದರೆ ಇಲ್ಲಿ ಕಾಡುಬೆಟ್ಟಗಳನ್ನು ಲಲಿತಾಂಗ ಎಂದು ಕವಿ ವರ್ಣಿಸಿರುವುದು ವಿಶೇಷವಾಗಿದೆ.

ನೀಲಿ ಬಾನಲಿ ; ಹಸುರು ನೆಲದಲಿ;ಕಂಗಳೆರಡನೆ ಬಲ್ಲವು;

ಅಲ್ಲಿ ಸಗ್ಗವೆ ಸೂರೆ ಹೋಗಿದೆ; ನಂದನವೆ ನಾಡೆಲ್ಲವು

ಈ ಸಾಲುಗಳಲ್ಲಿ ಮಲೆನಾಡಿನ ಸೌಂದರ್ಯವನ್ನು ವರ್ಣಿಸಿದ್ದಾರೆ. ಮಲೆನಾಡಿನ ಕಾಡು ದಟ್ಟ ಹಸುರಿನಿಂದ ಕೂಡಿದ್ದರೆ ಆಕಾಶ ನೀಲಿ ಬಣ್ಣದಿಂದ ಕೂಡಿದೆ. ಕೆಳಗೆ ಹಚ್ಚ ಹಸಿರು, ಮೇಲೆ ನೀಲಾಕಾಶ. ಹಾಗಾಗಿ ಅಲ್ಲಿನ ಜನರ ಕಣ್ಣುಗಳಿಗೆ ಹಸುರು ಮತ್ತು ನೀಲಿ ಈ ಎರಡು ಬಣ್ಣಗಳು ಮಾತ್ರವೇ ಪರಿಚಿತ. ಮಲೆನಾಡು ಸ್ವರ್ಗ ಸಮಾನ. ಸ್ವರ್ಗವನ್ನೇ ಸೂರೆ ಮಾಡಿದಂಥ ಸೌಂದರ್ಯ ಅಲ್ಲಿಯದ್ದು. ಆ ನಾಡೆಲ್ಲ ಇಂದ್ರನ ಉದ್ಯಾನ ನಂದನವನವಾಗಿದೆ.

- **ಕರಪತ್ರ ರಚನೆ**

ವಿವಿಧ ಸಂದರ್ಭಗಳಲ್ಲಿ ರಚಿಸಿದ ಕರಪತ್ರದ ಮಾದರಿಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು.

ಕರಪತ್ರದ ಸ್ವರೂಪದ ಬಗ್ಗೆ ಚರ್ಚಿಸುವುದು. ಕರಪತ್ರದಲ್ಲಿ ಏನೇನು ಇರಬೇಕು ಎನ್ನುವುದನ್ನು ಕರಿಹಲಗೆಯಲ್ಲಿ ಗುರುತಿಸುವುದು.

- 
- 
- 
- 

ಜಲಮೂಲಗಳು ಮಲಿನವಾಗಲು ಕಾರಣಗಳೇನು? ಹೀಗೆ ಮಲಿನವಾಗುವುದರಿಂದ ಉಂಟಾಗುವ ತೊಂದರಗಳೇನು? ಪರಿಹಾರಗಳೇನು ಎನ್ನುವ ವಿಷಯಗಳ ಕುರಿತು ತರಗತಿಯಲ್ಲಿ ಚರ್ಚೆ ನಡೆಸುವುದು. ಬಳಿಕ ಗುಂಪುಗಳಲ್ಲಿ ಕರಪತ್ರ ತಯಾರಿಸಲು ಹೇಳುವುದು. ನಿರ್ದಿಷ್ಟ ಸಮಯದ ನಂತರ ಮಂಡನೆ. ಉತ್ತಮವಾಗಿ ಬರೆದವರನ್ನು ಅಭಿನಂದಿಸುವುದು. ಅಧ್ಯಾಪಕರ ಮಾದರಿಯನ್ನು ಪ್ರದರ್ಶಿಸುವುದು.

**ಕರಪತ್ರ ಹೀಗೂ ಇರಬಹುದಲ್ಲವೇ?**

**ಮಲಿನಗೊಳಿಸದಿರಿ ಜಲಮೂಲಗಳ; ಉಳಿಸಿರಿ ಜೀವಜಾಲಗಳ**

ಪ್ರಿಯರೇ,

ಜಲ ಮಾಲಿನ್ಯವು ಇಂದು ನಾವು ಎದುರಿಸುತ್ತಿರುವ ಪ್ರಧಾನ ಸಮಸ್ಯೆಗಳಲ್ಲೊಂದಾಗಿದೆ. ಶುದ್ಧ ಜಲ ಎಲ್ಲ ಜೀವಜಾಲಗಳಿಗೆ ಅತ್ಯಗತ್ಯವಾಗಿದೆ. ಮನುಷ್ಯನೆಂತೋ ಅಂತೆಯೇ ಪ್ರಕೃತಿಯ ಉಳಿದ ಪ್ರಾಣಿಪಕ್ಷಿಗಳೂ ನೀರಿಗಾಗಿ ಪ್ರಕೃತಿಯ ಜಲಮೂಲಗಳನ್ನೇ ಅವಲಂಬಿಸಿವೆ. ಇಂತಹ ಅತ್ಯಮೂಲ್ಯವಾದ ಜಲಮೂಲಗಳು ಮನುಷ್ಯನ ವಿವಿಧ ಬೇಜವಾಬ್ದಾರಿಯುತ ಕಾರ್ಯಚಟುವಟಿಕೆಗಳಿಂದಾಗಿ ಇಂದು ಮಲಿನಗೊಂಡು ಉಪಯೋಗಶೂನ್ಯವಾಗುತ್ತಿವೆ.

ಅಭಿವೃದ್ಧಿಯ ಹೆಸರಿನಲ್ಲಿ ಹೆಚ್ಚುತ್ತಿರುವ ನಗರಗಳು, ಕಾರ್ಖಾನೆಗಳು, ಜನವಾಸಕೇಂದ್ರಗಳು ಜಲಮಾಲಿನ್ಯಕ್ಕೆ ಗಮನಾರ್ಹ ಕೊಡುಗೆಗಳನ್ನು ನೀಡುತ್ತಿವೆ. ಶುದ್ಧೀಕರಿಸಲು ಸಾಧ್ಯವಾಗದಷ್ಟು ಕೊಳಕು ತುಂಬಿ ತುಳುಕುತ್ತಿದೆ.

ಅಂತರ್ಜಲಮಟ್ಟ ಊಹೆಗೂ ನಿಲುಕದ ರೀತಿಯಲ್ಲಿ ಕುಸಿಯುತ್ತಿರುವ ಈ ಕಾಲಘಟ್ಟದಲ್ಲಿ ಅಳಿದುಳಿದ ಜಲಮೂಲಗಳನ್ನಾದರೂ ಸಂರಕ್ಷಿಸುವುದು ನಮ್ಮ ಮೊದಲ ಕರ್ತವ್ಯವಾಗಿದೆ. ಅದಕ್ಕಾಗಿ ನಾವೇನು ಮಾಡಬಹುದು ಎಂದು ಯೋಚಿಸುವ ಕಾಲ ಈಗಾಗಲೇ ಮೀರಿದೆ. ಹವಾಮಾನ ವೈಪರೀತ್ಯದಿಂದ ಬೇಸಗೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರವೇಳುತ್ತಿದೆ.

ನೀರು ಅಮೂಲ್ಯವಾದುದು. ಹಾಗಾಗಿ ಅದನ್ನು ಸಂರಕ್ಷಿಸುವ ಹೊಣೆಗಾರಿಕೆ ನಮಗಿದೆ. ಜಲಮೂಲಗಳನ್ನು ಮಲಿನಗೊಳಿಸದಿರೋಣ, ನೀರಿನ ಉಪಯೋಗವನ್ನು ಮಿತಗೊಳಿಸೋಣ, ನಮ್ಮ ಮುಂದಿನ ಪೀಳಿಗೆಗೆ ನೀರುಳಿಸೋಣ, ನೀರುಣಿಸೋಣ

ಜಲಸಂರಕ್ಷಣ ಸಮಿತಿ
ಕಾಸರಗೋಡು

ಕಾಸರಗೋಡು
22.06.2024

- **ಹೋಲಿಸಿ ಬರೆಯುವುದು**

ವಿದ್ಯಾರ್ಥಿಗಳು ಕೊಟ್ಟಿರುವ ಪದ್ಯವನ್ನು ಮೌನವಾಗಿ ಓದಲಿ. ಬಳಿಕ ರಾಗಸಂಯೋಜಿಸಿ ಹಾಡಲು ಪ್ರಯತ್ನಿಸಲಿ. ಬಳಿಕ ಅಧ್ಯಾಪಕರು ಹಾಡಲಿ/ಹಾಡಿನ ವಿಡಿಯೋ ಅಥವಾ ಆಡಿಯೋ ವಿದ್ಯಾರ್ಥಿಗಳಿಗೆ ಕೇಳಿಸುವುದು. ಪದ್ಯದ ಆಶಯವನ್ನು ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಮಂಡಿಸಲಿ. ಬಳಿಕ ತರಗತಿ ಚರ್ಚೆಯ ಮೂಲಕ ಆಶಯ ಪರಿಷ್ಕರಿಸುವುದು. ಬಳಿಕ ಗುಂಪುಗಳಲ್ಲಿ 'ಹೋಗುವೆನು ನಾ' ಹಾಗೂ 'ಕನ್ನಡ ನುಡಿ' ಪದ್ಯಗಳ ಸಾಮ್ಯ ವ್ಯತ್ಯಾಸ ಗುರುತಿಸಿ ಬರೆಯಲಿ. ಪ್ರತಿ ಗುಂಪಿನಿಂದಲೂ ಮಂಡಿಸಲಿ. ಬಳಿಕ ಅಧ್ಯಾಪಕ ಮಾರದಿಯನ್ನು ನೀಡುವುದು.

## ಟಿಪ್ಪಣಿಯ ಮಾದರಿ ಹೀಗೂ ಇರಬಹುದಲ್ಲವೇ?

ಕವಿ ಕುವೆಂಪುರವರ ಹೋಗುವೆನು ನಾ ಕವನವು ಮಲೆನಾಡಿನ ಸೌಂದರ್ಯದ ವರ್ಣನೆಯನ್ನು ಹೊಂದಿದೆ. ಇದರಲ್ಲಿ ಬಯಲುನಾಡಿನ ಏಕತಾನತೆಯಿಂದ ಬೇಸತ್ತ ಕವಿತೆಯ ನಿರೂಪಕ ತನ್ನೂರಾದ ಮಲೆನಾಡಿಗೆ ಹಿಂದಿರುಗಿ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಆ ಮೂಲಕ ಮಲೆನಾಡಿನ ಸೌಂದರ್ಯವನ್ನು ಕವಿತೆಯಲ್ಲಿ ವರ್ಣಿಸುತ್ತಾನೆ.

ಸಾ.ಶಿ. ಮರುಳಯ್ಯನವರ ಕನ್ನಡ ನುಡಿ ಕವನದಲ್ಲಿ ಕನ್ನಡ ನುಡಿಯನ್ನು ಭಾರತದ ಪ್ರಕೃತಿ ಸೌಂದರ್ಯದ ಮೂಲಕ ವರ್ಣಿಸಲಾಗಿದೆ. ಕನ್ನಡ ನುಡಿಯ ವಿಶೇಷತೆಗಳನ್ನು ಹೇಳುವ ಮೂಲಕ ಭಾರತದ ವಿಶೇಷತೆಗಳನ್ನು, ಸೌಂದರ್ಯದ ಶಿಖರಗಳನ್ನು ಕವಿ ವರ್ಣಿಸುತ್ತಾರೆ. ಕನ್ನಡ ನುಡಿಯು ಸುಮಗಳಿಂದ ಸುಂದರವಾದ ತರುಲತೆಗಳ ವೃಂದಾವನವಾಗಿದೆ. ಚಂದ್ರೋದಯದ ಸಮಯದ ಭಾವನೆಗಳನ್ನು ಮೂಡಿಸುವ ಅರುಣ ಜ್ವಾಲೆಯಾಗಿದೆ. ಅದು ಮಲೆನಾಡಿನ ಕೋಗಿಲೆ, ಬಯಲುನಾಡಿನ ಮಲ್ಲಿಗೆ, ಬಂಗಾಳದ ಪ್ರಸಿದ್ಧವಾದ ದುಂಬಿ. ಹಿಮಾಲಯದ ಶಿಖರ. ಕಾವೇರಿ, ಗೋದಾವರಿ, ಗಂಗೆ, ಯಮುನೆ, ಸಿಂಧು ಮೊದಲಾದ ನದಿಗಳು. ಎಷ್ಟೋ ಶತಮಾನಗಳಿಂದ ಗುಪ್ತಗಾಮಿನಿಯಲ್ಲಿ ಭಾರತದಲ್ಲಿ ಪ್ರವಹಿಸುತ್ತಿರುವ ಚೇತನ ಕನ್ನಡ ನುಡಿ. ಎಲ್ಲ ಋತುಗಳಲ್ಲೂ ಹೂಬಿಟ್ಟು ಹಣ್ಣಾಗುವ ಸಿಹಿಯಾದ ರಸ ಕನ್ನಡ ನುಡಿ. ಸಂತಸದಿಂದ ಚಿಲಿಪಿಲಿಗುಟ್ಟುತ್ತಾ ನಲಿಯುತ್ತಾ ಉಲಿವ ಕೂಜನ ಅದು. ಮಧುರ ಮಂದಾನಿಲದ ಸೌಗಂಧದಲ್ಲಿರುವ ಸಂಪದ್ಭರಿತವಾದ ಪರಿಮಳವದು. ಅದು ನಸು ಹಸುರಿನ ಹಿಮಮಣಿ, ಎಳೆ ಬಿಸಿಲಿನ ಮೇಲುದಿ (ತಲೆಯ ಮೇಲ್ಭಾಗದಲ್ಲಿ ಹೊದೆಯುವ ಸೆರಗಿನ ಭಾಗ), ಬಿರಿದ ಮುಗಿಲಿನ ಬಿಂಕದ ನುಡಿಯದು. ಸೋಗೆ ನವಿಲಿನ ನರ್ತನದ ಸೌಂದರ್ಯ ಕನ್ನಡ ನುಡಿಗಿದೆ ಎಂದು ಕವಿ ವರ್ಣಿಸುತ್ತಾರೆ.

ಎರಡೂ ಕವನಗಳಲ್ಲಿ ಪ್ರಕೃತಿಯ ವರ್ಣನೆಯಿದೆ. ಒಂದರಲ್ಲಿ ಮಲೆನಾಡಿನ ವರ್ಣನೆಯಾದರೆ ಇನ್ನೊಂದರಲ್ಲಿ ಭಾರತದ ಪ್ರಾಕೃತಿಕ ವಿಶೇಷತೆಗಳ ವರ್ಣನೆಯಿದೆ. ಹೋಗುವೆನು ನಾ ಕವನವು ನೇರವಾಗಿ ಮಲೆನಾಡಿನ ಪ್ರಕೃತಿಯನ್ನು ವರ್ಣಿಸಿದರೆ ಕನ್ನಡನುಡಿ ಕವನದಲ್ಲಿ ಕನ್ನಡ ನುಡಿಯ ಹಿರಿಮೆಯನ್ನು ಸಾರಲು ಭಾರತದ ಪ್ರಕೃತಿಯ ಹಿರಿಮೆಗಳನ್ನು ಕವಿ ವರ್ಣಿಸುತ್ತಾರೆ. ಹೋಗುವೆನು ನಾ ಕವನದ ಕೊನೆಯ ಸಾಲುಗಳಲ್ಲಿ ಕವಿ ನಾಗರಿಕತೆಯ ದೋಷದಿಂದ, ಕ್ರೌರ್ಯದಿಂದ ದೂರ ಸರಿಯುವ ಅಡಗುದಾಣವಾಗಿ ಮಲೆನಾಡನ್ನು ಕಂಡುಕೊಳ್ಳುತ್ತಾರೆ. ಆದರೆ ಕನ್ನಡನುಡಿ ಕವನವು ಪೂರ್ತಿಯಾಗಿ ವರ್ಣನೆಗೆ ಮೀಸಲಾಗಿದೆ.

## ಬೆಟ್ಟದ ನೋಟ

ಕಾಡು, ಕಾಡಿನ ನಡುವೆ ಹರಿಯುವ ತೊರೆಯ ಚಿತ್ರ ಅಥವಾ ವಿಡಿಯೋವನ್ನು ವಿದ್ಯಾರ್ಥಿಗಳಿಗೆ ತೋರಿಸಿ, ಅದರ ಕುರಿತಾದ ಅವರ ಅನಿಸಿಕೆಗಳನ್ನು ಅಥವಾ ಅಂತಹ ಪ್ರದೇಶಗಳಲ್ಲಿ ಓಡಾಡಿದ ಅವರ ಅನುಭವಗಳನ್ನು ಕತೆ, ಕವಿತೆ, ಟಿಪ್ಪಣಿ ಹೀಗೆ ಯಾವುದಾದರೂ ರೂಪದಲ್ಲಿ ಬರೆಯಲು ಹೇಳುವುದು. (ವಿಶೇಷ ಚೇತನ ವಿದ್ಯಾರ್ಥಿಗಳಿದ್ದರೆ ಚಿತ್ರ ರಚಿಸಲು/ನೀರಿನ ಕುರಿತಾದ ಅವರ ಅನುಭವವನ್ನು ಬಾಯಿ ಮಾತಿನ ಮೂಲಕ ಹೇಳಲು ಪ್ರೇರೇಪಿಸಬಹುದು). ನಿಶ್ಚಿತ ಸಮಯದ ನಂತರ ಮಂಡಿಸಲಿ. ಉತ್ತಮವಾಗಿ ಬರೆದ ವಿದ್ಯಾರ್ಥಿಗಳನ್ನು ವಿಶೇಷವಾಗಿ ಗುರುತಿಸಿ ಅಭಿನಂದಿಸುವುದು. ಅಗತ್ಯವಿದ್ದರೆ ಅಧ್ಯಾಪಕರು ತಮ್ಮ ರಚನೆಯನ್ನು ವಿದ್ಯಾರ್ಥಿಗಳ ಮುಂದಿಡಬಹುದು. ವಿದ್ಯಾರ್ಥಿಗಳು ತಮ್ಮ ಬರಹಗಳನ್ನು

ಮನೆಯಲ್ಲಿ ಪರಿಷ್ಕರಿಸಿ, ಒಟ್ಟು ಸೇರಿಸಿ ಸಂಚಿಕೆ ತಯಾರಿಸಲಿ.

ಕನ್ನಡದ ಖ್ಯಾತ ಕಾದಂಬರಿಕಾರರಾದ ಡಾ. ಶಿವರಾಮ ಕಾರಂತರು ತಮ್ಮ ಬೆಟ್ಟದಜೀವ ಕಾದಂಬರಿಯಲ್ಲಿ ಬೆಟ್ಟ ತೊರೆಗಳ ವರ್ಣನೆಯನ್ನು ಹೇಗೆ ಮಾಡಿದ್ದಾರೆ ನೋಡೋಣ ಎನ್ನುವುದಾಗಿ ಹೇಳುತ್ತಾ ಪಾಠ ಪ್ರವೇಶ ಮಾಡಬಹುದು. ಈ ಸಂದರ್ಭದಲ್ಲಿ ಬೆಟ್ಟದ ಜೀವ ಕಾದಂಬರಿಯನ್ನು ವಿದ್ಯಾರ್ಥಿಗಳಿಗೆ ತೋರಿಸಿ ಪರಿಚಯಿಸಬಹುದು. ಕಾದಂಬರಿಯ ಸಂದರ್ಭವನ್ನು ವಿದ್ಯಾರ್ಥಿಗಳು ಮೌನವಾಗಿ ಓದಲಿ. ಬಳಿಕ ತರಗತಿ ಚರ್ಚೆಯ ಮೂಲಕ ಸಂದರ್ಭವನ್ನು ಖಚಿತಪಡಿಸಿಕೊಳ್ಳಬಹುದು. ಸಂದರ್ಭ ತಿಳಿದುಕೊಂಡ ಬಳಿಕ ವಿದ್ಯಾರ್ಥಿಗಳು ಪಾಠವನ್ನು ಬಾಯ್ದೆರೆಯಾಗಿ ಓದಲಿ. ಓದುವಿಕೆಯ ಸೂಕ್ತ ತಂತ್ರವನ್ನು ಅಧ್ಯಾಪಕರು ಅಳವಡಿಸಿಕೊಳ್ಳಬಹುದು. ಬಾಯ್ದೆರೆ ಓದಿನ ಬಳಿಕ ಮೌನ ಓದಿಗೆ ಅವಕಾಶ ನೀಡುವುದು. ಓದುವಾಗ ನವೀನ ಪದಗಳಿದ್ದರೆ ಗುರುತಿಸಲಿ. ಪದಕೋಶದ ಸಹಾಯದಿಂದ ನವೀನ ಪದಗಳಿಗೆ ಅರ್ಥಗಳನ್ನು ಕಂಡುಕೊಂಡು ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಗತ್ಯವಿದ್ದರೆ ಕರಿಹಲಗೆಯಲ್ಲಿ ಬರೆಯುವುದು. ಪಾಠಭಾಗದ ಆಶಯವನ್ನು ತರಗತಿ ಚರ್ಚೆಯ ಮೂಲಕ ಸ್ಪಷ್ಟಪಡಿಸುವುದು. 'ಹಾದಿಯುದ್ದಕ್ಕೂ ಅಬ್ಬಿಗಳ ಲಾಸ್ಯವೇ ಲಾಸ್ಯ', 'ಸೌಂದರ್ಯದ ಕನಸನ್ನು ಸಂಪೂರ್ಣವಾಗಿ ಹರಿದೊಗೆಯುವಂತೆ', ಸೌಂದರ್ಯ ಮೋಹ ನಷ್ಟವಾಗು, ಕಾಡಿನಲ್ಲಿ ಕುರುಡಾಗಿ ಅಲೆ, ರೂಪಾಯಿ ನೋಟು ಕಹಿಕು ಇತ್ಯಾದಿ ಭಾಷಾ ಪ್ರಯೋಗಗಳ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆಯಬೇಕು. ಆಶಯ ಚರ್ಚೆಯ ಬಳಿಕ ಆಶಯ ಗ್ರಹಣ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಸ್ವತಂತ್ರವಾಗಿ ಉತ್ತರ ಬರೆದು ತರಗತಿಯಲ್ಲಿ ಮಂಡಿಸಲಿ. ತರಗತಿ ಚರ್ಚೆಯ ಮೂಲಕ ಉತ್ತರವನ್ನು ಪರಿಷ್ಕರಿಸಬಹುದು.

- **ಶೀರ್ಷಿಕೆ ಬರೆಯುವುದು**

ಬೆಟ್ಟದ ನೋಟ ಶೀರ್ಷಿಕೆ ಈ ಪಾಠಕ್ಕೆ ಹೇಗೆ ಸೂಕ್ತವಾಗಿದೆಯಲ್ಲವೇ? ಯಾಕೆ ಹೇಳಬಹುದೇ? ಎಂದು ಪ್ರಶ್ನಿಸುವುದು. ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ. ಮುಖ್ಯಾಂಶಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಹಾಗಾದರೆ ಸೂಕ್ತವಾದ ಬೇರೆ ಶೀರ್ಷಿಕೆ ಕೊಡಬಹುದೇ? ಎಂದು ಪ್ರಶ್ನಿಸುವುದು. ಮಕ್ಕಳು ಹೇಳಿದ ಶೀರ್ಷಿಕೆಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಅವುಗಳು ಹೇಗೆ ಸೂಕ್ತವಾಗಿವೆ ಎನ್ನುವುದನ್ನು ಸಮರ್ಥಿಸಿ ಬರೆಯಲು ಹೇಳುವುದು. ವಿದ್ಯಾರ್ಥಿಗಳು ಬರೆದುದನ್ನು ತರಗತಿಯಲ್ಲಿ ಮಂಡಿಸಲಿ. ತರಗತಿ ಚರ್ಚೆಯ ಮೂಲಕ ಪರಿಷ್ಕರಿಸುವುದು.

**ಶೀರ್ಷಿಕೆ ಹೀಗೂ ಇರಬಹುದಲ್ಲವೇ?**

- ವನ – ಜೀವನ

ಬೆಟ್ಟದ ನೋಟ ಪಾಠಭಾಗಕ್ಕೆ ವನ – ಜೀವನ ಎಂಬ ಹೆಸರು ಸೂಕ್ತವಾಗಿದೆ. ಈ ಪಾಠಭಾಗದಲ್ಲಿ ಕಾದಂಬರಿಯ ನಿರೂಪಕ ಶಿವರಾಮ ಗುತ್ತಿಗಾರಿನ ಸಮೀಪದ ಒಂದು ಹಳ್ಳಿಯ ಗೋಪಾಲಯ್ಯನವರು ವಾಸವಿರುವ ಸ್ಥಳದಲ್ಲಿ ಅಲೆದಾಡಿ ಅಲ್ಲಿಯ ಸೌಂದರ್ಯವನ್ನು ಸವಿಯುತ್ತಾರೆ. ಹಳ್ಳಿಗೆ ಹೊಂದಿಕೊಂಡ ಕಾಡು, ತೊರೆ ಹಾಗೂ ಅಲ್ಲಿಯ ಜನಜೀವನದ ಸೌಂದರ್ಯದ ವರ್ಣನೆಯಿರುವ ಭಾಗವಾದುದರಿಂದ ವನ-ಜೀವನ ಎಂಬ ಶೀರ್ಷಿಕೆ ಈ ಪಾಠಕ್ಕೆ ಸೂಕ್ತವಾಗಿದೆ.

- ಹಳ್ಳಿ - ಸೊಬಗು
-

- **ವರ್ಣನೆ ಬರೆಯುವುದು**

ಈ ಪಾಠದಲ್ಲಿ ಯಾವುದರ ವರ್ಣನೆ ಬಂದಿದೆ? ಕಾದಂಬರಿಕಾರರು ಕಾಡನ್ನು ಹೇಗೆ ವರ್ಣಿಸಿದ್ದಾರೆ? ಯಾವೆಲ್ಲ ವಿಶೇಷ ಪದ / ಹೋಲಿಕೆಗಳನ್ನು ಬಳಸಿದ್ದಾರೆ? ಮುಂತಾದ ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು ಅವರಿಗೆ ಇಷ್ಟವಾದ ಭಾಗಗಳನ್ನು ಬಾಯ್ದೆರೆಯಾಗಿ ಓದಲಿ.

ಬಳಿಕ ಉಕ್ಕಿ ಹರಿಯುವ ಹೊಳೆಯ ವರ್ಣನೆಯನ್ನು ಇದೇ ರೀತಿಯಲ್ಲಿ ವೈಯಕ್ತಿಕವಾಗಿ ಬರೆಯಲು ಹೇಳುವುದು. (ಅಗತ್ಯವಿದ್ದರೆ ನದಿಯ ಪರಿಸರದ ವಿಡಿಯೋ ತೋರಿಸುವುದು.) ಮಕ್ಕಳು ಮಂಡಿಸಲಿ. ಉತ್ತಮವಾಗಿ ಬರೆದವರನ್ನು ಅಭಿನಂದಿಸುವುದು. ಅಗತ್ಯವಿದ್ದರೆ ಮಾದರಿ ಒದಗಿಸುವುದು.

**ವರ್ಣನೆಯ ಟಿಪ್ಪಣಿ ಹೀಗೆಯೂ ಇರಬಹುದಲ್ಲವೇ?**

ಕಾಸರಗೋಡಿನಿಂದ ಸುಳ್ಯಕ್ಕೆ ಹೋಗುವ ರಾಜಮಾರ್ಗದಲ್ಲಿ ಸಂಚರಿಸುವಾಗ ಕೊಟ್ಯಾಡಿ ಎಂಬ ಸ್ಥಳವಿದೆ. ಅಲ್ಲಿಂದ ಮುಂದಿನ ಹಾದಿಯು ಮನೋಹರವಾಗಿದೆ. ಇಕ್ಕಡೆಗಳಲ್ಲೂ ದಟ್ಟವಾದ ವನಪ್ರದೇಶವಿದೆ. ಅಲ್ಲಿ ಬಲಭಾಗದಲ್ಲಿ ಕಲಕಲ ನಿನಾದದೊಂದಿಗೆ ಹರಿಯುವ ಪಯಸ್ವಿನಿ ನದಿ ಪಯಣಿಗರನ್ನು ತನ್ನತ್ತ ಸೆಳೆಯುತ್ತದೆ. ಆ ಪ್ರದೇಶಕ್ಕೆ ತಲುಪಿದೊಡನೆ ನಮ್ಮ ಮೈಮನಸು ತಂಪಾಗುತ್ತವೆ. ಮರಗಳ ನಡುವಿನಿಂದ ನುಸುಳಿ ಬರುವ ಬಿಸಿಲಿನ ಕೋಲುಗಳು ಹರಿವ ನೀರಿಗೆ ಚಿನ್ನದ ಬಣ್ಣವನ್ನು ನೀಡುತ್ತವೆ. ಹೊಂಬಣ್ಣದ ಸೀರೆಯನ್ನುಟ್ಟ ನಾರಿಯಂತೆ ಬಾಗುತ್ತ ಬಳುಕುತ್ತ ಸಾಗುವ ಲಾಸ್ಯವು ಕಣ್ಮನಗಳಿಗೆ ಮುದ ನೀಡುತ್ತದೆ. ಎಲ್ಲಿಂದಲೋ ಮಿಂಚಿನ ಕೋಲಿನಂತೆ ಸುಳಿದು ಬಂದು ನೀರೊಳಗೆ ಮುಳುಗೇಳುವ ಮಿಂಚುಳ್ಳಿಯೊಂದಿಗೆ ಕಣ್ಣಾಮುಚ್ಚಾಲೆಯ ಚಿನ್ನಾಟವಾಡುವ ಮೀನುಗಳು ನಮ್ಮನ್ನು ನದಿಯೊಳಗೆ ತಲ್ಲೀನಗೊಳ್ಳುವಂತೆ ಮಾಡುತ್ತವೆ.

**ಪೂರಕ ಓದಿಗೆ :**

ನೇತ್ರಾವತಿ

- ಕಯ್ಯಾರ ಕಿಞ್ಞಣ್ಣ ರೈ

ಪಡುವಣ ಬೆಟ್ಟದ ಬುಡದಲಿ ಹುಟ್ಟಿ

ಕುದುರೆಮುಖದ ಬಂಡೆಯ ತಲೆಮುಟ್ಟಿ

ಹಾರುತ ಬೀಳುತ ಕುಣಿಯುತ ಮಣಿಯುತ

ಹರಿವಳು ನದಿ ನೇತ್ರಾವತಿಯು

- **ಭಿತ್ತಿ ಪತ್ರ ಬರೆಯುವುದು**

ಭಿತ್ತಿ ಪತ್ರ ಎಂದರೇನು? ಅದರ ಉಪಯೋಗವೇನು? ಎಂದು ಪ್ರಶ್ನಿಸುವುದು. ಹಾಗಾದರೆ ಭಿತ್ತಿಪತ್ರದಲ್ಲಿ ಏನೆಲ್ಲ ಬೇಕು? ಅದರ ಸ್ವರೂಪವೇನು? ಎಂದು ಪ್ರಶ್ನಿಸಿ ಚರ್ಚಿಸುವುದು. ಸ್ವರೂಪವನ್ನು ಕರಿಹಲಗೆಯಲ್ಲಿ ಗುರುತಿಸುವುದು.

- ಆಕರ್ಷಕ ಹಿನ್ನೆಲೆ
- ಅರ್ಥಪೂರ್ಣ ಸಣ್ಣ ಸಣ್ಣ ವಾಕ್ಯಗಳಲ್ಲಿ ಮಾಹಿತಿಗಳು
- ಚಿತ್ರಗಳನ್ನು ಬಳಸಿಕೊಳ್ಳಬಹುದು
- ಘೋಷಣವಾಕ್ಯದ ಮಾದರಿಗಳಿದ್ದರೆ ಉತ್ತಮ
- ಆಕರ್ಷಕ ಅಕ್ಷರಗಳು ಮತ್ತು ಅವುಗಳ ಉತ್ತಮ ವಿನ್ಯಾಸ

ಕಾಡಿನ ಆನೆಗಳು ಕೆಲವೊಮ್ಮೆ ನಾಡಿಗೆ ಬರುತ್ತವೆ. ಈ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ಅಗತ್ಯವಾದ ಭಿತ್ತಿ ಪತ್ರವನ್ನು ಮಕ್ಕಳು ಗುಂಪಿನಲ್ಲಿ ಕುಳಿತು ಚರ್ಚಿಸಿ ಬರೆಯಲಿ. ತರಗತಿಯಲಿ ಮಂಡಿಸಲಿ. ಉತ್ತಮವಾಗಿ ಬರೆದವರನ್ನು ಅಭಿನಂದಿಸುವುದು. ಬಳಿಕ ಅಧ್ಯಾಪಕನು ಮಾದರಿಯನ್ನು ಒದಗಿಸುವುದು. ಪ್ರೊಜೆಕ್ಟರಿನಲ್ಲಿ ತೋರಿಸುವುದು ಉತ್ತಮ.

ಎಚ್ಚರಿಕೆ! ಜಾಗ್ರತೆ ವಹಿಸಿ!! ಎಚ್ಚರತಪ್ಪಿ ದುಃಖಿಸದಿರಿ!!!

ಆನೆಗಳುನಡೆಯುವ ದಾರಿ

ಕತ್ತಲೆಯಲ್ಲಿ ಏಕಾಂಗಿಯಾಗಿ ಸಂಚರಿಸದಿರಿ

ನೀಡಿರಿ ಜೀವಿಗಳಿಗೆ ಅಭಯ

ಇರಲಿ ಜೀವದ ಭಯ

- **ಪತ್ರಿಕಾ ಲೇಖನ ಬರೆಯುವುದು**

ಕಾಡು ಪ್ರಾಣಿಗಳು ನಾಡಿಗೆ ದಾಳಿ ಮಾಡಿದ ಸುದ್ದಿಯಿರುವ ವಿಡಿಯೋ ತುಣುಕುಗಳನ್ನು ವಿದ್ಯಾರ್ಥಿಗಳಿಗೆ ತೋರಿಸುವುದು. ಬಳಿಕ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಇದರ ಕುರಿತಾದ ಪತ್ರಿಕಾವಾರ್ತೆ, ಲೇಖನಗಳನ್ನು ಗುಂಪುಗಳಿಗೆ ಒದಗಿಸುವುದು. ಗುಂಪಿನಲ್ಲಿ ಓದಿ ವಿದ್ಯಾರ್ಥಿಗಳು ಮುಖ್ಯಾಂಶಗಳನ್ನು ಗುರುತಿಸಿಕೊಳ್ಳಲಿ.

- ಪ್ರಾಣಿಗಳು ನಾಡಿಗೆ ಯಾಕೆ ಬರುತ್ತವೆ?
- ಅದರಿಂದ ಮನುಷ್ಯರಿಗೆ ತೊಂದರೆಯೇನು?
- ಕಾಡುಪ್ರಾಣಿಗಳು ನಾಡಿಗೆ ಬರುವುದನ್ನು ಹೇಗೆ ತಡೆಯಬಹುದು? - ಮೊದಲಾದ ಪ್ರಶ್ನೆಗಳನ್ನು ವಿದ್ಯಾರ್ಥಿಗಳ ಮುಂದಿಡುವುದು. ತರಗತಿಯಲ್ಲಿ ಚರ್ಚೆ ನಡೆಸುವುದು.

ಬಳಿಕ ಕೊಟ್ಟಿರುವ ಭಾಗವನ್ನು ವಿದ್ಯಾರ್ಥಿಗಳು ಪಾಠದಿಂದ ಓದಲಿ.

ಪತ್ರಿಕಾ ಲೇಖನದ ಸ್ವರೂಪದ ಬಗ್ಗೆ ಚರ್ಚೆ ನಡೆಸುವುದು.

- ಸಮಕಾಲೀನ ವಿಷಯ
- ಲೇಖನದ ಸ್ವರೂಪ
- 
- 

ಅದರ ಆಧಾರದಲ್ಲಿ 'ಕಾಡುಪ್ರಾಣಿಗಳು ಕಾಡಿನಿಂದ ನಾಡಿಗೆ' ಎಂಬ ವಿಷಯದ ಕುರಿತು ಪತ್ರಿಕಾ ಲೇಖನ ಬರೆಯಲಿ. ಗುಂಪುಗಳಿಂದ ಮಂಡನೆ. ಉತ್ತಮವಾಗಿ ಬರೆದವರನ್ನು ಅಭಿನಂದಿಸುವುದು. ಅಧ್ಯಾಪಕನು ಮಾದರಿಯನ್ನು ನೀಡುವುದು.

**ಪತ್ರಿಕಾ ಲೇಖನ ಹೀಗೂ ಇರಬಹುದಲ್ಲವೇ?**

**'ಕಾಡುಪ್ರಾಣಿಗಳು - ಕಾಡಿನಿಂದ ನಾಡಿಗೆ'**

ವನ್ಯ ಜೀವಿಗಳ ದಾಳಿ ಎನ್ನುವುದು ಕೇರಳ ಕರ್ನಾಟಕದ ವನ ಪ್ರದೇಶಗಳಿಗೆ ಹೊಂದಿಕೊಂಡ ಹಳ್ಳಿಗಳ ಜ್ವಲಂತ ಸಮಸ್ಯೆಯಾಗಿದೆ. ಮಾನವ ಹಾಗೂ ವನ್ಯ ಜೀವಿಗಳ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಅರಣ್ಯದ ತಪ್ಪಲಿನಲ್ಲಿ ವಾಸಿಸುವ ಜನರು ಕಂಗಾಲಾಗಿದ್ದಾರೆ. ರಾತ್ರಿಯಲ್ಲಿ ಹೋಗಲಿ, ಹಗಲಿನಲ್ಲೂ ಮನೆಯಿಂದ ಹೊರಗಿಳಿಯಲು ಜನರು ಹೆದರುತ್ತಿದ್ದಾರೆ. ಜನರು ತಮ್ಮ ಪ್ರಾಣವನ್ನು ಕೈಯಲ್ಲಿ ಹಿಡಿದು ಬದುಕಬೇಕಾದ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಅಲ್ಲಿ

ಕೃಷಿ ಹಾಗೂ ಕುಲಕಸುಬುಗಳಲ್ಲಿ ನಿರತರಾಗಿರುವ ಜೀವನ ದುಸ್ತರವಾಗಿದೆ.

ಕಾಡಾನೆ, ಚಿರತೆ, ಕಾಡುಕೋಣ, ಮುಳ್ಳುಹಂದಿ ಮೊದಲಾದ ಕಾಡುಪ್ರಾಣಿಗಳು ಜನವಸತಿ ಪ್ರದೇಶಗಳಿಗೆ ನುಗ್ಗಿ ಕೃಷಿ ಬೆಳೆಗಳನ್ನುನಾಶ ಮಾಡುವುದು, ಸ್ಥಳೀಯರ ಮೇಲೆ ದಾಳಿ ಮಾಡುವುದು ಮೊದಲಾದ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇವೆ.

ಕಾಡು ಪ್ರಾಣಿಗಳನ್ನು ತಡೆಯುವುದಕ್ಕಾಗಿ ಆನೆ ಕಾರಿಡಾರ್, ಆನೆ ಕಂದಕ, ವಿದ್ಯುತ್ ತಂತಿಗಳ ಬೇಲಿ ಹೀಗೆ ಹಲವು ವಿಧಾನಗಳನ್ನು ಕಾರ್ಯಗತಗೊಳಿಸಿದರೂ ಜನರಿಗೆ ಶಾಶ್ವತ ಪರಿಹಾರ ಸಿಗಲಿಲ್ಲ.

ಅರಣ್ಯನಾಶ, ಅರಣ್ಯ ಪ್ರದೇಶಗಳಲ್ಲಿ ಮಿತಿಮೀರಿದ ಮಾನವ ಹಸ್ತಕ್ಷೇಪ, ಗಣಿಗಾರಿಕೆ ಮತ್ತಿತರ ಕಾರಣಗಳಿಂದ ವನ್ಯಜೀವಿಗಳು ಜನವಸತಿ ಪ್ರದೇಶಗಳಿಗೆ ಲಗ್ಗೆ ಇಡುತ್ತಿವೆ. ಇದರ ಕುರಿತು ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ವನ್ಯಜೀವಿ ತಜ್ಞರು ಎಚ್ಚರಿಕೆ ನೀಡುತ್ತಲೇ ಇದ್ದರೂ ಅರಣ್ಯಪ್ರದೇಶಗಳಲ್ಲಿ ಮಾನವನ ಹಸ್ತಕ್ಷೇಪ ಕಡಿಮೆಯಾಗಲಿಲ್ಲ.

ವನ್ಯಜೀವಿಗಳ ಸಂರಕ್ಷಣೆಯ ಜೊತೆಗೆ ಅರಣ್ಯದಂಚಿನಲ್ಲಿರುವ ಜನರು ಹಾಗೂ ಬೆಳೆಗಳ ರಕ್ಷಣೆಯೂ ಪ್ರಮುಖವಾಗಿದೆ. ಈ ಎರಡು ವಿಷಯಗಳಲ್ಲೂ ಸಮತೋಲನ ಸಾಧಿಸಬೇಕಾಗಿದೆ. ಇದಕ್ಕಾಗಿ ಸರಕಾರವು ವನ್ಯಜೀವಿ ತಜ್ಞರು, ಮತ್ತು ಕಾಡಂಚಿನ ಜನರ ಅನುಭವ, ಅನಿಸಿಕೆಗಳನ್ನು ಆಲಿಸಿ ಮಾನವ -ವನ್ಯಜೀವಿ ಸಂಘರ್ಷಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕಾಗಿದೆ.

- **ಪರ್ಯಾಯ ಪದ ಬರೆಯುವುದು**

ಕೊಟ್ಟಿರುವ ವಾಕ್ಯಗಳನ್ನು ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಓದಿಸುವುದು. ಅಡಿಗೆರೆ ಎಳೆದ ಪದಗಳಿಗೆ ಪರ್ಯಾಯ ಪದಗಳನ್ನು ವೈಯಕ್ತಿಕವಾಗಿ ಬರೆಯಲು ಹೇಳುವುದು. ಅತಿ ಹೆಚ್ಚು ಪದಗಳನ್ನು ಬರೆದವರನ್ನು ಅಭಿನಂದಿಸುವುದು. ಆ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಪರ್ಯಾಯ ಪದಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ವಾಕ್ಯಗಳನ್ನು ರಚಿಸಲಿ. ತರಗತಿಯಲ್ಲಿ ಮಂಡಿಸಲಿ. ಅಗತ್ಯವಿದ್ದರೆ ಪರಿಷ್ಕರಿಸುವುದು.

- ಅರಣ್ಯ – ಕಾಡು, ಬನ, ವಿಪಿನ, .....
- ಕಣ್ಣು – ಅಕ್ಷಿ, ನಯನ, ಲೋಚನ,....
- ಸಮುದ್ರ – ಸಾಗರ, ಕಡಲು, ಶರಧಿ,....
- ಸೂರ್ಯ – ರವಿ, ಆದಿತ್ಯ, ಭಾನು

- **ಸರ್ವನಾಮ ಗುರುತಿಸುವುದು**

ಮಕ್ಕಳು ಕೊಟ್ಟಿರುವ ಗದ್ಯಭಾಗವನ್ನು ಓದಲಿ. ಅಡಿಗೆರೆ ಎಳೆದ ಪದಗಳನ್ನು ಗಮನಿಸಲಿ. ಈ ಪದಗಳನ್ನು ಯಾವಾಗ ಎಲ್ಲಿ ಉಪಯೋಗಿಸುತ್ತೇವೆ? ಎಂದು ಪ್ರಶ್ನಿಸುವುದು. ಪ್ರತಿ ವಾಕ್ಯದಲ್ಲೂ ನಾಮ ಪದವನ್ನು ಬಳಸುತ್ತೇವೆಯೇ? - ಮೊದಲಾದ ಪ್ರಶ್ನೆಗಳ ಮೂಲಕ ತರಗತಿ ಚರ್ಚೆ ನಡೆಸುವುದು. ಬಳಿಕ ಸರ್ವನಾಮಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು. ವಿದ್ಯಾರ್ಥಿಗಳು ಕೊಟ್ಟಿರುವ ಗದ್ಯಭಾಗವನ್ನು ಓದಿ ಅದರಲ್ಲಿ ಬಂದಿರುವ ಸರ್ವನಾಮಗಳನ್ನು ಗುರುತಿಸಲು ಹೇಳುವುದು. ತರಗತಿಯಲ್ಲಿ ಮಂಡಿಸಲಿ. ಬಿಟ್ಟು ಹೋದ ಪದಗಳಿದ್ದರೆ ತರಗತಿ ಚರ್ಚೆಯ ಮೂಲಕ ಗುರುತಿಸಿ ಬರೆದುಕೊಳ್ಳಲಿ.

## ಗ್ರಾಮಭಾರತ

ನಮ್ಮ ಯಾವುದಾದರೂ ಪ್ರದೇಶದ ಅಂದು ಹಾಗೂ ಇಂದಿನ ಭಾವಚಿತ್ರಗಳನ್ನು ಪ್ರೊಜೆಕ್ಟರ್ ಮೂಲಕ ವಿದ್ಯಾರ್ಥಿಗಳಿಗೆ ತೋರಿಸುವುದು. ಅಭಿವೃದ್ಧಿಯ ಕುರಿತಾದ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ವೈಯಕ್ತಿಕವಾಗಿ ಬರೆದು ಮಂಡಿಸಲು ಹೇಳುವುದು. ಅದಕ್ಕಾಗಿ ಕೆಳಗಿನ ಪ್ರಶ್ನಾವಳಿಯನ್ನು ಉಪಯೋಗಿಸಬಹುದು.

- ನಮ್ಮ ಊರು ಹಿಂದೆ ಹೇಗಿತ್ತು? ಈಗ ಹೇಗಿದೆ?
- ಅಭಿವೃದ್ಧಿ ಆಗಿದ್ದರೆ ಹೇಗೆ?
- ಇದರಿಂದ ನಮ್ಮ ಊರಿಗೆ ಒಳಿತಾಗಿದೆಯೇ? ಕೆಡುಕೇ? (ಪರಿಸರ, ನೀರು,...ಇತ್ಯಾದಿಗಳನ್ನು ಗಮನಿಸಿ ಬರೆಯಲಿ)
- 
- 

ವಿದ್ಯಾರ್ಥಿಗಳ ಮಂಡನೆಯ ಬಳಿಕ ನರೇಂದ್ರ ರೈ ದೇರ್ಲ ಅವರು ಗ್ರಾಮ ಭಾರತದ ಬಗ್ಗೆ ನರೇಂದ್ರ ರೈ ದೇರ್ಲರ ಅನಿಸಿಕೆಗಳು ಗ್ರಾಮಭಾರತ ಪಾಠದಲ್ಲಿದೆ ಅದನ್ನು ಗಮನಿಸೋಣ ಎಂದು ಪಾಠ ಪ್ರವೇಶ ಮಾಡುವುದು. ನರೇಂದ್ರ ರೈ ದೇರ್ಲರ ಪರಿಚಯವನ್ನು ಪ್ರೊಜೆಕ್ಟರ್ ಮುಲಕ ಮಾಡುವುದು.

ಪಾಠಭಾಗವನ್ನು ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಓದಿಸುವುದು. ಅಧ್ಯಾಪಕರು ಸೂಚಿಸಿದ ವಿದ್ಯಾರ್ಥಿ ಮೊದಲು ಓದಲಿ. ಬಳಿಕ ಅವನು ಸೂಚಿಸಿದ ವಿದ್ಯಾರ್ಥಿ ಓದಲಿ. ಹೀಗೆ ಓದನ್ನು ಮುಂದುವರಿಸುವುದು. ಎಲ್ಲ ವಿದ್ಯಾರ್ಥಿಗಳೂ ಅವಕಾಶ ಸಿಗುವಂತೆ ನೋಡಿಕೊಳ್ಳುವುದು. ಬಳಿಕ ಅಗತ್ಯವಿದ್ದರೆ ಅಧ್ಯಾಪಕರು, ಮಾದರಿ ಓದನ್ನು ನಡೆಸುವುದು. ವಿದ್ಯಾರ್ಥಿಗಲು ಪಾಠಭಾಗವನ್ನು ಮೌನವಾಗಿ ಓದಲಿ. ಓದುವಾಗ ಅರ್ಥ ನವೀನ ಪದಗಳನ್ನು ಗುರುತಿಸಿ ಪದಕೋಶದ ಸಹಾಯದಿಂದ ಅರ್ಥ ಬರೆದುಕೊಳ್ಳಲಿ. ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡುವುದು. ಅವರು ಗುಂಪಿನಲ್ಲಿ ಚರ್ಚಿಸಿ ಅರ್ಥವನ್ನು ಸರಿಪಡಿಸಿ ಬರೆದುಕೊಳ್ಳಲಿ. ಬಳಿಕ ಪ್ರತಿಗುಂಪಿನವರೂ ಬರೆಯಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

ತರಗತಿ ಚರ್ಚೆಯ ಮೂಲಕ ಪಾಠದ ಆಶಯವನ್ನು ಖಚಿತಪಡಿಸುವುದು. ಬಳಿಕ ಗುಂಪುಗಳಲ್ಲಿ ವಿದ್ಯಾರ್ಥಿಗಳು ಆಶಯಗ್ರಹಣ ಪ್ರಶ್ನೆಗಳಿಗೆ ಉತ್ತರ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಚರ್ಚೆಯ ಮೂಲಕ ಉತ್ತಮಪಡಿಸಿ ಬರೆದುಕೊಳ್ಳಲಿ.

- **ವಿಮರ್ಶಾ ಟಿಪ್ಪಣಿ ಬರೆಯುವುದು**

ಈ ಹಿಂದೆ ವಿದ್ಯಾರ್ಥಿಗಳು ಓದಿನ ಟಿಪ್ಪಣಿ, ಆಸ್ವಾದನ ಟಿಪ್ಪಣಿ ಬರೆದಿದ್ದಾರೆ. ಅವುಗಳನ್ನು ನೆನಪಿಸುವುದು. ಹಾಗಾದರೆ ವಿಮರ್ಶಾ ಟಿಪ್ಪಣಿ ಬರೆಯುವುದು ಹೇಗೆ ?ವಿಮರ್ಶೆ ಬರೆಯುವಾಗ ಏನೆಲ್ಲ ಅಂಶಗಳು ಇರಬೇಕು ಎನ್ನುವ ವಿಷಯದ ಕುರಿತು ಚರ್ಚಿಸುವುದು. ವಿದ್ಯಾರ್ಥಿಗಳು ಮಂಡಿಸಿದ ಅಭಿಪ್ರಾಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಚರ್ಚೆಯ ಮೂಲಕ ಅವುಗಳನ್ನು ಕ್ರೋಡೀಕರಿಸುವುದು.

- ಕೊಟ್ಟಿರುವ ಮಾತನ್ನು ಹೇಳಿದವರು, ಉಲ್ಲೇಖಿಸಿದ ಸಂದರ್ಭ
- ಆ ಮಾತಿನ ಆಶಯ
- ಮಾತು ನೀಡುವ ವಿಶೇಷಾರ್ಥ – ಸೂಚನೆ
- ಮಾತಿನ ಕುರಿತಾದ ಓದುಗರ ಅಭಿಪ್ರಾಯ
-

ಕ್ರೋಡೀಕರಣದ ನಂತರ ಮಕ್ಕಳು ಗುಂಪಿನಲ್ಲಿ ಕುಳಿತು ಚರ್ಚಿಸಿ ಕೊಟ್ಟಿರುವ ಮಾತಿನ ವಿಮರ್ಶಾ ಟಿಪ್ಪಣಿ ಬರೆಯಲಿ. ಎಲ್ಲರೂ ಬರೆದಾದ ಮೇಲೆ ಗುಂಪಿನಿಂದ ಒಬ್ಬರಂತೆ ತರಗತಿಯಲ್ಲಿ ಮಂಡಿಸಲಿ. ಒಂದು ಗುಂಪಿನವರು ಮಂಡಿಸುವಾಗ ಇತರ ಗುಂಪಿನವರು ಅದರ ಮುಖ್ಯಾಂಶಗಳನ್ನು ಗುರುತಿಸಿಕೊಳ್ಳಲಿ. ಮುಖ್ಯಾಂಶಗಳ ಆಧಾರದಲ್ಲಿ ತಮ್ಮ ಬರಹಗಳನ್ನು ಉತ್ತಮಪಡಿಸಲಿ. ಬಳಿಕ ಅಧ್ಯಾಪಕ ಮಾದರಿಯೊಂದನ್ನು ನೀಡುವುದು.

## ವಿಮರ್ಶಾ ಟಿಪ್ಪಣಿ ಹೀಗೂ ಇರಬಹುದಲ್ಲವೇ?

ನಿರಂಜನ ವಾನಳ್ಳಿ ಯವರ ಗ್ರಾಮಭಾರತ ಲೇಖನದಲ್ಲಿ ಬಂದಿರುವ ಈ ಮಾತು ಅನ್ನದ ಅಥವಾ ಕೃಷಿಯ ಮಹತ್ವವನ್ನು ವಿವರಿಸುತ್ತದೆ. ಭಾರತ ಹಿಂದೆ ಕೃಷಿಯಾಧಾರಿತ ದೇಶವಾಗಿತ್ತು. ಗ್ರಾಮಗಳನ್ನು ದೇಶದ ಆತ್ಮವೆಂದು ಗಾಂಧೀಜಿಯವರು ಕರೆದಿದ್ದರು. ಹಿಂದೆ ಭಾರತದಲ್ಲಿ ಬಹುಸಂಖ್ಯಾತರು ಹಳ್ಳಿಗಳಲ್ಲಿ ಕೃಷಿ, ಹೈನುಗಾರಿಕೆ, ಪಶುಪಾಲನೆ, ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಆದರೆ ಇಂದು ಭಾರತದ ಕೃಷಿರಂಗ ಹಲವಾರು ಸಮಸ್ಯೆಗಳಿಂದ ಕೂಡಿದೆ. ಯುವಜನಾಂಗ ಕೃಷಿ ಕ್ಷೇತ್ರವನ್ನು ಅವಗಣಿಸುತ್ತಿದೆ. ಹಳ್ಳಿಗಳ ಗದ್ದೆ, ತೋಟಗಳನ್ನು ಕಾಂಕ್ರೀಟ್ ಕಟ್ಟಡಗಳು ಆಕ್ರಮಿಸುತ್ತಿವೆ. ಹಳ್ಳಿಗಳಲ್ಲೂ ಕೃಷಿ ಸಂಸ್ಕೃತಿ, ಕೃಷಿ ಭಾಷೆ ನಾಶವಾಗಿವೆ ಎಂದು ಲೇಖಕರು ಈ ಮಾತಿನ ಮೂಲಕ ವಿವರಿಸುವ ಪ್ರಯತ್ನ ಮಾಡುತ್ತಾರೆ.

'ಹಳ್ಳಿ - ಗ್ರಾಮ, ನೆಲದವರೂ ಸೇರಿ ಈ ಜಗತ್ತಿನ ಪ್ರತಿಯೊಬ್ಬರೂ ಅನ್ನವನ್ನೇ ತಿನ್ನಬೇಕಾಗಿದೆ ಎಂಬುದಂತೂ ಕಟುಸತ್ಯ' ಎಂಬ ಮಾತು ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಕೇವಲ ಕಾಂಕ್ರೀಟ್ ಕಟ್ಟಡಗಳು, ತಂತ್ರಜ್ಞಾನದ ಬೆಳವಣಿಗೆಗಳು ನಾಡಿನ ಅಭಿವೃದ್ಧಿಯ ಸೂಚಕವಾಗುವುದಿಲ್ಲ. ಅವುಗಳ ಜೊತೆಜೊತೆಗೇ ಆಹಾರ ಧಾನ್ಯದ ಕೃಷಿಯಲ್ಲೂ ಪ್ರಗತಿಯಾಗಬೇಕು. ವಿಷಮುಕ್ತ ಆಹಾರ ಪ್ರತಿಯೊಬ್ಬನ ಹಕ್ಕು. ಜಗತ್ತಿನ ಪ್ರತಿಯೊಬ್ಬನಿಗೂ ಆಹಾರ ಖಾತರಿಯಾದಾಗ ನಿಜವಾದ ಅಭಿವೃದ್ಧಿ ಸಾಧಿತವಾಗುತ್ತದೆ.

- **ಕಿರುಲೇಖನ ಬರೆಯುವುದು**

ಪುಸ್ತಕದಲ್ಲಿ ಕೊಟ್ಟಿರುವ ಚಿತ್ರವನ್ನು ಮಕ್ಕಳು ಗಮನಿಸಿ ನೋಡಲಿ. ಚಿತ್ರದಲ್ಲಿ ಬಂದಿರುವ ವಿಷಯದ ಕುರಿತು ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಹೇಳಲಿ. ಅಧ್ಯಾಪಕರು ವಿದ್ಯಾರ್ಥಿಗಳು ಹೇಳಿದ ವಿಚಾರಗಳ ಮುಖ್ಯಾಂಶಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಕಿರು ಲೇಖನದ ಸ್ವರೂಪದ ಕುರಿತು ಚರ್ಚಿಸುವುದು. ಬಳಿಕ ಗುಂಪುಗಳಲ್ಲಿ ಕುಳಿತು ಚರ್ಚಿಸಿ ಕಿರುಲೇಖನ ಬರೆಯಲಿ. (ಕಳೆದ ತರಗತಿಯಲ್ಲಿ ಬರೆದ ಇದೇ ವಿಷಯದ ಟಿಪ್ಪಣಿಯನ್ನು ಗಮನಿಸಿಕೊಳ್ಳಲಿ)

- ಸಮಕಾಲೀನ ವಿಷಯ
- ವಿಷಯದ ಸಂಕ್ಷಿಪ್ತ ವಿವರಣೆ
- ಪೀಠಿಕೆ
- ಉಪಸಂಹಾರ
- 
- 
- 

- **ಜಾಹೀರಾತು ರಚಿಸುವುದು**

ಜಾಹೀರಾತಿನ ಅಗತ್ಯ ಹಾಗೂ ಸ್ವರೂಪದ ಕುರಿತು ತರಗತಿಯಲ್ಲಿ ಚರ್ಚಿಸುವುದು. ಚರ್ಚೆಯಲ್ಲಿ ಮೂಡಿಬಂದ ಮುಖ್ಯಾಂಶಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಗುರುತಿಸುವುದು.

- ಒಂದು ವಸ್ತುವಿನ ಬಗ್ಗೆ ಪ್ರಚಾರ ಮಾಡಲು
- 
- 

**ಸ್ವರೂಪ**

- ಆಕರ್ಷಕ ವಾಕ್ಯಗಳು
- ವಸ್ತು/ವಿಷಯದ ಸಂಕ್ಷಿಪ್ತ ಪರಿಚಯ
-
-

ಚರ್ಚೆಯ ಬಳಿಕ ವಿದ್ಯಾರ್ಥಿಗಳು ಗುಂಪುಗಳಲ್ಲಿ ಕುಳಿತು ಜಾಹೀರಾತು ತಯಾರಿಸಲಿ. ಪ್ರತಿ ಗುಂಪಿನವರು ಮಂಡಿಸಲಿ. ಬಳಿಕ ಅಧ್ಯಾಪಕರು ಪ್ರೊಜೆಕ್ಟರ್ ನ ಮೂಲಕ ಮಾದರಿಯೊಂದನ್ನು ಪ್ರದರ್ಶಿಸುವುದು. ಅದರ ಆಧಾರದಲ್ಲಿ ತಾವು ತಯಾರಿಸಿದ ಜಾಹೀರಾತನ್ನು ಉತ್ತಮಪಡಿಸಲಿ.

**ಜಾಹೀರಾತು ಹೀಗೆಯೂ ಇರಬಹುದಲ್ಲವೇ?**

**ಬನ್ನಿರಿ ! ನೋಡಿರಿ!! ಆನಂದಿಸಿರಿ!!!**

ಹಚ್ಚ ಹಸುರಿನ ಗಿಡಬಳ್ಳಿಗಳು, ಬಿಸಿಲು ತಂಪಿನ ತಾಣ

# ಧಾತ್ರಿ ನಿಸರ್ಗಧಾಮ

(ಅಆಇಈ ಪ್ರದೇಶ, ಉಊ ಅಂಚೆ,

ಕಖ ಜಿಲ್ಲೆ)

**ಸಂಜೆಯ ಸೊಬಗಿನ ಸೊಗಸನ್ನು ಆಸ್ವಾದಿಸಲು**
**ಮನೆಮಂದಿಯೆಲ್ಲರ ನೆಚ್ಚಿನ ತಾಣ**

ಸ್ವಚ್ಛ ಪರಿಸರ
ಸುಂದರ ಪರಿಸರ

ಹರಿವ ತೊರೆಗಳ
ಜುಳು ಜುಳು ನಿನಾದ

ನಿಸರ್ಗ ಸೌರಭ ಸವಿಯೋಣ
ಮನವ ಮುದಗೊಳಿಸೋಣ

- **ಪ್ರಬಂಧ ಬರೆಯುವುದು**

ಕೊಟ್ಟಿರುವ ಸಾಲುಗಳ ಆಶಯವನ್ನು ತರಗತಿಯಲ್ಲಿ ಚರ್ಚಿಸುವುದು. ಭಾರತದ ಗ್ರಾಮೀಣ ಸಂಸ್ಕೃತಿ - ಬದುಕಿನ ಚರ್ಚೆ ನಡೆಸುವುದು. ಚರ್ಚೆಯ ಮುಖ್ಯಾಂಶಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಗುರುತಿಸುವುದು.

- ಭಾರತ ಮಾತೆ - ವಾಸ ಮಾಡುವುದು ಗ್ರಾಮಗಳಲ್ಲಿ - ಗಾಂಧೀಜಿಯರ ಮಾತು
- ಗ್ರಾಮೀಣ ಬದುಕು ಎಂದರೇನು?
- ಗ್ರಾಮೀಣ ಬದುಕಿನ ವೈಶಿಷ್ಟ್ಯಗಳು
- ನಗರ ಬದುಕಿಗಿಂತ ಹೇಗೆ ಭಿನ್ನವಾಗಿದೆ?
- ಗ್ರಾಮೀಣ ಬದುಕಿನ ಒಳಿತು -ಕೆಡುಕುಗಳು
-
-

ಪ್ರಬಂಧದ ಸ್ವರೂಪದ ಬಗ್ಗೆ ಚರ್ಚಿಸಿದ ಬಳಿಕ ವಿದ್ಯಾರ್ಥಿಗಳು ಗುಂಪುಗಳಲ್ಲಿ ಕುಳಿತು ಪ್ರಬಂಧ ರಚಿಸಲಿ. ಪ್ರತಿ ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಒಂದು ಗುಂಪಿನವರು ಮಂಡಿಸುವಾಗ ಇತರ ಗುಂಪಿನವರು ಮುಖ್ಯಾಂಶಗಳನ್ನು ಗುರುತಿಸಿಕೊಳ್ಳಲಿ. ಬಳಿಕ ಬಿಟ್ಟು ಹೋದ ಅಂಶಗಳಿದ್ದರೆ ಸೇರಿಸಿಕೊಂಡು ವೈಯಕ್ತಿಕವಾಗಿ ಪ್ರಬಂಧವನ್ನು ಪರಿಷ್ಕರಿಸಲಿ. ಅಗತ್ಯವಿದ್ದರೆ ಅಧ್ಯಾಪಕ ಮಾದರಿಯೊಂದನ್ನು ನೀಡುವುದು.

**ಪ್ರಬಂಧ ಹೀಗೂ ಇರಬಹುದಲ್ಲವೇ?**

## ಗ್ರಾಮೀಣ ಬದುಕು

ಭಾರತಮಾತೆಯು ಹಳ್ಳಿಗಳಲ್ಲಿ ವಾಸಿಸುತ್ತಾಳೆ ಎಂದು ಗಾಂಧೀಜಿಯವರು ಹೇಳಿದ ಮಾತು ಜನಜನಿತವಾಗಿದೆ. ಭಾರತವು ಮುಖ್ಯವಾಗಿ ಗ್ರಾಮೀಣ ಪರಂಪರೆಯ ದೇಶವಾಗಿದೆ. ಕೃಷಿ, ಕೃಷಿ ಸಂಬಂಧಿತ ಕುಲಕಸುಬು, ಕೈಗಾರಿಕೆಗಳು ಹಿಂದೆ ಭಾರತೀಯರ ಮುಖ್ಯ ಕಸುಬಾಗಿದ್ದವು.

ಆಧುನಿಕ ಭಾರತವು ನಗರ ಜೀವನದತ್ತ ಒಲವನ್ನು ಹೊಂದಿದೆ. ಆದರೂ ಗ್ರಾಮೀಣ ಬದುಕು ಜನರ ಅಂತರಂಗವನ್ನು ಸೆಳೆಯುತ್ತವೆ. ನಗರದ ಒತ್ತಡ, ಜಂಜಾಟ, ಮಾಲಿನ್ಯಗಳಿಂದ ದೂರವಾದ ಗ್ರಾಮಗಳ ಸ್ವಚ್ಛ ಸುಂದರ ಪರಿಸರ ಎಲ್ಲರ ಮನ ಸೆಳೆಯುತ್ತದೆ.

ಗ್ರಾಮೀಣ ಬದುಕು ಎಂದಾಗಲೇ ನೆನಪಿಗೆ ಬರುವುದು ಹಳ್ಳಿ, ಗದ್ದೆ ತೋಟಗಳು, ಓಬೇಲೆ ಹಾಡುಗಳು,

ದನಕರುಗಳ ಕೊರಳ ಗಂಟೆಯ ನಾದಗಳು ನಮ್ಮ ಮನಸಿನಂಗಳದಲ್ಲಿ ಮೂಡಿ ಬರುತ್ತವೆ.

ಗ್ರಾಮೀಣ ಬದುಕು ಬಹಳ ಸುಂದರವಾದುದು. ಗುಡ್ಡಗಾಡುಗಳ ಮಧ್ಯೆಯಿರುವ ಚಿಕ್ಕಪುಟ್ಟ ಹಳ್ಳಿಗಳು. ನಗರ ಜೀವನದ ಜಂಜಾಟದಿಂದ ದೂರವಾದ ಒತ್ತಡ ರಹಿತವಾದ ಜನಜೀವನ ಇಲ್ಲಿಯದು. ಸುತ್ತಲೂ ಗಿಡಮರಗಳಿಂದ ಕೂಡಿರುವ ಕಾರಣ ಶುದ್ಧವಾದ ಗಾಳಿ ಇಲ್ಲಿ ಸಿಗುತ್ತದೆ. ತಿಳಿನೀರಿನ ಜಲಮೂಲಗಳು ಬೇಕಾದಷ್ಟಿವೆ. ವಿಷರಹಿತವಾದ ತಾವೇ ಬೆಳೆಸಿದ ಅಥವಾ ಕಾಡು/ಪ್ರಕೃತಿಯಿಂದ ದೊರೆಯುವ ತಾಜಾ ಆಹಾರ ಇಲ್ಲಿನ ಮುಖ್ಯ ಆಕರ್ಷಣೆಗಳಲ್ಲೊಂದಾಗಿದೆ.

ಶುದ್ದ ಆಹಾರವನ್ನು ಸೇವಿಸುವ ಅಲ್ಲಿಯ ಜನರು ದೈಹಿಕ ಶ್ರಮದ ಕೆಲಸಗಳನ್ನು ಮಾಡುವ ಕಾರಣ ಆರೋಗ್ಯವಂತರಾಗಿರುತ್ತಾರೆ. ದೃಢಕಾಯರಾಗಿರುತ್ತಾರೆ. ಹೆಚ್ಚಿನ ಜನರೂ ಸದಾ ಒಂದಿಲ್ಲೊಂದು ಕೆಲಸಗಳಲ್ಲಿ ನಿರತರಾಗಿ ಸದಾ ಚಟುವಟಿಕೆಯಿಂದಿರುತ್ತಾರೆ.

ಗ್ರಾಮೀಣ ಖಾದ್ಯಗಳು ದೇಶವಿದೇಶಿಯರ ನಾಲಗೆಯ ನೀರೂರಿಸುತ್ತವೆ. ಪಂಚತಾರಾ ಹೋಟೆಲ್ ಗಳ ತಿನಿಸುಗಳಂತೆ ಗ್ರಾಮೀಣ ಖಾದ್ಯಗಳಿಗೂ ಈಗ ಬಹಳಷ್ಟು ಬೇಡಿಕೆಯಿದೆ. ಹಳ್ಳಿಯ ಮಾವಿನ ಮಿಡಿ ಉಪ್ಪಿನಕಾಯಿ, ಹಪ್ಪಳಗಳಿಗೆ ಅಂತರಾಷ್ಟ್ರೀಯ ಮಾರುಕಟ್ಟೆಯಿದೆ. ಅಕ್ಕಿಪುಂಡಿ - ಬಸಳೆ ಗಸಿಯಂತಹ ಅಚ್ಚ ಗ್ರಾಮೀಣ ತಿನಿಸುಗಳು ಇಂದಿನ ಯುವಜನಾಂಗದ ಆಸಕ್ತಿಯನ್ನು ಕೆರಳಿಸುತ್ತಿವೆ.

ಗ್ರಾಮೀಣ ಸಂಸ್ಕೃತಿ ವಿಶಿಷ್ಟವಾದುದು. ಪ್ರತಿಯೊಂದು ಗ್ರಾಮಕ್ಕೂ ಅದರದ್ದೇ ಆದ ಆಚಾರ ವಿಚಾರಗಳಿರುತ್ತವೆ. ಗ್ರಾಮೀಣ ಸಂಸ್ಕೃತಿಯಲ್ಲಿ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ನಾವು ಕಾಣುತ್ತೇವೆ. ಜನಪದ ಹಾಡು, ನೃತ್ಯ, ದೈವಾರಾಧನೆ ಮೊದಲಾದವು ಭಾರತದ ವೈಶಿಷ್ಟ್ಯಪೂರ್ಣ ಸಾಂಸ್ಕೃತಿಕ ವಿಚಾರಗಳಾಗಿವೆ. ಇಲ್ಲಿಯ ಜನರ ಜೀವನಾವರ್ತಕ ಆಚರಣೆಗಳೂ ವಿಶಿಷ್ಟವಾಗಿವೆ. ಜಾತ್ರೆ, ಉತ್ಸವಗಳಲ್ಲಿ ಜನರೆಲ್ಲ ಒಟ್ಟಾಗಿ ಸಂಭ್ರಮಿಸುತ್ತಾರೆ.

ಆದರೆ ಇಂದು ಹಳ್ಳಿಗಳು ನಿಧಾನವಾಗಿ ನಗರಗಳಾಗಿ ಬದಲಾಗುತ್ತಿವೆ. ನಗರದ ಸೌಲಭ್ಯಗಳು ಹಳ್ಳಿಗಳ ಸೌಂದರ್ಯವನ್ನು ಪಾವಿತ್ರ್ಯತೆಯನ್ನು ಕೆಡಿಸುತ್ತಿವೆ. ಮನೆಯ ಬೇಲಿಗಳನ್ನು ಆವರಣಗೋಡೆಗಳು ಕೆಡವಿವೆ. "ತಡಮೆ"ಗಳ ಬದಲು ಗೇಟುಗಳು ಬಂದಿವೆ. ಗದ್ದೆಯ ಬದುಗಳಲ್ಲಿ ನಡೆಯುವ ಆನಂದ ಈಗ ಹಳ್ಳಿಗರಿಗೂ ಇಲ್ಲ. ಜೋಡೆತ್ತಿನ ಗಂಟೆಯ ನಾದದ ಬದಲು ಟ್ರಾಕ್ಟರ್ ನ ಕರ್ಕಶ ಸದ್ದು ಕೇಳಿಸುತ್ತದೆ. ಓಬೇಲೆ ಹಾಡು ಕಿವಿದೆರೆಯಿಂದ ದೂರವಾಗುತ್ತಿವೆ. ಯುವಕರು ಪಟ್ಟಣವಾಸ ಬಯಸುತ್ತಿದ್ದಾರೆ.

ಮಾನವನ ಬದುಕನ್ನು ಸರಳಗೊಳಿಸುವ ಕೆಲವೊಂದು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು, ಗ್ರಾಮೀಣ ಸಂಸ್ಕೃತಿಯನ್ನು ಪರಿಸರವನ್ನು ಕಲುಷಿತಗೊಳಿಸದಂತೆ ನೋಡಿಕೊಂಡು ನಮ್ಮ ಗ್ರಾಮಗಳು ಬೆಳೆಯಬೇಕಿವೆ. ಅಲ್ಲಿಯ ಯುವತಲೆಮಾರಿಗೆ ಯೋಗ್ಯವಾದ ಆಕರ್ಷಕವಾದ ಉದ್ಯೋಗ ಸಾಧ್ಯತೆಗಳನ್ನು ರೂಪಿಸಬೇಕಾಗಿದೆ. ಆಧುನಿಕ ಪ್ರಗತಿ ಹಾಗೂ ಗ್ರಾಮೀಣ ಬದುಕಿನ ನಡುವೆ ಸಮನ್ವಯತೆಯನ್ನು ಸಾಧಿಸಬೇಕು. ಹಾಗಾದಾಗ ಗ್ರಾಮೀಣ ಬದುಕಿನ ಸೊಬಗು ಉಳಿಯಲು ಸಾಧ್ಯ.

- **ಕಿರುಚಿತ್ರ ತಯಾರಿಸುವುದು**

ಹಳ್ಳಿಯ ಬದುಕಿನ ಸೊಬಗಿನ ಬಗ್ಗೆ ಚರ್ಚಿಸುವುದು. ಹಳ್ಳಿಯ ಸೌಂದರ್ಯದ ಮುಖ್ಯ ತಾಣಗಳನ್ನು ತರಗತಿ ಚರ್ಚೆಯ ಮೂಲಕ ಗುರುತಿಸುವುದು. ಅವುಗಳ ಚಿತ್ರೀಕರಣಕ್ಕಾಗಿ ಬೇಕಾದ ಯೋಜನೆಯನ್ನು ತಯಾರಿಸುವುದು.

- ಚಿತ್ರೀಕರಣದ ಸ್ಥಳ
- ಸ್ಥಳದ ಪರಿಚಯವನ್ನು ಮಾಡುವ ಹಿನ್ನೆಲೆ ಧ್ವನಿ

ಶಾಲೆಯ ಕ್ಯಾಮೆರಾವನ್ನು ಉಪಯೋಗಿಸಲು ತಿಳಿದ ಮಕ್ಕಳನ್ನು ಗುಂಪಿನ ನಾಯಕರನ್ನಾಗಿಸಿ ತರಗತಿ ಗುಂಪುಗಳನ್ನು ಮಾಡುವುದು. ಪ್ರತಿ ಗುಂಪಿನವರೂ ಒಂದೊಂದು ತಾಣವನ್ನು ವಿಡಿಯೋ ಮಾಡಲಿ. ಅಧ್ಯಾಪಕರ ಸಹಾಯದೊಂದಿಗೆ ತರಗತಿಯಲ್ಲಿ ಪ್ರದರ್ಶಿಸಲಿ. ಉತ್ತಮವಾದ ವಿಡಿಯೋವನ್ನು ಬ್ಲಾಗ್ ನಲ್ಲಿ ಪ್ರಕಟಿಸುವುದು.

- **ಸಂಸ್ಕೃತ – ತದ್ಭವ ಬರೆಯುವುದು**

ಕೊಟ್ಟಿರುವ ವಾಕ್ಯಗಳನ್ನು ಮಕ್ಕಳಿಂದ ಬಾಯ್ದೆರೆಯಾಗಿ ಓದಿಸುವುದು. ಅಡಿಗೆರೆ ಎಳೆದ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಅವುಗಳ ತದ್ಭವ ರೂಪಗಳನ್ನು ಮಕ್ಕಳಿಂದ ಹೇಳಿಸುವುದು. ಕರಿಹಲಗೆಯಲ್ಲಿ ಗುರುತಿಸುವುದು.

- ಅಕ್ಷರ – ಅಕ್ಕರ
- ವರ್ಷ – ಬರಿಸ
- ಧ್ವನಿ – ದನಿ
- ಭೂಮಿ – ಬುವಿ

* * *

ಘಟಕ 2

# ನೀತಿಪಥ

## ಮುನ್ನುಡಿ

ಮಾನವನು ಸಮಾಜ ಜೀವಿ. ಅವನು ಈ ಸಮಾಜದಲ್ಲಿ ಜೀವಿಸುವಾಗ ಅದರ ಜೊತೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕು. ಪ್ರೀತಿಯಿಂದ, ಆತ್ಮೀಯತೆಯಿಂದ, ಒಮ್ಮತದಿಂದ, ಅನ್ಯೋನ್ಯತೆಯಿಂದ ಸಹನೆಯಿಂದ ವರ್ತಿಸಬೇಕು. ಕೆಲವು ರೀತಿನೀತಿಗಳನ್ನು ಅನುಸರಿಸಬೇಕು. ಮೌಲ್ಯಗಳನ್ನು ಕಾಯ್ದುಕೊಳ್ಳಬೇಕು, ಯಾರಿಗೂ ನೋವಾಗದಂತೆ ವರ್ತಿಸಬೇಕು.ಗುರುಹಿರಿಯರಿಗೆ ಗೌರವವನ್ನು ನೀಡಬೇಕು. ಇಂದಿನ ಸಮಾಜದಲ್ಲಿ ಮಕ್ಕಳ ಗಮನವನ್ನು ಬೇರೆಡೆಗೆ ಸೆಳೆಯುವ ಕೆಲವು ಅಗೋಚರ ಶಕ್ತಿಗಳು ಬಹಳ ವೇಗದಲ್ಲಿ ಬೆಳೆಯುತ್ತಿರುತ್ತವೆ. ಇದರಿಂದಾಗಿ ಇಂತಹ ಮೌಲ್ಯಗಳ ಕಡೆಗೆ ಮಕ್ಕಳ ಗಮನವು ಕಡಿಮೆಯಾಗುತ್ತದೆ. ಅದುದರಿಂದ ಉತ್ತಮ ಶೀಲ ಸ್ವಭಾವಗಳನ್ನು ನಾವು ಮಕ್ಕಳಲ್ಲಿ ಬೆಳೆಸಬೇಕಾದುದು ಅತಿ ಅಗತ್ಯವಾಗಿದೆ.

ಈ ಉದ್ದೇಶಗಳಿಂದ ‘ನೀತಿ ಪಥ’ ಘಟಕವನ್ನು ಈ ಪಾಠಪುಸ್ತಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದರಲ್ಲಿ ಪ್ರವೇಶ ಚಟುವಟಿಕೆಯಾಗಿ ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗದ ಕೆಲವು ಸಾಲುಗಳನ್ನು ನೀಡಲಾಗಿದೆ. ಅದರಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಇತರರಿಗೆ ಬೇಕಾದವನಾಗಿ ಸಂತೋಷವನ್ನು ತಂದುಕೊಡುವವನಾಗಿರಬೇಕು. ಲೋಕದ ವಿಷಯಗಳಲ್ಲಿ ಸಹಾನುಭೂತಿ ಉಳ್ಳವನಾಗಿರಪಬೇಕು, ಮನೋದಾರ್ಢ್ಯವನ್ನು ಬೆಳೆಸಿಕೊಳ್ಳಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ. ಅದೇ ರೀತಿ ಇನ್ನೊಂದು ಕಗ್ಗವು ಭೂಮಿಯಲ್ಲಿರುವ ಪ್ರಾಣಿಪಕ್ಷಿಗಳು ಭಗವಂತ ತಮಗೆ ಏನು ನೀಡಿದ್ದಾನೋ ಅದರಲ್ಲಿ ಪೂರ್ಣ ತೃಪ್ತರಾಗಿ ನೆಮ್ಮದಿಯ ಜೀವನವನ್ನು ನಿರ್ವಹಿಸುವಂತೆ ಮನುಷ್ಯನ ಕೂಡ ತಾಳ್ಮೆಯಿಂದ ಜೀವಿಸುವುದನ್ನು ಕಲಿಯಬೇಕು ಹಕ್ಕಿಯಂತೆ ಜೀವಿಸುವುದನ್ನು ಕಲಿಯಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ.

ಡಾ. ಮಿರ್ಜಾ ಬಶೀರ್ ಅವರ ಬೀಬಜ್ಜಿ ಕಥೆಯು ನಾವು ನಮ್ಮ ಜೀವನದಲ್ಲಿ ಗುರು ಹಿರಿಯರಿಗೆ ಗೌರವವನ್ನು ನೀಡಬೇಕು ವೃದ್ಧರನ್ನು ಕಡೆಗಣಿಸಬಾರದು ಅವರ ಅಂತ:ಕರಣವನ್ನು ಮೆಚ್ಚಿಕೊಳ್ಳಬೇಕು, ಅವರ ಮನಸ್ಸಿಗೆ ನೋವಾಗದಂತೆ ವರ್ತಿಸಬೇಕು ಎಂಬ ಆಶಯವನ್ನು ಈ ಕಥೆಯು ವ್ಯಕ್ತಪಡಿಸುತ್ತದೆ.

ಸರ್ವಜ್ಞ ಕವಿಯ ಸರ್ವಜ್ಞನ ವಚನಗಳು ಎಂಬ ತ್ರಿಪದಿಯು ನಾವು ಇನ್ನೊಬ್ಬರಿಗೆ ಕೇಡನ್ನು ಬಯಸಬಾರದು ಒಂದು ವೇಳೆ ಹಾಗೆ ಮಾಡಿದರೆ ಕೇಡನ್ನು ಉಂಟು ಮಾಡಿದವರಿಗೆ ಖಂಡಿತ ಕೇಡು ಉಂಟಾಗುತ್ತದೆ, ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು, ಕೆಟ್ಟ ಹವ್ಯಾಸಗಳಿಗೆ ಬಲಿಯಾಗಬಾರದು, ಬೇರೆಯವರ ಸರ್ವನಾಶವನ್ನು ಬಯಸಿದರೆ ನಾವೇ ನಾಶವಾಗಿ ಹೋಗುತ್ತೇವೆ ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ.

ಸದಾಶಿವ ಒಡೆಯರ್ ಅವರ ನೊಂದವರ ಗೆಳೆಯ ಎಂಬ ಜೀವನ ಚರಿತ್ರೆಯು ಈಶ್ವರ ಚಂದ್ರವಿದ್ಯಾಸಾಗರ ಸಮಾಜ ಸೇವೆಯನ್ನು ವಿವರಿಸುತ್ತದೆ. ಅವರ ಸರಳಜೀವನ, ಪರೋಪಕಾರ ಮನೋಭಾವ ಸಮಾಜ ಸೇವೆ ರಾಷ್ಟ್ರಾಭಿಮಾನ ಇವೇ ಮೊದಲಾದ ಮೌಲ್ಯಗಳನ್ನು ವ್ಯಕ್ತಪಡಿಸುವುದರಿಂದ ಮಕ್ಕಳಲ್ಲಿ ಉತ್ತಮ ನಡತೆಯನ್ನು ರೂಪಿಸಿಕೊಳ್ಳುವಲ್ಲಿ ಈ ಪಾಠವು ಸಹಕಾರಿಯಾಗಿದೆ.

## ಸಿಲೆಬಸ್ ಗ್ರಿಡ್

| | | |
|---|---|---|
| ವಿಷಯ | : | **ಮುಂದುವರಿದ ಪಠ್ಯ** |
| ತರಗತಿ | : | **9** |
| ಸಮಯ | : | **25 ಪಿರೀಡುಗಳು** |
| ಘಟಕದ ಹೆಸರು | : | **ಮಾನವೀಯತೆಯ ಸೆಲೆ** |
| ಆಶಯ | : | **ನಾಗರಿಕ ಪ್ರಜ್ಞೆ** |

### ಉಪ ಆಶಯಗಳು :

- ಜವಾಬ್ದಾರಿಯುತ ಪೌರ
- ನಾಗರಿಕ ಪ್ರಜ್ಞೆ ಮತ್ತು ಕುಟುಂಬ
- ಸಾಮಾಜಿಕ ಬದ್ಧತೆ

### ಸಾಹಿತ್ಯ ಪ್ರಕಾರಗಳು

- ಸಾಂಗತ್ಯ
- ಹಾಸ್ಯ ಬರಹ
- ನಾಟಕ

### ಕಲಿಕಾ ಉದ್ದೇಶಗಳು:

- ನಾಗರಿಕ ಪ್ರಜ್ಞೆ ಮತ್ತು ಕುಟುಂಬ ಸಾಮಾಜಿಕ ಬದ್ಧತೆ, ಜವಾಬ್ದಾರಿಯುತ ಪ್ರಜೆ ಇತ್ಯಾದಿ ಆಶಯಗಳನ್ನು ಬಿಂಬಿಸುವ ಸಾಂಗತ್ಯ, ಲೇಖನ ನಾಟಕ ಮುಂತಾದ ಸಾಹಿತ್ಯಪ್ರಕಾರಗಳನ್ನು ಓದಿ ಅರ್ಥೈಸಿಕೊಂಡು ಅವುಗಳಲ್ಲಿ ಕಂಡುಕೊಂಡ ಅಂಶಗಳನ್ನು ವಿಶ್ಲೇಷಿಸಿ ವಿವಿಧ ಭಾಷಾ ವ್ಯವಹಾರ ರೂಪಗಳಲ್ಲಿ ಅಭಿವ್ಯಕ್ತಗೊಳಿಸುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಅಂತರಂಗವ ಕಾಂಬರಾರು | | ● ಸಾಂಗತ್ಯ ಕಾವ್ಯದಲ್ಲಿರುವ ಆಶಯವನ್ನು ತಿಳಿದುಕೊಂಡು ವಿವಿಧ ಸಾಹಿತ್ಯ ರೂಪಗಳಲ್ಲಿ ಅಭಿವ್ಯಕ್ತಗೊಳಿಸುವುದು . | ● ಜವಾಬ್ದಾರಿಯುತ ಪೌರನಾಗಿ ವರ್ತಿಸುವ ಮನೋಭಾವ | ● ಪದಗಳ ಅರ್ಥ<br>● ಪದ ವಿಂಗಡಣೆ<br>● ವಿಗ್ರಹ ವಾಕ್ಯ<br>● ಕ್ರಿಯಾ ಸಮಾಸ<br>● ಅಂಶಗಣ<br>● ಅನ್ಯದೇಶಿಯ ಪದಗಳು<br>● ವಾಕ್ಯ ರಚನೆ | ● ಸ್ವಾರಸ್ಯ ಬರವಣಿಗೆ<br>● ಆಶಯ ಬರವಣಿಗೆ<br>● ಪಾತ್ರ ಚಿತ್ರಣ<br>● ಸಂದೇಶ ಬರವಣಿಗೆ<br>● ಘೋಷಣಾ ವಾಕ್ಯ ರಚನೆ<br>● ಟಿಪ್ಪಣಿ ರಚನೆ<br>● ಅನುಭವ ಟಿಪ್ಪಣಿ<br>● ಪ್ರಬಂಧ ರಚನೆ<br>● ಅಭಿಪ್ರಾಯ ಟಿಪ್ಪಣಿ<br>● ಕಥಾ ರಚನೆ<br>● ಬಿತ್ತಿ ಪತ್ರ ರಚನೆ | ● ಭರತೇಶ ವೈಭವ ಕೃತಿ<br>● ಹಾಸ್ಯ ಲೇಖನಗಳು<br>● ನಾಟಕಗಳು<br>● ಬುದ್ಧನ ಜೀವನ ಚರಿತ್ರೆ ಮತ್ತು ಕಥೆಗಳು<br>● ಅರ್ಥಕೋಶ | ● ಸ್ವಾರಸ್ಯ<br>● ಆಶಯ<br>● ಪಾತ್ರ ಚಿತ್ರಣ<br>● ಸಂದೇಶ<br>● ಟಿಪ್ಪಣಿ<br>● ಅನುಭವ ಟಿಪ್ಪಣಿ<br>● ಪ್ರಬಂಧ<br>● ಭಿತ್ತಿ ಪತ್ರ |

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 2. ದಾರಿ ಯಾವುದಯ್ಯಾ | | ● ಹಾಸ್ಯ ಬರಹಗಳನ್ನು ರಚಿಸುವುದು. | ● ಕುಟುಂಬದಿಂದ ಸಮಾಜಕ್ಕೆ ಬೆಳೆಯುವ ಹಂತದಲ್ಲಿ ಸಮಾಜದ ಹಿತಕ್ಕಾಗಿ ವರ್ತಿಸುವ ಮನೋಭಾವ. | | | | |
| 3. ಮುನ್ನಡೆಸು ಬೆಳಕಿನೆಡೆಗೆ | | ● ನಾಟಕದಲ್ಲಿ ಅಭಿವ್ಯಕ್ತವಾದ ವಿಚಾರಗಳನ್ನು ಕಥನ ಕವನ , ಕಥೆ ಇತ್ಯಾದಿಗಳಲ್ಲಿ ಅಭಿವ್ಯಕ್ತಗೊಳಿಸುವುದು. | ● ಸುದೃಢ ಸಮಾಜದ ನಿರ್ಮಾಣದಲ್ಲಿ ಪ್ರತಿಯೊಬ್ಬನ ಪಾಲು ಇದೆ ಎಂಬುದನ್ನು ತಿಳಿದುಕೊಳ್ಳುವುದು.<br>● ಅಗತ್ಯ ಸಂದರ್ಭಗಳಲ್ಲಿ ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳುವುದು .<br>● ಸಮಾಜದ ಹಿತಕ್ಕಾಗಿ ಸ್ವಂತ ಹಿತವನ್ನು ತ್ಯಜಿಸುವುದು. | | | | |

## ಪ್ರವೇಶ ಚಟುವಟಿಕೆ

ಪ್ರವೇಶ ಚಟುವಟಿಕೆಯಾಗಿ ಕೊಡಲಾದ ಕಗ್ಗವನ್ನು ಮಕ್ಕಳಲ್ಲಿ ಓದಲು ಹೇಳುವುದು.

"ಹಕ್ಕಿ ಮುನ್ನರಿಯುವುದೇ ತನ್ನ ಪಯಣದ ತೆರನ............. ತಕ್ಕುದಾವ್ರತ ನಿನಗೆ ಮಂಕುತಿಮ್ಮ" - ಕೆಲವು ವಿದ್ಯಾರ್ಥಿಗಳಲ್ಲಿ ಅದರ ಆಶಯವನ್ನು ಬಾಯ್ದೆರೆಯಾಗಿ ಹೇಳಿಸುವುದು. ಬಳಿಕ ಪ್ರತಿಯೊಬ್ಬರಲ್ಲಿಯೂ ವೈಯಕ್ತಿಕವಾಗಿ ಬರೆಯಲು ಹೇಳುವುದು. ವಿದ್ಯಾರ್ಥಿಗಳಲ್ಲಿ ಓದಲು ಹೇಳುವುದು. ಬಿಟ್ಟು ಹೋದ ಅಂಶಗಳಿದ್ದರೆ ಅವುಗಳ ಕುರಿತು ಚರ್ಚಿಸುವುದು. ಬಳಿಕ ಅಧ್ಯಾಪಕರು ತಾವು ಬರೆದ ಮಾದರಿ ಆಶಯವನ್ನು ನೀಡುವುದು.

### ಆಶಯವನ್ನು ಹೀಗೆಯೂ ಬರೆಯಬಹುದು

ಡಿವಿಜಿಯವರು ಈ ಕಗ್ಗದಲ್ಲಿ ಮನುಷ್ಯನು ತನ್ನ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುದನ್ನು ಒಂದು ಹಕ್ಕಿಯ ಜೀವನದ ಉದಾಹರಣೆಯ ಮೂಲಕ ತಿಳಿಸಿದ್ದಾರೆ. 'ಯಾವುದೇ ಒಂದು ಹಕ್ಕಿಯು ತನ್ನ ಪಯಣದ ಗತಿಯನ್ನು ಮೊದಲೇ ತಿಳಿದಿರುವುದಿಲ್ಲ. ಆಕಾಶದಲ್ಲಿ ಹಾರುತ್ತಿರುವ ಅದನ್ನು ಕರೆದು ಯಾರು ಅದಕ್ಕೆ ತಿರುಪೆಯನ್ನು (ಭಿಕ್ಷೆ) ನೀಡುವುದಿಲ್ಲ ರೆಕ್ಕೆ ತನ್ನನ್ನು ಎಲ್ಲಿ ಕೊಂಡು ಹೋಗುತ್ತದೆಯೋ ಅಲ್ಲಿಗೆ ಹೋಗುತ್ತದೆ, ಎಲ್ಲಿ ಏನು ದೊರೆಯುವುದೋ ಅದನ್ನು ತಿನ್ನುತ್ತದೆ. ಭಗವಂತ ನಮ್ಮನ್ನು ಸೃಷ್ಟಿಸಿದ ಬಳಿಕ ಸಾಯುವವರೆಗೆ ನಮಗೇನು ಕಡಿಮೆ ಮಾಡುವುದಿಲ್ಲ. ಭೂಮಿಯಲ್ಲಿರುವ ಪ್ರಾಣಿ ಪಕ್ಷಿಗಳು ಭಗವಂತ ತಮಗೆ ಏನು ನೀಡಿದ್ದಾನೊ ಅದರಲ್ಲಿ ಸಂಪೂರ್ಣ ತೃಪ್ತರಾಗಿ ನೆಮ್ಮದಿಯ ಜೀವನವನ್ನು ನಿರ್ವಹಿಸುತ್ತವೆ. ಅಂತೆಯೇ ಮನುಷ್ಯನು ಕೂಡ ತಾಳ್ಮೆಯಿಂದ ಜೀವಿಸುವುದನ್ನು ಕಲಿಯಬೇಕು. ಹಾಗೆ ಹಕ್ಕಿಯಂತೆ ಜೀವಿಸಿದರೆ ಅದುವೇ ಶ್ರೇಷ್ಠ ಜೀವನ'ಎಂದು ತಮ್ಮ ಕಗ್ಗದಲ್ಲಿ ಡಿವಿಜಿಯವರು ಸಾರಿದ್ದಾರೆ.

- **ಓದುವುದು**

ಮಕ್ಕಳಲ್ಲಿ ಪಾಠ ಭಾಗವನ್ನು ಓದಿಸುವುದು .(ಅಧ್ಯಾಪಕರು ಇದಕ್ಕಾಗಿ ಬೇಕಾದ ತಂತ್ರಗಳನ್ನು ಬಳಸಿಕೊಳ್ಳುವುದು). ಓದುವಾಗ ಲೇಖನ ಚಿಹ್ನೆಗಳನ್ನು ಗಮನಿಸಿಕೊಂಡು ಓದುವಂತೆ ಸೂಚನೆ ನೀಡುವುದು. ಬಳಿಕ ಅಧ್ಯಾಪಕರು ಮಾದರಿಯಾಗಿ ಓದುವುದು.

### ಆಶಯ ಗ್ರಹಣ ಪ್ರಶ್ನೆಗಳಿಗೆ ಉತ್ತರ ಬರೆಯುವುದು

ಮಕ್ಕಳು ಆಶಯ ಗ್ರಹಣ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರವನ್ನು ಕಂಡುಹಿಡಿಯಲಿ. ನಿಶ್ಚಿತ ಸಮಯದ ಬಳಿಕ ಕೆಲವರಿಂದ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಿಸುವುದು. ಉಳಿದವರಲ್ಲಿ ಗುರುತಿಸಿಕೊಳ್ಳಲು ಹೇಳುವುದು. ಮಕ್ಕಳು ಹೇಳಿದ ಉತ್ತರವು ತಪ್ಪಿದ್ದಲ್ಲಿ ಅಧ್ಯಾಪಕರು ಸರಿಪಡಿಸುವುದು. ಮಕ್ಕಳು ತಮ್ಮ ಚಟುವಟಿಕೆಯ ಪುಸ್ತಕದಲ್ಲಿ ಬರೆದುಕೊಳ್ಳಲಿ. ಬಳಿಕ ಕೆಲವರಿಂದ ಓದಿಸುವುದು. ಸರಿಯಾಗಿ ಉತ್ತರ ಬರೆದವರನ್ನು ಅಭಿನಂದಿಸುವುದು.

- **ಪಾತ್ರ ಚಿತ್ರಣ ಮಾಡುವುದು**

  ಬೀಬಜ್ಜಿ ಪಾಠದಲ್ಲಿ ಬರುವ ಪಾತ್ರಗಳ ಕುರಿತು ಮಕ್ಕಳಲ್ಲಿ ಚರ್ಚಿಸುವುದು.

- ಪಾಠದಲ್ಲಿ ಬಂದಿರುವ ಪಾತ್ರಗಳು ಯಾವುವು?
- ಅವುಗಳಲ್ಲಿ ನಿಮಗಿಷ್ಟವಾದ ಪಾತ್ರ ಯಾವುದು ?
- ಆ ಪಾತ್ರದ ವಿಶೇಷತೆಗಳೇನು?
- ........................................
- ........................................
- .........................................

ಅಧ್ಯಾಪಕರು ಕೇಳಿದ ಪ್ರಶ್ನೆಗಳಿಗೆ ಮಕ್ಕಳು ಹೇಳಿದ ಉತ್ತರವನ್ನು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಲ್ಲಿ ಗುಂಪುಗಳಾಗಿ ಕುಳಿತು ಬರೆಯಲು ಹೇಳುವುದು. ಗುಂಪಿನಿಂದ ಒಬ್ಬರಲ್ಲಿ ಓದಿಸುವುದು. ಎಲ್ಲ ಗುಂಪುಗಳ ಮಂಡನೆಯ ಬಳಿಕ ಬಿಟ್ಟು ಹೋದ ಅಂಶಗಳಿದ್ದರೆ ಅವುಗಳನ್ನು ಸೇರಿಸಿಕೊಂಡು ಪರಿಷ್ಕರಿಸಿ ತಮ್ಮ ಪುಸ್ತಕದಲ್ಲಿ ಬರೆದುಕೊಳ್ಳಲು ಹೇಳುವುದು.

**ಪಾತ್ರ ಚಿತ್ರಣವನ್ನು ಹೀಗೂ ಬರೆಯಬಹುದಲ್ಲವೇ**

## ಬೀಬಜ್ಜಿ

ಡಾಕ್ಟರ್ ಮಿರ್ಜಾ ಬಶೀರ್ ಅವರು ಬರೆದ ಬೀಬಜ್ಜಿ ಕಥೆಯಲ್ಲಿ ಬರುವ ಪ್ರಧಾನ ಪಾತ್ರವೇ ಬೀಬಜ್ಜಿ. ಹಳ್ಳಿಯಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆದ ಅವಳು ಅನಕ್ಷರಸ್ಥೆ. ಲೇಖಕರ ಕುಟುಂಬದಲ್ಲಿ ಒಬ್ಬಳಾಗಿ ಬೆರೆತಿದ್ದ ಬೀಬಜ್ಜಿ ಪ್ರತಿಯೊಂದು ವಿಷಯಕ್ಕೂ ಕಣ್ಣೀರು ಸುರಿಸುವುದು ಅವಳ ಮುಗ್ಧತೆಯನ್ನು ವ್ಯಕ್ತಪಡಿಸುತ್ತದೆ. ಮಕ್ಕಳು ಓದುವುದನ್ನು ಕಂಡು "ನನ್ಮಮ್ಮಕ್ಳ... ನಿಮಗೆಷ್ಟು ಕಷ್ಟ? ರಾತ್ರಿ ಎಲ್ಲಾ ಓದ್ತೀರಾ..." ಎನ್ನುವಲ್ಲಿ ಮಕ್ಕಳ ಬಗ್ಗೆ ಅವಳಗಿರುವ ಅಪಾರ ಕಾಳಜಿ ವ್ಯಕ್ತವಾಗುತ್ತದೆ. ಬೇಸಿಗೆ ರಜೆಯಲ್ಲಿ ಅಜ್ಜಿ ಮನೆಗೆ ಬಂದ ಮಕ್ಕಳನ್ನು ಬೀಬಜ್ಜಿಯು ಕಾಣುತ್ತಾಳೆ. ಅವಳು "ಈ ಬೇಸ್ತ್ವಾರ ನೀವು ಮೂರು ಜನ ಮೊಮ್ಮಕ್ಕಳು ನನ್ನ ಮನೆಗೆ ಊಟಕ್ಕೆ ಬರಬೇಕು" ಎಂದು ಪ್ರೀತಿಯಿಂದ ಆಹ್ವಾನಿಸುತ್ತಾಳೆ. ಅವಳ ಆಸೆಯಂತೆಯೇ ಮಕ್ಕಳು ಮನೆಗೆ ಬಂದಾಗ "ಅಯ್ಯೋ... ನನ್ಮಮ್ಮಕ್ಳ... ಯಾವಾಗ್ಬಂದ್ರಿ? ನಾನೇ ನಿಮ್ಮನ್ನು ಎತ್ಕಂಡು ಬರ್ತಿದ್ದೆ. ನೀವ್ನೀವೇ ಬಂದ್ರಾ?" ಎನ್ನುವಲ್ಲಿ ಅವರು ತನ್ನ ಆಹ್ವಾನವನ್ನು ಸ್ವೀಕರಿಸಿ ಬಂದದ್ದಕ್ಕಾಗಿ ಬಹು ಸಂಭ್ರಮ ಪಡುವುದು ಕಂಡುಬರುತ್ತದೆ. ಮಕ್ಕಳಿಗೆ ಅನ್ನ ಬಡಿಸಿ "ಅನ್ನ ಸ್ವಲ್ಪ ತಿನ್ನಿರಿ ,ಹೊಟ್ಟೆ ತುಂಬಾ ಹುಗ್ಗಿ ತಿನ್ನಬೇಕು" ಎನ್ನುವಲ್ಲಿ ಮಕ್ಕಳನ್ನು ಹೊಟ್ಟೆ ತುಂಬ ತಿನ್ನಿಸಿ ಅವರನ್ನು ತೃಪ್ತಿಪಡಿಸಬೇಕು ಎನ್ನುವ ಅಭಿಲಾಷೆ ವ್ಯಕ್ತವಾಗುತ್ತದೆ ಅವರಿಗೆ ಊಟ

ನೀಡುವ ಸಂತೋಷದಲ್ಲೋ ಗಡಿಬಿಡಿಯಲ್ಲೋ ಮುದ್ದೆ ಪಾತ್ರೆಯಲ್ಲಿದ್ದ ನೀರನ್ನೆಲ್ಲ ಹೊರಗೆ ಚೆಲ್ಲುವ ಬದಲು ಹುಗ್ಗಿಯ ಪಾತ್ರೆಗೆ ಸುರಿದು ಬಿಟ್ಟಾಗ ತನ್ನ ತಪ್ಪಿಗಾಗಿ ಪಶ್ಚಾತಾಪ ಪಡುತ್ತಾಳೆ. "ಅಯ್ಯೋ ನನ್ಮಮ್ಮಕ್ಳ.. ಹುಗ್ಗಿ ಹಾಳ್ ಮಾಡ್ಬಿಟ್ನಲ್ಲ " ಎನ್ನುವಲ್ಲಿ ಅವಳ ದುಃಖ, ಆತಂಕ, ಕಳವಳ ಕಂಡು ಬರುತ್ತದೆ. ಕೊನೆಗೆ ಮಕ್ಕಳು "ಅರೇ, ಹೌದು, ಹುಗ್ಗಿ ಚೆನ್ನಾಗಿಯೇ ಇದೆ," ಎಂದು ಹೇಳುತ್ತಾ ಸಂತೋಷದಿಂದ ಹುಗ್ಗಿಯನ್ನು ತಿನ್ನುವಾಗ ಅವಳು ಪಡುವ ಸಂತಸ, ಸಂಭ್ರಮ, ಅವಳ ಪ್ರೀತಿಯನ್ನು ಪ್ರಕಟಿಸುತ್ತದೆ. ಒಟ್ಟಿನಲ್ಲಿ ಈ ಪಾಠದಲ್ಲಿ ಬೀಬಜ್ಜಿಯು ಓರ್ವ ಮಮತಾಮಯಿ ಅಜ್ಜಿಯಾಗಿ, ಮುಗ್ಧ ಸ್ವಭಾವದವಳಾಗಿ ಓದುಗರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತಾಳೆ.

- **ದಿನಚರಿ ಬರೆಯುವುದು**

ದಿನಚರಿ ಬರೆಯುವುದರ ಕುರಿತು ಮಕ್ಕಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ದಿನಚರಿ ಎಂದರೇನು?
- ದಿನಚರಿಯಲ್ಲಿ ಯಾವ ವಿಷಯಗಳೆಲ್ಲ ಒಳಗೊಂಡಿರಬೇಕು?
- ದಿನಚರಿಯನ್ನು ಬರೆಯುವ ರೀತಿ ಹೇಗೆ ?

ಹೀಗೆ ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಅವರನ್ನು ದಿನಚರಿ ಬರೆಯಲು ತೊಡಗುವಂತೆ ಮಾಡುವುದು. ಬಳಿಕ ಪ್ರತಿಯೊಬ್ಬರಲ್ಲಿಯೂ ದಿನಚರಿ ಬರೆಯುವಂತೆ ಹೇಳುವುದು. ನಿರ್ದಿಷ್ಟ ಸಮಯದ ನಂತರ ಕೆಲವು ಮಕ್ಕಳಿಂದ ಓದಿಸುವುದು. ಬಿಟ್ಟು ಹೋದ ಅಂಶಗಳಿದ್ದರೆ ಅದನ್ನೂ ಸೇರಿಸಿಕೊಂಡು ಪರಿಷ್ಕರಿಸಿ ಬರೆಯಲು ಹೇಳುವುದು. ಬಳಿಕ ಅಧ್ಯಾಪಕರು ಮಾದರಿ ದಿನಚರಿಯನ್ನು ನೀಡುವುದು.

## ದಿನಚರಿಯನ್ನು ಹೀಗೆಯೂ ಬರೆಯಬಹುದು

15.03.2024

ಶುಕ್ರವಾರ

ಇವತ್ತು ನನಗೆ ಬಹಳ ಸಂತೋಷದ ದಿನ. ಯಾಕೆಂದರೆ ಇಂದು ಬೀಬಜ್ಜಿಯ ಮನೆಯಲ್ಲಿ ಬಹಳ ಸ್ವಾದಿಷ್ಟಕರವಾದ ರಾಗಿ ಮುದ್ದೆ ಮತ್ತು ಕಡ್ಲೆಬೇಳೆಯ ಹುಗ್ಗಿಯನ್ನು ಸೇವಿಸಿದಾಗ ನನಗಾದ ಖುಷಿ ಅಷ್ಟಿಷ್ಟಲ್ಲ ಇಷ್ಟರವರೆಗೆ ಅವಳ ಪ್ರೀತಿಯನ್ನು ಮಾತ್ರ ಅನುಭವಿಸಿದ್ದ ನಮಗೆ ಇವತ್ತು ಅವಳ ಕೈ ರುಚಿಯನ್ನು ಅನುಭವಿಸುವ ಭಾಗ್ಯವೂ ದೊರೆಯಿತು. ಆಹಾ !ಎಷ್ಟು ರುಚಿಯಾಗಿತ್ತು ಆ ಹುಗ್ಗಿ.! ನನ್ನ ಜೀವನದಲ್ಲಿ ಇದುವರೆಗೆ ನಾನು ಅಷ್ಟು ರುಚಿಕರವಾದ ಹುಗ್ಗಿಯನ್ನು ತಿಂದಿರಲಿಲ್ಲ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದ ನಮಗೆ ತಿನ್ನುವುದಕ್ಕೇನೂ ಕೊರತೆ ಇಲ್ಲ. ಆದುದರಿಂದ ನನ್ನ ಅಜ್ಜಿಗೆ ನಾವು ಅಲ್ಲಿಗೆ

ಹೋಗುವುದು ಇಷ್ಟವಿರಲಿಲ್ಲ .ಆದರೂ ಇವತ್ತು ಬೀಬಜ್ಜಿಯ ಮನೆಯಲ್ಲಿ ಸೇವಿಸಿದ ಆಹಾರದ ರುಚಿಗೆ ಯಾವುದೂ ಸಮವಾಗಲಾರದು. ಯಾವಾಗಲೂ ನಮ್ಮ ಹಿತವನ್ನೇ ಬಯಸುತ್ತಿದ್ದ ಬೀಬಜ್ಜಿ ನಮ್ಮ ಕುಟುಂಬದವರಲ್ಲಿ ಒಬ್ಬಳಾಗಿದ್ದಳು. ನಮ್ಮನ್ನು ಮೊಮ್ಮಕ್ಕಳೆಂದೇ ಕರೆಯುತ್ತಿದ್ದಳು. ಅವಳು ತನ್ನ ಮರೆವಿನಿಂದ ಪಾತ್ರೆ ತೊಳೆದ ನೀರನ್ನು ಹುಗ್ಗಿಗೆ ಹಾಕಿ ಬಿಟ್ಟಾಗ ಎಷ್ಟೊಂದು ದುಃಖಿಸಿದಳು. ತನ್ನಿಂದ ನಡೆದ ಅಚಾತುರ್ಯಕ್ಕೆ ತನ್ನನ್ನು ತಾನೇ ಶಪಿಸಿಕೊಂಡಳು. ಆ ಸಮಯದಲ್ಲಿ ನಮಗೆ ಹೊಳೆದ ಆ ಉಪಾಯ ಅವಳನ್ನು ಆ ಆಘಾತದಿಂದ ಚೇತರಿಸಿಕೊಳ್ಳುವಂತೆ ಮಾಡಿತಲ್ಲವೇ? ದೇವರೇ ನಿನಗೆ ಸಾವಿರ ನಮಸ್ಕಾರಗಳು. ಅಲ್ಲದಿದ್ದರೆ ಅದೇ ಅವಳ ದುಃಖಕ್ಕೆ ಕಾರಣವಾಗುತ್ತಿತ್ತು.

ಅಂತೂ ಇವತ್ತು ನೀಡಿದ ಆಹಾರದಲ್ಲಿ ಅವಳ ಪ್ರೀತಿ, ಕರುಣೆ, ಮಮತೆ, ವಾತ್ಸಲ್ಯ ಎಲ್ಲವೂ ಸೇರಿದ್ದು ಆಹಾರದ ರುಚಿಯನ್ನು ಮತ್ತಷ್ಟು ಹೆಚ್ಚಿಸಿತ್ತು. ಜೊತೆಯಲ್ಲಿ ಅವಳು ಆ ರುಚಿಯನ್ನು ಅನುಭವಿಸಿದಾಗ ಅವಳ ಮುಖ ಪ್ರಕಾಶಿಸತೊಡಗಿದಾಗ ನಮಗಾದ ಸಂತೋಷ ವರ್ಣಿಸಲಸದಳ. ದೇವರೇ, ಇನ್ನೊಮ್ಮೆ ಬೀಬಜ್ಜಿಯ ಕೈ ರುಚಿಯನ್ನು ಅನುಭವಿಸುವ ಭಾಗ್ಯವನ್ನು ಕರುಣಿಸು.

- **ಸಂದೇಶ ಬರೆಯುವುದು**

ಬೀಬಜ್ಜಿ ಕಥೆಯ ಸಂದೇಶವನ್ನು ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಬಳಿಕ ಕೆಲವರಿಂದ ಓದಿಸುವುದು. ಮಕ್ಕಳನ್ನು ಗುಂಪು ಮಾಡಿ ಇನ್ನೊಮ್ಮೆ ಪರಿಷ್ಕರಿಸಿ ಬರೆಯಲು ಹೇಳುವುದು. ಬಳಿಕ ಓದಿಸುವುದು, ಉತ್ತಮವಾಗಿ ಬರೆದವರನ್ನು ಅಭಿನಂದಿಸುವುದು.

**ಸಂದೇಶವನ್ನು ಹೀಗೂ ಬರೆಯಬಹುದು**

ನಾವು ನಮ್ಮ ಜೀವನದಲ್ಲಿ ಗುರು ಹಿರಿಯರಿಗೆ ಗೌರವ ನೀಡಬೇಕು, ವೃದ್ಧರನ್ನು ಕಡೆಗಣಿಸಬಾರದು. ಅವರ ಅಂತ:ಕರಣವನ್ನು ಮೆಚ್ಚಿಕೊಳ್ಳಬೇಕು. ಅವರ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳಬೇಕು.

- **ಲಿಖಿತ ಭಾಷಣ ತಯಾರಿ**

ವಿದ್ಯಾರ್ಥಿಗಳು ಈಗಾಗಲೇ ಭಾಷಣ ಕಲೆಯ ಕುರಿತು ಚರ್ಚಿಸಿರುತ್ತಾರೆ. ಲಿಖಿತ ಭಾಷಣ ತಯಾರಿಸುವಾಗ ಅದಕ್ಕೆ ಉತ್ತಮವಾದ ಒಂದು ಪೂರ್ವ ತಯಾರಿ ಮಾಡಬೇಕಾದದ್ದು ಅಗತ್ಯವಾಗಿದೆ. ಭಾಷಣ ಮಾಡುವ ಮೊದಲು ವಿಷಯದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಬೇಕು. ಬಳಿಕ ಸಂಗ್ರಹಿಸಿದ ಮಾಹಿತಿಗಳನ್ನು ಲಿಖಿತ ಭಾಷಣವಾಗಿ ಪರಿವರ್ತಿಸಬೇಕು. ಪ್ರಸ್ತುತ 'ಇಂದಿನ ಸಮಾಜದಲ್ಲಿ ವೃದ್ಧರ ಸ್ಥಿತಿಗತಿಗಳು' ಎಂಬ ವಿಷಯದ ಕುರಿತು ತಮಗೆ ತಿಳಿದಿರುವ ವಿಷಯಗಳನ್ನು ಅವರು ಹೇಳಲಿ. ಲಿಖಿತ ಭಾಷಣದಲ್ಲಿ ಬರವಣಿಗೆಯು ಉತ್ತಮ ಪುರುಷದಲ್ಲಿ ಇರಬೇಕು, ಸಂಬೋಧನೆಯೂ ಇರಬೇಕು ಎಂಬುದನ್ನು ಮಕ್ಕಳಲ್ಲಿ ಸೂಚಿಸುವುದು. ವಿದ್ಯಾರ್ಥಿಗಳು ಹೇಳಿದ ವಿಷಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಲಿಖಿತ ಭಾಷಣದಲ್ಲಿ ಒಳಗೊಳ್ಳಬೇಕಾದ ಮುಖ್ಯ ಅಂಶಗಳ ಕುರಿತು ಚರ್ಚೆ ನಡೆಸುವುದು. ಬಳಿಕ ಅವರು ಚರ್ಚಿಸಿದ

ವಿಷಯಗಳನ್ನೆಲ್ಲ ಸೇರಿಸಿಕೊಂಡು ವೈಯಕ್ತಿಕವಾಗಿ ಭಾಷಣವನ್ನು ಬರೆಯಲಿ. ಆಯ್ದ ವಿದ್ಯಾರ್ಥಿಗಳಿಂದ ಸಿದ್ಧಪಡಿಸಿದ ಭಾಷಣಗಳನ್ನು ಓದಿಸುವುದು. ವಿದ್ಯಾರ್ಥಿಗಳು ಪರಸ್ಪರ ಚರ್ಚಿಸಿ ಅಧ್ಯಾಪಕರ ಮಾರ್ಗದರ್ಶನದೊಂದಿಗೆ ತಮ್ಮ ಬರವಣಿಗೆಗಳನ್ನು ಉತ್ತಮಪಡಿಸಲು ಹೇಳುವುದು. ಉತ್ತಮಗೊಳಿಸಿದ ಬರಹವನ್ನು ತಮ್ಮ ಚಟುವಟಿಕೆಯ ಪುಸ್ತಕದಲ್ಲಿ ಬರೆಯಲು ಹೇಳುವುದು.

## ಲಿಖಿತ ಭಾಷಣ ಹೀಗೂ ಇರಬಹುದು

ಗೌರವಾನ್ವಿತ ಸಭಾಧ್ಯಕ್ಷರೇ, ಮುಖ್ಯ ಅತಿಥಿಗಳೇ ಹಾಗೂ ನನ್ನ ಒಲವಿನ ಸಹಪಾಠಿಗಳೇ ಎಲ್ಲರಿಗೂ ನನ್ನ ನಮಸ್ಕಾರಗಳು. ನಾನಿವತ್ತು ನಿಮ್ಮ ಮುಂದೆ 'ಇಂದಿನ ಸಮಾಜದಲ್ಲಿ ವೃದ್ಧರ ಸ್ಥಿತಿಗತಿಗಳು' ಎಂಬ ವಿಷಯದ ಕುರಿತು ಕೆಲವು ವಿಚಾರಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ

ಸಮಾಜ ಜೀವಿಯಾದ ಮನುಷ್ಯನ ಜೀವನವು ಬಹಳ ಸಂಕೀರ್ಣವಾಗಿದ್ದು ಅನೇಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿದೆ. ಅದರಲ್ಲಿ ಪ್ರಮುಖವಾದದ್ದು ವೃದ್ಧರ ಸಮಸ್ಯೆ. ಇಂದಿನ ಅಣು ಕುಟುಂಬದ ವ್ಯವಸ್ಥೆಯಲ್ಲಿ ವೃದ್ಧರನ್ನು ಪರಿಗಣಿಸದ ಪರಿಸ್ಥಿತಿ ಕೆಲವೆಡೆಗಳಲ್ಲಿ ಉಂಟಾಗಿದೆ. ಬಹಳ ಹಿಂದಿನಿಂದ ನಮ್ಮ ಸಮಾಜ ಹಿರಿಯರನ್ನು ಗೌರವಿಸುವ, ಅವರ ಹಿತಾಸಕ್ತಿಗಳನ್ನು ನೋಡಿಕೊಳ್ಳುವ ಜವಬ್ದಾರಿ ವಹಿಸಿಕೊಂಡಿತ್ತು. ಹಿರಿಯರನ್ನು ನೋಡಿಕೊಳ್ಳುವ ಜವಾಬ್ದಾರಿ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯದಾಗಿತ್ತು. ಎಲ್ಲಾ ಕಡೆಯೂ ಹಿರಿಯರನ್ನು ಗೌರವಾದರಗಳಿಂದ ನಡೆಸಿಕೊಳ್ಳುತ್ತಿದ್ದರು. ಅಕ್ಕರೆಯಿಂದ ಸಾಕಿ ಬೆಳೆಸಿದ ತಮ್ಮ ಹಿರಿಯರನ್ನು, ಕೊನೆಯವರೆಗೂ ನೋಡಿಕೊಳ್ಳುವುದು ಒಂದು ಕರ್ತವ್ಯ ಎಂದು ಹಿಂದಿನ ಕಾಲದಲ್ಲಿ ತಿಳಿದುಕೊಂಡಿದ್ದರು. ಹಿರಿಯರ ಋಣ ತೀರಿಸುವ ಒಂದು ವ್ಯವಸ್ಥೆ ಎನಿಸಿದರು ಇದರಲ್ಲಿ ಪರಸ್ಪರ ಹಿತ ಅಡಗಿತ್ತು.

ಇಂದು ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ವಯಸ್ಸಾದವರು ನಿಷ್ಪ್ರಯೋಜಕರು, ಖರ್ಚಿಗೆ ದಾರಿ, ತಮ್ಮ ಜೀವನಕ್ಕೆ ತೊಂದರೆ ಉಂಟು ಮಾಡುವವರು, ಹೇಗಾದರೂ ಅವರನ್ನು ನೋಡಿಕೊಳ್ಳುವ ಜವಾಬ್ದಾರಿಯಿಂದ ತಪ್ಪಿಸಿಕೊಂಡರೆ ಸಾಕು ಎಂಬ ಮನೋಭಾವ ಹೊಸ ತಲೆಮಾರಿನವರಲ್ಲಿ ಕಂಡುಬರುತ್ತದೆ. ಕುಟುಂಬದ ಆಸರೆಯಾಗಿದ್ದ ಹಿರಿಯರು ಹೊರೆಯಾಗಿ ಪರಿವರ್ತನೆಯಾಗುವ ಸ್ಥಿತಿಯಲ್ಲಿದ್ದಾರೆ. ತಮ್ಮ ಜೀವಮಾನದಲ್ಲಿ ಸಂಪಾದಿಸಿದ ಆಸ್ತಿಪಾಸ್ತಿಯನ್ನು ಮಕ್ಕಳು, ಮರಿಮಕ್ಕಳ ವಶಕೊಪ್ಪಿಸಿ ತಮಗೆ ಉಳಿದುಕೊಳ್ಳಲು ಜಾಗವಿಲ್ಲದ ಸ್ಥಿತಿಯೂ ಕೆಲವರಿಗೆ ಬಂದಿರುತ್ತದೆ.

ವೃದ್ಧಾಪ್ಯ ಎನ್ನುವುದು ಅನಿವಾರ್ಯವಾದ ದೈಹಿಕ ಬದಲಾವಣೆ. ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ವೃದ್ಧರನ್ನು ಗಮನಿಸುವವರು ಯಾರು? ಅವರಿಗೆ ಅಶನ ವಸನ ವಸತಿಯೊಂದಿಗೆ ಸ್ನೇಹ ಸಾಂತ್ವನವನ್ನು ನೀಡುವವರು ಯಾರು? ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕು. ಈ ಸಂದರ್ಭದಲ್ಲಿ ಅವರ ಅವಗಣನೆ, ಅವಹೇಳನ ಸಲ್ಲದು. ಅವರ ಬದುಕಿನಲ್ಲಿ ಅವರು ಕಂಡುಂಡ ಎಲ್ಲಾ ಅನುಭವಗಳ ಸಾರವನ್ನು ನಮ್ಮದಾಗಿಸಿಕೊಳ್ಳಬೇಕು.

ವೃದ್ಧರು ಇಂದು ಮೂರು ವಿಧದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ -

1. ಮಕ್ಕಳಿದ್ದೂ ಅನಾಥರಾಗುವವರು ಮೊದಲ ಗುಂಪು. ಇಂಥವರು ಮಕ್ಕಳು, ಸೊಸೆ ಮೊಮ್ಮಕ್ಕಳು - ಇವರೊಂದಿಗೆ ಹೊಂದಾಣಿಕೆಯ ಕೊರತೆಯಿಂದ ಸೊರಗುತ್ತಾರೆ

2. ಸಾಕಷ್ಟು ಹಣವಿದೆ, ಬ್ಯಾಂಕ್ ಬ್ಯಾಲೆನ್ಸ್ ಇದೆ ,ದೊಡ್ಡ ಮನೆಯೂ ಇದೆ. ಮನೆ ಸೇರಿದರೆ ಒಂಟಿತನದ ಕಾಟ. ಮಕ್ಕಳು ಉದ್ಯೋಗ ನಿಮಿತ್ತ ಪೇಟೆ ಸೇರಿರುತ್ತಾರೆ. ಹೆಣ್ಣು ಮಕ್ಕಳಿದ್ದರೆ ಗಂಡನ ಮನೆಯಲ್ಲಿ ಇರುತ್ತಾರೆ . ಕಷ್ಟಗಳು ಏನೇ ಬಂದರೂ ಒಬ್ಬರೇ ಅನುಭವಿಸಬೇಕಾದ ಸ್ಥಿತಿ.

3. ಬಡತನದ ವೃದ್ಧಾಪ್ಯ. ಜೀವನಪೂರ್ತಿ ಬಡತನದಲ್ಲಿಯೇ ಸೊರಗಿ ಹೋಗುತ್ತಾರೆ. ಜೊತೆಯಲ್ಲಿ ಆರೋಗ್ಯ ಸಮಸ್ಯೆಗಳು ಅವರನ್ನು ಕಾಡುತ್ತವೆ.

ವೃದ್ಧಾಪ್ಯವನ್ನು ನೆಮ್ಮದಿಯ ಬದುಕನ್ನಾಗಿಸುವ ನಿಟ್ಟಿನಲ್ಲಿ ವ್ಯಕ್ತಿ ಮತ್ತು ಸಮಾಜ ಇಬ್ಬರ ಪಾತ್ರವೂ ಇದೆ. ಮಾನವೀಯತೆಯಿಂದ ವೃದ್ಧರನ್ನು ನೋಡಿಕೊಳ್ಳುವುದು ಸಮಾಜದ ಕರ್ತವ್ಯ. ಸಾಮಾಜಿಕ ಭದ್ರತೆ ಮತ್ತು ಆರೋಗ್ಯ ವಿಮೆಯಂತಹ ಯೋಜನೆಗಳು ವೃದ್ಧರಿಗೆ ರಕ್ಷಣೆ ನೀಡುತ್ತವೆ. ಅಂತಹ ಯೋಜನೆಗಳು ವೃದ್ಧರಿಗೆ ದೊರೆಯುವಂತೆ ನಾವು ಮಾಡಬೇಕು. ಕಾಲಕ್ರಮೇಣ ನಾವು ವೃದ್ಧರಾಗುತ್ತೇವೆ. ನಾವು ಈ ಸ್ಥಿತಿಯನ್ನು ಎದುರಿಸಬೇಕಾದ ಸಂದರ್ಭ ಬರಬಹುದು ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ನಿಟ್ಟಿನಲ್ಲಿ ಯೋಚಿಸುವಾಗ ವೃದ್ಧರನ್ನು ಗೌರವಿಸುವ ಜವಾಬ್ದಾರಿ ನಮ್ಮೆಲ್ಲರದು ಆಗಿದೆ ಎಂದು ಹೇಳುತ್ತಾ ನನ್ನ ಮಾತುಗಳನ್ನು ಇಲ್ಲಿ ಕೊನೆಗೊಳಿಸುತ್ತೇನೆ. ಹಿರಿಯರಿಗೆ ಗೌರವ ನೀಡುವುದೇ ದೇವರ ನೆಲೆ.

- **ಸಂಧಿಯನ್ನು ತಿಳಿಯುವುದು**

ಸಂಧಿಗಳ ಕುರಿತು ಮಕ್ಕಳಲ್ಲಿ ಪ್ರಶ್ನೆಗಳನ್ನು ಕೇಳುವುದು

- ಸಂಧಿ ಎಂದರೇನು?
- ಕನ್ನಡದ ಸಂಧಿಗಳು ಯಾವುವು?
- ಸಂಸ್ಕೃತದ ಸಂಧಿಗಳು ಯಾವುವು?
- ಈ ಪಾಠ ಭಾಗದಲ್ಲಿ ಯಾವ ಯಾವ ಸಂಧಿ ಪದಗಳು ಬಂದಿವೆ?

ಈ ರೀತಿಯ ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಅಭ್ಯಾಸ ಭಾಗದಲ್ಲಿ ಕೊಟ್ಟಿರುವ ಸಂಧಿ ಸಂಧಿಯನ್ನು ತಿಳಿಯುವುದು ಎಂಬ ಚಟುವಟಿಕೆಯ ಕಡೆಗೆ ಮಕ್ಕಳ ಗಮನವನ್ನು ಸೆಳೆಯುವುದು. ಬಳಿಕ ಅಭ್ಯಾಸ ಭಾಗದಲ್ಲಿ ಕೊಟ್ಟಿರುವ ಸಂಧಿಪದಗಳನ್ನು ವಿಂಗಡಿಸಿ ಸಂಧಿ ಕಾರ್ಯವನ್ನು ಬರೆಯಲು ಹೇಳುವುದು. ಬಳಿಕ ಕೆಲವು ಮಕ್ಕಳಲ್ಲಿ ಕರಿಹಲಗೆಯಲ್ಲಿ ಬರೆಯಲು ಹೇಳುವುದು. ಉಳಿದ ಮಕ್ಕಳಲ್ಲಿ ಅವರು ಬರೆದುದ್ದು ಸರಿಯೇ ಎಂದು ಪ್ರಶ್ನಿಸುವುದು. ಮಕ್ಕಳು ಬರೆದುದ್ದು ತಪ್ಪಿದ್ದಲ್ಲಿ ಅಧ್ಯಾಪಕರು ಅದನ್ನು ಸರಿಪಡಿಸುವುದು. ಮಕ್ಕಳಲ್ಲಿ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲು ಹೇಳುವುದು .

### ಸಂಧಿ ಕಾರ್ಯವನ್ನು ಹೀಗೂ ಬರೆಯಬಹುದು

- ಗಣ + ಈಶ - ಗಣೇಶ (ಅ + ಈ ಗಳ ಜಾಗದಲ್ಲಿ ಏ ಬರುವುದು)
- ಔಷಧ + ಉಪಚಾರ - ಔಷಧೋಪಚಾರ (ಅ + ಉ ಗಳ ಜಾಗದಲ್ಲಿ ಓ ಬರುವುದು)
- ಸಪ್ತ + ಋಷಿ - ಸಪ್ತರ್ಷಿ (ಅ + ಋ ಗಳ ಜಾಗದಲ್ಲಿ ಅರ್ ಬರುವುದು)

ಬಳಿಕ ಮಕ್ಕಳಲ್ಲಿ ಪಾಠದಲ್ಲಿ ಬರುವ ಗುಣಸಂಧಿಯಾಗುವ ಪದಗಳನ್ನು ಹುಡುಕಿ ವಿಂಗಡಿಸಿ ಸಂಧಿ ಕಾರ್ಯವನ್ನು ಬರೆಯಲು ಹೇಳುವುದು.

- ದುಃಖ + ಉದ್ರಿಕ್ತ - ದುಃಖೋದ್ರಿಕ್ತ (ಅ + ಉ ಗಳ ಜಾಗದಲ್ಲಿ ಓ ಬರುವುದು)
- ಹಿತ + ಉಪದೇಶ - ಹಿತೋಪದೇಶ (ಅ + ಉ ಗಳ ಜಾಗದಲ್ಲಿ ಓ ಬರುವುದು.)

- **ವಿಭಕ್ತಿ ಪ್ರತ್ಯಯಗಳನ್ನು ಸೇರಿಸುವುದು**

ಗದ್ಯಭಾಗದಲ್ಲಿ ವಿಭಕ್ತಿ ಪ್ರತ್ಯಯಗಳನ್ನು ಸೇರಿಸುವುದರ ಕುರಿತು ಕಳೆದ ತರಗತಿಯಲ್ಲಿ ಕಲಿತಿರುವರು. ಅದನ್ನು ಮತ್ತೊಮ್ಮೆ ಮಕ್ಕಳಿಗೆ ನೆನಪಿಸುವುದು. ಆ ಬಳಿಕ ಕೆಳಗೆ ಕೊಟ್ಟಿರುವಂತಹ ಗದ್ಯಭಾಗಕ್ಕೆ ಯಾವೆಲ್ಲ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಬಹುದು ಎಂಬುದನ್ನು ಗುಂಪಿನಲ್ಲಿ ಕುಳಿತು ಚರ್ಚಿಸಲು ಹೇಳುವುದು. ಮಕ್ಕಳು ಮರೆತಿದ್ದಲ್ಲಿ ಅಧ್ಯಾಪಕರೇ ವಿಭಕ್ತಿ ಪ್ರತ್ಯಯಗಳ ಕುರಿತು ಮತ್ತೊಮ್ಮೆ ಮಾಹಿತಿಗಳನ್ನು ನೀಡುವುದು.

ಕನ್ನಡದಲ್ಲಿ ಒಟ್ಟು ಏಳು ವಿಭಕ್ತಿ ಪ್ರತ್ಯಯಗಳಿವೆ. ಅವುಗಳು

ಪ್ರಥಮ - ಉ

ದ್ವಿತೀಯ - ಅನ್ನು

ತ್ರತೀಯ - ಇಂದ

ಚತುರ್ಥಿ - ಗೆ,ಕೆ

ಪಂಚಮಿ - ಇಂದ. (ದೆಸೆಯಿಂದ)

ಷಷ್ಠಿ - ಅ

ಸಪ್ತಮಿ - ಅಲ್ಲಿ

ಅಧ್ಯಾಪಕರು ವಿಭಕ್ತಿ ಪ್ರತ್ಯಯಗಳನ್ನು ಕರಿ ಹಲಗೆಯಲ್ಲಿ ಬರೆಯುವುದು. ಆ ಬಳಿಕ ಅಭ್ಯಾಸ ಭಾಗದಲ್ಲಿ ಕೊಟ್ಟಿರುವ ಗದ್ಯಭಾಗಕ್ಕೆ ಸೂಕ್ತವಾದ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿಕೊಂಡು ಬರೆಯಲು ಹೇಳುವುದು. ನಿಶ್ಚಿತ ಸಮಯದ ಬಳಿಕ ಕೆಲವು ವಿದ್ಯಾರ್ಥಿಗಳಲ್ಲಿ ಅದನ್ನು ಓದಿಸುವುದು.

**ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಗದ್ಯ ಭಾಗವನ್ನು ಹೀಗೆ ಬರೆಯಬಹುದು**

ಲಕ್ಷ್ಮಿಯು ಒಂದು ದಿನ ಮನೆಯಿಂದ ಶಾಲೆಗೆ ಬೇಗನೆ ಹೊರಟಳು. ಬೆಳಗ್ಗಿನ ಸಮಯವಾದುದರಿಂದ ಬಸ್ ನಿಲ್ದಾಣದಲ್ಲಿ ಜನರು ಕಿಕ್ಕಿರಿದು ತುಂಬಿದ್ದರು. ಬಸ್ಸು ಬಂದಾಗ ಅದರಲ್ಲಿ ಹೇಗೂ ನುಗ್ಗಿದಳು. ಅವಳಿಗೆ ಕುಳಿತುಕೊಳ್ಳಲು ಒಬ್ಬ ಬಾಲಕಿಯ ಹತ್ತಿರ ಸೀಟು ಸಿಕ್ಕಿತು. ಹಿರಿಯರು ಒಬ್ಬರು ಬಸ್ ಹತ್ತಿದ ಕೂಡಲೇ ಲಕ್ಷ್ಮಿಯು ತನ್ನ ಸೀಟ್ ಅನ್ನು ಅವರಿಗೆ ಬಿಟ್ಟು ಕೊಟ್ಟಳು.

**ಸೂಚನೆ:** ಬಸ್ಸು ಬಂದಾಗ ಅದರಲ್ಲಿ ಹೇಗೋ ನುಗ್ಗಿ ಎಂಬಲ್ಲಿ ನುಗ್ಗಿದಳು ಎಂದು ಓದಿಕೊಳ್ಳಬೇಕು. ಅಲ್ಲಿ ಯಾವುದೇ ವಿಭಕ್ತಿ ಪ್ರತ್ಯಯ ಬರುವುದಿಲ್ಲ.

- **ವಾಕ್ಯ ರಚನೆ ಮಾಡುವುದು**

ಗದ್ಯಭಾಗಗಳಲ್ಲಿ ಬಳಸುವ ಕೆಲವು ಭಾಷಾ ಪ್ರಯೋಗಗಳು ವಿಶೇಷ ಅರ್ಥಗಳನ್ನು ಒಳಗೊಂಡಿರುತ್ತವೆ. ಮಾತ್ರವಲ್ಲ ಭಾಷಾ ಸೌಂದರ್ಯವನ್ನು ಹೆಚ್ಚಿಸುತ್ತವೆ. ಅಭ್ಯಾಸ ಭಾಗದಲ್ಲಿ ಕೊಟ್ಟಿರುವ ಅಡಿಗೆರೆ ಹಾಕಿದ ಪದ ಪ್ರಯೋಗದ ಅರ್ಥವನ್ನು ಮಕ್ಕಳಲ್ಲಿ ಕೇಳುವುದು. ಎಲ್ಲರಲ್ಲಿಯೂ ಬರೆಯಲು ಹೇಳುವುದು. ಬಳಿಕ ಕೆಲವರಿಂದ ಓದಿಸುವುದು. ತಪ್ಪು ಬರೆದವರನ್ನು ತಿದ್ದುವುದು. ಬಳಿಕ ಅಧ್ಯಾಪಕರು ತಾವು ಬರೆದ ಸಮರ್ಪಕವಾದ ವಾಕ್ಯವನ್ನು ಕರಿಹಲಗೆಯಲ್ಲಿ ಬರೆಯುವುದು.

**ವಾಕ್ಯ ರಚನೆಯನ್ನು ಹೀಗೂ ಮಾಡಬಹುದು**

1. **ತುದಿಗಾಲಲ್ಲಿ ನಿಲ್ಲು - ಕಾತರದಿಂದ ಕಾಯು.**

ಬೆಂಗಳೂರಿಗೆ ಪ್ರವಾಸ ಹೋದ ಮಕ್ಕಳು ನೀರಲ್ಲಿ ಆಟ ಆಡಲು ತುದಿಗಾಲಲ್ಲಿ ನಿಲ್ಲುತ್ತಾರೆ.

2. **ಹನಿಗಣ್ಣಾಗು - ಆನಂದ ಭಾಷ್ಪ ಸುರಿಸು.**

ತುಂಬಾ ಬಡತನದಲ್ಲಿ ಬೆಳೆದ ಸುಧಾಕರನಿಗೆ ವಿದೇಶದಲ್ಲಿ ಉದ್ಯೋಗ ದೊರೆತು ಅಲ್ಲಿಗೆ ಹೊರಟು ನಿಂತಾದ ಅವನ ತಂದೆ ತಾಯಿಯರು ಹನಿಗಣ್ಣಾದರು.

ವಿಶೇಷಚೇತನಳಾದ ಮಗಳು 10ನೇ ತರಗತಿಯ ಪರೀಕ್ಷೆಯಲ್ಲಿ ಉನ್ನತ ಅಂಕಗಳನ್ನು ಗಳಿಸಿದಾಗ ಅವಳ ತಂದೆ ತಾಯಿಯರು ಹನಿಗಣ್ಣಾದರು.

- **ಕರ ಪತ್ರ ತಯಾರಿಸುವುದು**

ಕರಪತ್ರ ತಯಾರಿಸುವ ರೀತಿಯನ್ನು ಮಕ್ಕಳು ಒಂದನೇ ಘಟಕದಲ್ಲಿ ತಿಳಿದಿರುತ್ತಾರೆ. ಅಂತೆಯೇ ಇಲ್ಲಿ ಕೊಟ್ಟಿರುವ ವಿಷಯದ ಕುರಿತು ಗುಂಪಿನಲ್ಲಿ ಕುಳಿತು ಚರ್ಚಿಸಿ ಕರಪತ್ರ ತಯಾರಿಸಲಿ. ನಿರ್ದಿಷ್ಟ ಸಮಯದ ಬಳಿಕ ಗುಂಪಿನಿಂದ ಒಬ್ಬರು ಮಂಡಿಸಲಿ. ಒಂದು ಗುಂಪಿನವರು ಮಂಡಿಸುವಾಗ ಉಳಿದ ಗುಂಪಿನವರು ಗಮನಿಸಲಿ. ಎಲ್ಲ ಗುಂಪುಗಳ ಮಂಡನೆಯ ಬಳಿಕ ಬಿಟ್ಟು ಹೋದ ಅಂಶಗಳನ್ನು ಸೇರಿಸಿಕೊಂಡು, ಪರಿಷ್ಕರಿಸಿ ಉತ್ತಮವಾದ ಕರಪತ್ರವನ್ನು ತಯಾರಿಸಲಿ.

**ಕರಪತ್ರ ಹೀಗೂ ಬರೆಯಬಹುದು**

## ವ್ಯಸನ ಮುಕ್ತ ಜೀವನ ಹಸನಾಗುವುದು

ಕಾಸರಗೋಡು
28/3/2024.

ಮಾನ್ಯರೇ,

'ಆರೋಗ್ಯವೇ ಭಾಗ್ಯ' ಎಂಬ ನಾಣ್ನುಡಿಯಂತೆ ನಮಗೆ ಆರೋಗ್ಯವೊಂದಿದ್ದರೆ ಜೀವನದಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು. ಮನುಷ್ಯರು ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯದಿಂದ ಇದ್ದರೆ ಅವರು ಯಾವಾಗಲೂ ಸುಖಿಗಳಾಗಿರುತ್ತಾರೆ. ಆದರೆ ಇಂದಿನ ಯುವ ಪೀಳಿಗೆಯು ದುರ್ವ್ಯಸನಗಳ ದಾಸರಾಗಿ ತಮ್ಮ ಬದುಕನ್ನು ತಾವೇ ಹಾಳುಗೆಡಹುತ್ತಿರುವುದನ್ನು ಕಾಣುತ್ತಿದ್ದೇವೆ. ಮದ್ಯ ಮಾದಕ ವಸ್ತುಗಳು ನಮ್ಮನ್ನಷ್ಟೇ ಅಲ್ಲ ನಮ್ಮ ಕುಟುಂಬವನ್ನೂ ಸಮಾಜವನ್ನೂ ಹಾಳುಗೆಡಹುತ್ತದೆ. ಮಾತ್ರವಲ್ಲ ಇದರಿಂದ ಅನೇಕ ರೀತಿಯ ಮಾರಣಾಂತಿಕ ಕಾಯಿಲೆಗಳು ಬರುತ್ತವೆ. ಕೆಟ್ಟ ಚಟಗಳಿಂದಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಕಲಿಕೆಯಿಂದ ವಿಮುಖರಾಗುವರು. ಪಾಠಗಳಲ್ಲಿ ಆಸಕ್ತಿಯನ್ನು ಕಳೆದುಕೊಂಡು ಯಾವುದೋ ಭ್ರಮಾಲೋಕದಲ್ಲಿ ವಿಹರಿಸುತ್ತಾ ವಾಸ್ತವ ಬದುಕಿನ ಅರಿವಿನಿಂದ ವಂಚಿತರಾಗುತ್ತಾರೆ. ಬೆಳೆಯುವ ಪ್ರಾಯದಲ್ಲಿ ಆರೋಗ್ಯವನ್ನು ಹಾಳು ಮಾಡುವುದಲ್ಲದೆ ತಮ್ಮ ಭವಿಷ್ಯವನ್ನು ಕತ್ತಲೆಯ ಕೂಪಕ್ಕೆ ತಳ್ಳುತ್ತಾರೆ. ಮಾತ್ರವಲ್ಲ ಬಾಂಧವ್ಯದಲ್ಲಿಯೂ ಬಿರುಕನ್ನುಂಟುಮಾಡುತ್ತಾರೆ. ನಾವು ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ ಮುಂದೊಂದು ದಿನ ಬಹುದೊಡ್ಡ ಸಾಮಾಜಿಕ ಸಮಸ್ಯೆಯನ್ನು ಎದುರಿಸಬೇಕಾದೀತು. ಮಾನವ ಸಂಪನ್ಮೂಲದ ಕೊರತೆ ಉಂಟಾಗಬಹುದು.ಆದುದರಿಂದ ನಾವೆಲ್ಲರೂ ಒಗ್ಗಟ್ಟಾಗಿ ವ್ಯಸನ ಮುಕ್ತ ಸಮಾಜದ ನಿರ್ಮಾಣಕ್ಕಾಗಿ ದುಡಿಯೋಣ.

ವ್ಯಸನ ಮುಕ್ತ ಜೀವನ;
ಅನುದಿನವೂ ಪಾವನ.

ಹಚ್ಚಿಕೊಂಡರೆ ವ್ಯಸನ
ಬಲಿಯಾದೀತು ಜೀವನ.

ಇತೀ,
ಅಭ್ಯುದಯಾಕಾಂಕ್ಷಿ,
ಕಾಸರಗೋಡು.

- ## ಸ್ವಾರಸ್ಯ ಬರೆಯುವುದು

ಸರ್ವಜ್ಞನ ವಚನದಲ್ಲಿ ಬಳಸಿದ ವಿಶಿಷ್ಟ ಪದ ಪ್ರಯೋಗಗಳು, ಶೈಲಿ ಹಾಗೂ ಅವುಗಳು ವಚನದಲ್ಲಿ ಹೊರ ಹೊಮ್ಮಿಸಿದ ಅರ್ಥದ ಕುರಿತು ಮಕ್ಕಳಲ್ಲಿ ಚರ್ಚಿಸಲು ಹೇಳುವುದು. ನಂತರ ಸ್ವಾರಸ್ಯ ಬರವಣಿಗೆಯಲ್ಲಿರಬೇಕಾದ ವಿಚಾರಗಳ ಕುರಿತು ಚರ್ಚಿಸುವುದು. ಬಳಿಕ ಕೊಟ್ಟಿರುವ ಸಾಲುಗಳ ಸ್ವಾರಸ್ಯವನ್ನು ವೈಯಕ್ತಿಕವಾಗಿ ಬರೆಯಲು ಹೇಳುವುದು. ನಿಶ್ಚಿತ ಸಮಯದ ಬಳಿಕ ಮಂಡಿಸಲು ಹೇಳುವುದು. ಮಂಡನೆಯಲ್ಲಿ ತಪ್ಪುಗಳೇನಾದರೂ ಇದ್ದಲ್ಲಿ ಪರಿಷ್ಕರಿಸಿ ಮತ್ತೊಮ್ಮೆ ಬರೆಯಲು ಹೇಳುವುದು.

## ಸ್ವಾರಸ್ಯವನ್ನು ಹೀಗೂ ಬರೆಯಬಹುದು

ನಾವು ಇನ್ನೊಬ್ಬರಿಗೆ ಕೇಡನ್ನು ಬಯಸಿದರೆ ನಮಗೆ ಕೇಡು ಉಂಟಾಗುತ್ತದೆ. ಆದುದರಿಂದ ನಾವು ಯಾರಿಗೂ ಕೆಟ್ಟದ್ದನ್ನು ಬಯಸಬಾರದು. ಇನ್ನೊಬ್ಬನಿಗೆ ಕೇಡು ಮಾಡಿದವನೇ ಮೊದಲು ಕೆಟ್ಟು ಹೋಗುತ್ತಾನೆ ಎಂಬುದನ್ನು ಸರ್ವಜ್ಞನು ತನ್ನ ವಚನದಲ್ಲಿ ಬಹಳ ಸ್ವಾರಸ್ಯ ಪೂರ್ಣವಾಗಿ ವಿವರಿಸಿದ್ದಾನೆ. ದೀಪವನ್ನು ಆರಿಸಲು ಪ್ರಯತ್ನಿಸುವ ಹಾತೆಯು ತಾನೇ ಅದಕ್ಕೆ ಬಲಿಯಾಗುವಂತೆ ಇಲ್ಲಿಯೂ ಸಂಭವಿಸುತ್ತದೆ.

- ## ಹೋಲಿಸಿ ಬರೆಯುವುದು

ಚಟುವಟಿಕೆಯ ಭಾಗದಲ್ಲಿ ಕೊಡಲಾದ ಎರಡೂ ಕವನಗಳನ್ನು ವಿದ್ಯಾರ್ಥಿಗಳಲ್ಲಿ ಓದಲು ಹೇಳುವುದು. ಬಳಿಕ ಗುಂಪಿನಲ್ಲಿ ಕುಳಿತು ಚರ್ಚಿಸಿ ಟಿಪ್ಪಣಿ ಬರೆಯಲು ಹೇಳುವುದು. ನಿಶ್ಚಿತ ಸಮಯದ ಬಳಿಕ ಗುಂಪಿನಲ್ಲಿ ಒಬ್ಬರಿಂದ ಓದಿಸುವುದು . ಬಿಟ್ಟುಹೋದ ಅಂಶಗಳಿದ್ದರೆ ಸೇರಿಸಿಕೊಂಡು ಉತ್ತಮಪಡಿಸಿ ಮತ್ತೊಮ್ಮೆ ಬರೆಯಲು ಹೇಳುವುದು.

## ಹೋಲಿಸಿ ಈ ರೀತಿಯೂ ಬರೆಯಬಹುದು

ಒಂದನೇ ಚುಟುಕವು ಡಾ. ರಮಾನಂದ ಬನಾರಿಯವರು ಬರೆದುದಾಗಿದೆ. ಎರಡನೆಯದು ಸರ್ವಜ್ಞನು ಬರೆದ ವಚನವಾಗಿದೆ. ಒಂದನೇ ಕವನವು ದಾನದ ಮಹತ್ವದ ಕುರಿತು ವಿವರಿಸುತ್ತದೆ. ರಮಾನಂದ ಬನಾರಿಯವರು ತಮ್ಮ ಚುಟುಕದಲ್ಲಿ ನಾವು ನಮ್ಮ ಕೈಯಲ್ಲಾದ ರೀತಿಯಲ್ಲಿ ದಾನ ಮಾಡಿದರೆ ಅದುವೇ ನಮ್ಮ ಕಷ್ಟಕಾಲದಲ್ಲಿ ವರದಾನವಾಗಿ ನಮ್ಮನ್ನು ರಕ್ಷಿಸುತ್ತದೆ. ಬೇರೆಯವರ ಕಷ್ಟಕಾಲದಲ್ಲಿ ಸಹಕರಿಸಿದರೆ ಆ ಪುಣ್ಯ ಕರ್ಮವು ನಮ್ಮನ್ನು ರಕ್ಷಿಸುತ್ತದೆ .ಎಂದು ತಿಳಿಸುತ್ತಾರೆ.

ಸರ್ವಜ್ಞನ ವಚನವು ಮನುಷ್ಯನ ವಿವಿಧ ಸ್ವಭಾವಗಳನ್ನು ವ್ಯಕ್ತಪಡಿಸುತ್ತದೆ. ನಾವು ಇನ್ನೊಬ್ಬರಲ್ಲಿ ಬೇಡುವುದಕ್ಕಿಂತ ಮೊದಲೇ ನಮಗೆ ದಾನ ನೀಡುವವನು, ಭೂಮಿಯಲ್ಲಿ ಉತ್ತಮ ಸ್ವಭಾವದವನಾಗಿದ್ದಾನೆ. ಬೇಡಿದರೆ ಮಾತ್ರ ನೀಡುವವನು ಮಧ್ಯಮ ಸ್ವಭಾವದವನು. ನೀಚನಾದವನು ಇನ್ನೋರ್ವ ಬೇಡಿದರೂ ನೀಡಲಾರ ಎಂಬುದನ್ನು ತಿಳಿಸುತ್ತದೆ. ಒಟ್ಟಿನಲ್ಲಿ ಎರಡು ಕವನಗಳೂ ದಾನದ ಮಹತ್ವವನ್ನು ಕುರಿತು ವಿವರಿಸುವ ಕವನಗಳಾಗಿವೆ.

# ನೊಂದವರ ಗೆಳೆಯ

ಆಸ್ಪತ್ರೆಗಳಲ್ಲಿ ವೈದ್ಯರು, ದಾದಿಯರು ಸೇವೆ ಸಲ್ಲಿಸುವುದರ ಮೂಲಕ ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುತ್ತಾರೆ. ಅದೇ ರೀತಿ ಶಾಲಾ ಕಾರ್ಯಕ್ರಮಗಳು ಸುಲಲಿತವಾಗಿ ಸಾಗಲು ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ದುಡಿಯುತ್ತಾರೆ. ಇಲ್ಲಿ ವಿದ್ಯಾರ್ಥಿಗಳು ಯಾವುದೇ ಸಂಭಾವನೆಯವನ್ನು ಪಡೆಯುವುದಿಲ್ಲ. ಹೆಚ್ಚಾಗಿ ವಿದ್ಯಾರ್ಥಿಗಳು ಸಲ್ಲಿಸುವ ಸೇವೆ ಉಚಿತವಾಗಿರುವುದಲ್ಲದೆ ಸಮಾಜದ ಏಳಿಗೆಯೂ ಆಗುವುದು. ಈ ರೀತಿಯ ಸೇವೆಗಳು ವಿದ್ಯಾರ್ಥಿಗಳಿಗೆ ಜೀವನದ ಪಾಠವನ್ನು ಕಲಿಸಿಕೊಡುತ್ತವೆ. ವಿದ್ಯಾರ್ಥಿಗಳು ಸ್ವಯಂಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತಹ ಪಠ್ಯಕ್ರಮವೂ ರೂಪುಗೊಳ್ಳಬೇಕು.

ಸಮಾಜದಲ್ಲಿರುವ ಮೂಢನಂಬಿಕೆಗಳನ್ನು ಹೋಗಲಾಡಿಸುವುದು, ಆರೋಗ್ಯ, ಪರಿಸರ, ಮಾದಕ ವಸ್ತುಗಳ ಬಳಕೆ ಇತ್ಯಾದಿ ವಿಷಯಗಳ ಕುರಿತು ಜಾಗೃತಿ ಮೂಡಿಸುವುದು, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸ್ವಯಂಸೇವಕರಾಗಿ ದುಡಿಯುವುದು, ಸ್ವಚ್ಛತಾ ಅಭಿಯಾನಗಳಲ್ಲಿ ತೊಡಗಿಕೊಳ್ಳುವುದು, ವಯೋವೃದ್ಧರಿಗೆ ಸಹಾಯ ಮಾಡುವುದು ಇತ್ಯಾದಿ ಚಟುವಟಿಕೆಗಳನ್ನು ನಡೆಸುವುದರ ಮೂಲಕ ವಿದ್ಯಾರ್ಥಿಗಳು ಸಮಾಜದ ಹಿತವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ವಿವಿಧ ಸೇವೆಗಳನ್ನು ಕಂಡುಕೊಳ್ಳಬಹುದು. ನಾವು ಆರೋಗ್ಯ ಪೂರ್ಣವಾಗಿ ಬೆಳೆಯಲು ಸೇವಿಸಬೇಕಾದ ಆಹಾರ, ಶಾರೀರಿಕ ಸ್ವಚ್ಛತೆ, ರೋಗ ಬರದಂತೆ ತಡೆಗಟ್ಟುವುದು ಇತ್ಯಾದಿ ಆರೋಗ್ಯಕ್ಕೆ ಸಂಬಂಧಿಸಿದ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ತೊಡಗಿಸಿಕೊಳ್ಳಬಹುದು. ಪರಿಸರದ ಉಳಿವಿಗಾಗಿ ಸ್ವಚ್ಛತೆ, ಗಿಡಗಳನ್ನು ನೆಡುವುದು, ಪರಿಸರಕ್ಕೆ ಹಾನಿ ಮಾಡುವ ವಸ್ತುಗಳನ್ನು ಬಳಸದಂತೆ ಜನರಲ್ಲಿ ಜಾಗೃತಿ ಮೂಡಿಸುವುದು, ಜೀವಸಂಕುಲಗಳ ರಕ್ಷಣೆಗೆ ಬೇಕಾದ ಚಟುವಟಿಕೆಗಳಲ್ಲಿ ತೊಡಗುವುದು ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಬಹುದು. ಶಾಲಾ ವಾರ್ಷಿಕೋತ್ಸವ, ಕ್ರೀಡೋತ್ಸವ, ದೇವಸ್ಥಾನಗಳಲ್ಲಿ ನಡೆಯುವ ಉತ್ಸವಗಳು ಇತ್ಯಾದಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸ್ವಯಂಸೇವಕರಾಗಿ ದುಡಿದು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬಹುದು

ಇಂದು ಮಾದಕ ವಸ್ತುಗಳ ವಿಪರೀತ ಬಳಕೆಯಿಂದ ಸಮಾಜದ ಸ್ವಾಸ್ಥ್ಯ ಕೆಡುತ್ತಿದೆ. ಮಾದಕ ವಸ್ತುಗಳ ಸೇವನೆಯಿಂದ ಆಗುವ ಹಾನಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದರ ಮೂಲಕ ಮಾದಕ ವಸ್ತು ಮುಕ್ತ ಸಮಾಜವನ್ನು ರೂಪಿಸಲು ಕಟ್ಟಿಬದ್ಧರಾಗಬೇಕು. ಪರಿಸರವನ್ನು ಶುಚಿಯಾಗಿಡುವಂತಹ ಸ್ವಚ್ಛತಾ ಅಭಿಯಾನಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ವಿದ್ಯಾರ್ಥಿಗಳು ಸಮಾಜಕ್ಕೆ ಮಾದರಿಯಾಗಬೇಕು. "ನೀವು ಒಬ್ಬಂಟಿಗರಲ್ಲ ನಿಮ್ಮೊಡನೆ ನಾವು ಇದ್ದೇವೆ" ಎಂದು ತೋರಿಸಿಕೊಡಲು ವೃದ್ಧಾಶ್ರಮ, ಅನಾಥಾಶ್ರಮಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೊಡಬಹುದು. ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳ ಮೂಲಕ ಸಮಾಜದ ಸೇವೆ ಮಾಡಬಹುದು ವಿದ್ಯಾರ್ಥಿಗಳು ಉಚಿತವಾದ ಸೇವೆಗಳನ್ನು ಮಾಡುವುದರ ಮೂಲಕ ಕಷ್ಟಗಳನ್ನು ಎದುರಿಸುವ ಸಾಮರ್ಥ್ಯವನ್ನು ಪಡೆಯುತ್ತಾರೆ. ಅವರಲ್ಲಿ ಸೇವಾ ಮನೋಭಾವ ಬೆಳೆದು ಹೆಮ್ಮರವಾಗಿ ಫಲ ಕೊಡಲು ಪ್ರಾರಂಭಿಸುತ್ತದೆ. ಅವರ ಬಿಡುವಿನ ಸಮಯ ಸದುಪಯೋಗವಾಗುವುದರೊಂದಿಗೆ ದುಷ್ಟಚಿಂತೆಗಳು ಹತ್ತಿರವು ಸುಳಿಯಲಾರವು. ಸದಾ ಚಟುವಟಿಕೆಗಳಲ್ಲಿ ಇರುವುದರಿಂದ ಮನಸ್ಸು ಸದಾ ಉಲ್ಲಸಿತವಾಗಿರುತ್ತದೆ. ಶರೀರವು ಆರೋಗ್ಯ ಪೂರ್ಣವಾಗಿರುತ್ತದೆ. ಮುಂದಿನ ಸಮಾಜ

ಹೇಗಿರಬೇಕೆಂಬ ದೃಷ್ಟಿಕೋನ ಮೂಡುತ್ತದೆ. ಸಹೋದರತೆ, ಸಾಮರಸ್ಯ ಮನೋಭಾವ, ಪರೋಪಕಾರ ಮನೋಭಾವ ಮುಂತಾದ ಸದ್ಗುಣಗಳು ಬೆಳೆಯುತ್ತವೆ. ಮುಂದೆ ಉತ್ತಮ ಸಮಾಜ ಜೀವಿಯಾಗಿ ಬಾಳಲು ಸಮಾಜ ಸೇವಾ ಚಟುವಟಿಕೆಗಳು ಸಹಾಯಕವಾಗುವುದು ಎಂಬುದರಲ್ಲಿ ಎರಡು ಮಾತಿಲ್ಲ.

- **ಸನ್ಮಾನ ಪತ್ರ ತಯಾರಿ**

ಸನ್ಮಾನ ಪತ್ರದ ತಯಾರಿಗಾಗಿ ಮಕ್ಕಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಸನ್ಮಾನ ಪತ್ರ ಎಂದರೇನು?
- ಸನ್ಮಾನ ಪತ್ರವನ್ನು ಬರೆಯುವುದು ಹೇಗೆ?
- ಈ ಸನ್ಮಾನ ಪತ್ರವನ್ನು ಯಾರಿಗೆ ನೀಡಲಾಗುವುದು?

ಈ ರೀತಿ ಹಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳಲ್ಲಿ ಸನ್ಮಾನ ಪತ್ರ ಬರೆಯುವುದರ ಕುರಿತು ಒಂದು ಚರ್ಚೆ ನಡೆಸಲು ಹೇಳುವುದು. ಅದಕ್ಕಾಗಿ ಅದರಲ್ಲಿ ಇರಬೇಕಾದಂತಹ ಕೆಲವು ಅಂಶಗಳ ಕುರಿತು ಚರ್ಚೆ ನಡೆಸುವುದು. ಜೊತೆಯಲ್ಲಿ ಸನ್ಮಾನ ಪತ್ರದ ಕೆಲವು ಮಾದರಿಗಳನ್ನು ಗುಂಪಿನಲ್ಲಿ ಹಂಚುವುದು. ಅದರಲ್ಲಿ ಅಡಕವಾಗಿರುವ ಪ್ರಧಾನ ಅಂಶಗಳನ್ನು ಕುರಿತು ಲಘುವಾದ ಚರ್ಚೆಯನ್ನು ನಡೆಸುವುದು. ಪತ್ರದಲ್ಲಿ ಇರಬೇಕಾದ ಅಂಶಗಳನ್ನು ಗುರುತಿಸಿಕೊಳ್ಳುವುದು. ಶೀರ್ಷಿಕೆ, ಸಂಬೋದನೆ,ಉದ್ಯೋಗ, ಸಾಧನೆ ಗೌರವ, ಪ್ರಶಸ್ತಿ, ಅಭಿನಂದನೆ ಇತ್ಯಾದಿ. ಬಳಿಕ ಮಕ್ಕಳಲ್ಲಿ ಗುಂಪಿನಲ್ಲಿ ಕುಳಿತುಕೊಂಡು ಒಂದು ಸನ್ಮಾನ ಪತ್ರ ತಯಾರಿಸಲು ಹೇಳುವುದು. ನಿಶ್ಚಿತ ಸಮಯದ ಬಳಿಕ ಗುಂಪಿನಿಂದ ಒಬ್ಬರಂತೆ ಓದಿಸುವುದು, ಎಲ್ಲಾ ಗುಂಪುಗಳ ಮಂಡನೆಯ ಬಳಿಕ ಅವರು ಬರೆದ ಸನ್ಮಾನದ ಪತ್ರದ ಸ್ವರೂಪದ ಕುರಿತು ಚರ್ಚೆ ನಡೆಸುವುದು. ಚರ್ಚೆಯಲ್ಲಿ ಬಂದಿರುವಂತಹ ಎಲ್ಲಾ ಅಂಶಗಳು ಇದರಲ್ಲಿ ಬಂದಿವೆಯೇ ಎಂದು ಗುರುತಿಸಲು ಹೇಳುವುದು. ಅಧ್ಯಾಪಕರು ಬೇಕಾದಂತಹ ಮಾರ್ಗದರ್ಶನವನ್ನು ನೀಡುವುದು. ಬಳಿಕ ಅಧ್ಯಾಪಕರು ತಾವು ತಯಾರಿಸಿದ ಸನ್ಮಾನ ಪತ್ರವನ್ನು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಲ್ಲಿ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲು ಹೇಳುವುದು.

## ಸನ್ಮಾನ ಪತ್ರವನ್ನು ಹೀಗೂ ಬರೆಯಬಹುದು

**ಅಭ್ಯುದಯ ಪ್ರೌಢಶಾಲೆ, ಕಾಸರಗೋಡು,**

**ಕಾಸರಗೋಡು ಅಂಚೆ, ಕೇರಳ - 671 121.**

ಸದ್ರಿ ಶಾಲೆಯಲ್ಲಿ ನಡೆಯುವ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಾನವೀಯ ಅನುಕಂಪವುಳ್ಳ ಸರಳ ವ್ಯಕ್ತಿತ್ವ ವಿದ್ವಾಂಸರಾದ ಶ್ರೀಯುತ ವಾಸುದೇವ ಅವರಿಗೆ ಅರ್ಪಿಸುವ

**ಸನ್ಮಾನ ಪತ್ರ**

ಆದರಣೀಯರೇ,

ಫಲ ತುಂಬಿದ ಮರ, ಜಲ ತುಂಬಿದ ನದಿ ಬಾಗುತ್ತಲೇ ಇರುವಂತೆ, ಪರೋಪಕಾರಿಗಳಾದ ಸತ್ಪುರುಷರು ಬೀಗದೆ ಬಾಗುವ ಸಜ್ಜನಿಕೆಯನ್ನು ಹೊಂದಿರುವಂತೆ, ಸರಳ ವ್ಯಕ್ತಿತ್ವದಿಂದ, ತಲಸ್ಪರ್ಶಿ ಸಮಾಜ ಸುಧಾರಣೆಯ ಮಹತ್ವಕಾಂಕ್ಷೆಯನ್ನು ಹೊಂದಿದ ತಾವು ಸೇವೆಗಾಗಿ ಜೀವನ ಮುಡಿಪಾಗಿರಿಸಿರುವುದು ಅಭಿನಂದನೀಯ. "ಉತ್ತಮಾ ಆತ್ಮನಾ ಖ್ಯಾತಾ" ಎಂಬ ನುಡಿಯಂತೆ ಮಾಡಿದ ಮಹತ್ಕಾರ್ಯಗಳಿಂದಲೇ ಖ್ಯಾತರಾಗುವ ಸಾಧಕರ ಸಾಲಿನಲ್ಲಿ ತಾವು ಪ್ರಮುಖರು. ಅಶಕ್ತರ ಬಗ್ಗೆ ಔದಾರ್ಯ ತಳೆದು ಅವರಿಗೆ ವಸತಿ ಹಾಗೂ ಸ್ವಾವಲಂಬನೆಯ ಬದುಕನ್ನು ಕಲ್ಪಿಸಿದ ಮಹಾನುಭಾವರಾಗಿರುವಿರಿ. ಆಧುನಿಕ ರೀತಿಯಲ್ಲಿ ಕೃಷಿಯನ್ನು ಬೆಳೆಸಿ ಪ್ರಗತಿಪರ ಕೃಷಿಕರೆನಿಸಿದಿರಿ. ಮತ್ತು ಕೃಷಿಯ ಅನುಭವಗಳನ್ನು ಸಾಮಾನ್ಯ ಕೃಷಿಕರೊಂದಿಗೆ ನಿರಂತರ ಹಂಚಿಕೊಂಡು, ಅವರು ಕೃಷಿ ಕ್ಷೇತ್ರದಿಂದ ಉತ್ತಮ ಇಳುವರಿಯನ್ನು ಪಡೆಯಲು ಮಾರ್ಗದರ್ಶಕರಾಗಿರುವಿರಿ.

ಬದಿಯಡ್ಕ ಶ್ರೀ ನಾರಾಯಣ ಮತ್ತು ಶ್ರೀಮತಿ ಸರಸ್ವತಿ ದಂಪತಿಯ ಹಿರಿಯ ಪುತ್ರರಾದ ತಾವು ತಮ್ಮ ಸೇವಾ ಚಟುವಟಿಕೆಗಳಿಂದಲೇ ಖ್ಯಾತರಾಗಿರುವಿರಿ. ಸಮಾಜ ಸೇವೆಯನ್ನೇ ಪ್ರಮುಖ ಲಕ್ಷಣವಾಗಿರಿಸಿಕೊಂಡ ತಾವು ಬಾಲ್ಯದಿಂದಲೇ ಸೇವಾ ಮನೋಭಾವವನ್ನು ಹೊಂದಿರುವಿರಿ. ತಮ್ಮ ತೀರ್ಥರೂಪರಿಂದಲೇ ಆರಂಭಗೊಂಡ ಕೃಷಿ ಮಾಹಿತಿ ಶಿಬಿರಗಳನ್ನು ಮುಂದುವರೆಸುತ್ತಾ ಪ್ರಕೃತ ಕಡುಬಡವರಿಗೆ ಮನೆ ನಿರ್ಮಾಣಕ್ಕೆ ಸಹಾಯ, ಅನಾರೋಗ್ಯ ಪೀಡಿತರಿಗೆ ವೈದ್ಯಕೀಯ ಸಹಾಯಗಳನ್ನು ಒದಗಿಸಲು ತಮ್ಮ ಆದಾಯದ ಕಿರು ಪಾಲನ್ನು ಮೀಸಲಿದಿರಿಸಿರುವುದು ಗಮನಾರ್ಹವಾಗಿದೆ. ಊರಿನ ಸಮಾನ ಆಸಕ್ತ ಬಳಗವನ್ನು ಸೇರಿಸಿಕೊಂಡು ಉಚಿತ ವೈದ್ಯಕೀಯ ಶಿಬಿರ, ರಕ್ತದಾನ ಶಿಬಿರ ಮುಂತಾದ ಕಾರ್ಯಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ನಡೆಸುತ್ತಾ ಬಂದಿರುವುದು ತಮ್ಮ ಸಮಾಜ ಪ್ರೀತಿಯ ದ್ಯೋತಕ. ಅವಶ್ಯವಾದ ರಕ್ತದಾನಿಗಳ ತಂಡವನ್ನು ಕಟ್ಟಿ, ಅಪಾಯದಲ್ಲಿರುವ ರೋಗಿಗಳಿಗೆ ನಿರಂತರ ಸಹಕರಿಸುತ್ತಿರುವುದು ತಮ್ಮ ಮಾನವೀಯ ಮೌಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಹೀಗೆ ಬಹು ವಿಧದಲ್ಲಿ ಸಮಾಜ ಸೇವೆಯನ್ನು ಕೈಗೊಂಡಿರುವ ತಮ್ಮನ್ನು ಈ ಶುಭ ಸಂದರ್ಭದಲ್ಲಿ ಅಭಿನಂದಿಸುತ್ತಿರುವುದಕ್ಕೆ ನಾವು ಹೆಮ್ಮೆ ಪಡುತ್ತಿದ್ದೇವೆ.

ಶುಭಮಸ್ತು

ಸ್ಥಳ : ಕಾಸರಗೋಡು

ದಿನಾಂಕ:2/4/2024

ಮುಖ್ಯೋಪಾಧ್ಯಾಯರು

ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳ ಬಳಗ

ಅಭ್ಯುದಯ ಪ್ರೌಢಶಾಲೆ, ಕಾಸರಗೋಡು

- ## ಪರಿವರ್ತಿಸಿ ಬರೆಯುವುದು

ಆತ್ಮಕಥೆಯನ್ನು ಜೀವನ ಚರಿತ್ರೆಯಾಗಿ ಪರಿವರ್ತಿಸಿ ಬರೆಯುವುದು . ಅದಕ್ಕಾಗಿ ಮಕ್ಕಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಆತ್ಮಕಥೆ ಎಂದರೇನು?
- ಜೀವನ ಚರಿತ್ರೆ ಎಂದರೇನು?
- ಆತ್ಮಕಥೆ ಮತ್ತು ಜೀವನ ಚರಿತ್ರೆ ಇರುವ ವ್ಯತ್ಯಾಸಗಳೇನು?
- ನೀವು ಯಾರದಾದರೂ ಆತ್ಮಕಥೆಯನ್ನು ಓದಿರುವಿರಾ?
- ನೀವು ಯಾರಾದರೂ ಜೀವನ ಚರಿತ್ರೆಯನ್ನು ಓದಿರುವಿರಾ?

ಹೀಗೆ ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಆತ್ಮಕಥೆ ಮತ್ತು ಜೀವನ ಚರಿತ್ರೆಗಳಿಗಿರುವ ವ್ಯತ್ಯಾಸಗಳನ್ನು ಕಂಡುಕೊಳ್ಳುವುದು. ಬಳಿಕ ಅಭ್ಯಾಸ ಭಾಗದಲ್ಲಿ ನೀಡಲಾದ ರಾಜಾರಾಮ ಮೋಹನ್ ರಾಯ್ ಅವರ ಆತ್ಮಕಥೆಯ ಭಾಗವನ್ನು ಗುಂಪಿನಲ್ಲಿ ಕುಳಿತು ಜೀವನ ಚರಿತ್ರೆಯಾಗಿ ಪರಿವರ್ತಿಸಲು ಹೇಳುವುದು. ನಿರ್ದಿಷ್ಟ ಸಮಯದ ಬಳಿಕ ಗುಂಪಿನಿಂದ ಒಬ್ಬರಂತೆ ಓದಿಸುವುದು.  ಉಳಿದ ಗುಂಪಿನವರಲ್ಲಿ ಗಮನಿಸಿಕೊಳ್ಳಲು ಹೇಳುವುದು. ಮಕ್ಕಳು ತಪ್ಪು ಬರೆದಿದ್ದಲ್ಲಿ ಅಧ್ಯಾಪಕರು ಸರಿಪಡಿಸುವುದು. ಬಳಿಕ ಅಧ್ಯಾಪಕರು ತಾವು ಬರೆದ ಜೀವನ ಚರಿತ್ರೆ ಭಾಗವನ್ನು ಪ್ರೊಜೆಕ್ಟರ್ ನಲ್ಲಿ ಪ್ರದರ್ಶಿಸುವುದು.

## ಜೀವನ ಚರಿತ್ರೆಯನ್ನು ಹೀಗೆ ಬರೆಯಬಹುದು

ರಾಜಾರಾಮ ಮೋಹನರಾಯರು ಸಾಧು ಸನ್ಯಾಸಿಯಾಗಲು ಬಯಸಿದ್ದರು. ಆದರೆ ಅವರ ತಾಯಿ ಅವರನ್ನು ಆ ಕೆಲಸದಿಂದ ತಡೆದರು. ಮೊದಲ ಬಾರಿಗೆ ಅವರ ಸಹೋದರ ನಿಧನರಾದಾಗ ಅವರು ಸತಿ ಆಚರಣೆಯನ್ನು ನಿಲ್ಲಿಸಲು ತಮ್ಮ ಮನೆಯಿಂದಲೇ ಧ್ವನಿಯೆತ್ತಲು ಪ್ರಾರಂಭಿಸಿದರು. ಅಂದಿನಿಂದ ಸತಿ ಸಹಗಮನ ಎಂಬ ಸಾಮಾಜಿಕ ಆಚರಣೆಯನ್ನು ಕೊನೆಗೊಳಿಸುವುದಾಗಿ ಪ್ರತಿಜ್ಞೆ ಮಾಡಿದರು. ಮಹಿಳೆಯರು ಶಿಕ್ಷಣ ಪಡೆದರೆ ಸಮಾಜ ಸುಧಾರಣೆಯಾಗುತ್ತದೆ ಎಂದು ನಂಬಿದ ಅವರು ಮಹಿಳೆಯರ ಶಿಕ್ಷಣಕ್ಕಾಗಿ ಹಲವು ಶಾಲೆಗಳನ್ನು ಸ್ಥಾಪಿಸಿದರು.

- ## ಟಿಪ್ಪಣಿ ಬರೆಯುವುದು

ಮಕ್ಕಳು ಪಾಠವನ್ನು ಒಮ್ಮೆ ಮೌನವಾಗಿ ಓದಲಿ. ಬಳಿಕ ಗುಂಪಿನಲ್ಲಿ ಕುಳಿತು ವಿದ್ಯಾಸಾಗರರು ಕೈಕೊಂಡ ಸಮಾಜ ಸುಧಾರಣೆಯ ಕಾರ್ಯಗಳ ಕುರಿತು ಟಿಪ್ಪಣಿ ಬರೆಯಲು ಹೇಳುವುದು. ನಿಶ್ಚಿತ ಸಮಯದ ಬಳಿಕ ಗುಂಪಿನಲ್ಲಿ ಒಬ್ಬರಂತೆ ಓದಿಸುವುದು. ಕೆಲವೊಮ್ಮೆ ಬಿಟ್ಟು ಹೋದ ಅಂಶಗಳಿದ್ದರೆ ಅವುಗಳನ್ನು ಸೇರಿಸಿಕೊಂಡು ಪರಿಷ್ಕರಿಸಿ ಬರೆಯಲು ಹೇಳುವುದು.

## ಟಿಪ್ಪಣಿಯನ್ನು ಹೀಗೂ ಬರೆಯಬಹುದು

ಅಪಾರ ಕರುಣಾಮೂರ್ತಿಯಾದ ಈಶ್ವರ ಚಂದ್ರ ವಿದ್ಯಾಸಾಗರರ ಪರೋಪಕಾರಿ ಮನೋಭಾವವು ಅವರನ್ನು ಹೆಸರುವಾಸಿಯಾಗುವಂತೆ ಮಾಡಿತು. ಜನರು ಅವರನ್ನು ಪ್ರೀತಿಯಿಂದ ದಯಾಸಾಗರರು ಎಂದು ಕರೆಯುತ್ತಿದ್ದರು. ವೈಯಕ್ತಿಕ ಜೀವನದಲ್ಲಿ ಅತ್ಯಂತ ಸಾದಾ ಹಾಗೂ ನಿರಾಡಂಬರ ವ್ಯಕ್ತಿಯಾಗಿದ್ದರು.ಅವರ ಔದಾರ್ಯಕ್ಕೆ ಮಿತಿ ಇರಲಿಲ್ಲ. ಆರ್ಥಿಕ ತೊಂದರೆಯಲ್ಲಿದ್ದ ವಿದ್ಯಾರ್ಥಿಗಳು, ಅನಾಥರು, ವಿಧವೆಯರು ಹೀಗೆ ನೂರಾರು ಜನರು ಅವರನ್ನು ಅವಲಂಬಿಸಿ ಜೀವಿಸುತ್ತಿದ್ದರು. ವಿದ್ಯಾಸಾಗರರು ವಿದ್ಯಾರ್ಥಿಯಾಗಿರುವಾಗ ತಮಗೆ ದೊರೆತ ವಿದ್ಯಾರ್ಥಿವೇತನದ ಹಣದಲ್ಲಿ ಸಹಪಾಠಿಗಳಿಗೆ ಒಳ್ಳೆಯ ಬಟ್ಟೆಗಳನ್ನು ಕೊಂಡುಕೊಡುತ್ತಿದ್ದರು. ತಾವು ಸಣ್ಣವರಿದ್ದಾಗಿನಿಂದ ತಮ್ಮ ಜೀವನದ ಕೊನೆಯವರೆಗೂ ಅವರು ಅಸಂಖ್ಯಾತ ರೋಗಿಗಳಿಗೆ ತಮ್ಮ ಕೈಯಿಂದ ಸಹಾಯ ಮಾಡುತ್ತಿದ್ದರು. ರಸ್ತೆಯಲ್ಲಿ ಬಿದ್ದಿದ್ದ ಕೊಲರ ರೋಗಿಗಳನ್ನು ಮನೆಗೆ ತಂದು ಆರೈಕೆ ಮಾಡುತ್ತಿದ್ದರು. ಅವಕಾಶ ಒದಗಿದಾಗ ಅವರು ಜಾತಿ ಮತಗಳನ್ನು ಪರಿಗಣಿಸದೆ ಅನೇಕ ರೀತಿಯಿಂದ ಸಹಾಯ ಮಾಡುತ್ತಿದ್ದರಲ್ಲದೆ, ಅವರಿಗಾಗಿ ಒಂದು ಶಾಲೆಯನ್ನು ಆರಂಭಿಸಿದ್ದರು. ಬಂಗಾಲಿ ಕಾವ್ಯದ ಇತಿಹಾಸದಲ್ಲಿ ಕ್ರಾಂತಿಯನ್ನುಂಟು ಮಾಡಿದ ಮಧುಸೂದನದತ್ತರು ಬಡತನ ಹಾಗೂ ಸಾಲದ ಭಾರದಿಂದ ಜರ್ಜರಿತರಾಗಿ ಉಪವಾಸವನ್ನು ಅನುಭವಿಸುತ್ತ, ದಾರುಣ ಸ್ಥಿತಿಯಲ್ಲಿ ಇದ್ದ ಸಂದರ್ಭದಲ್ಲಿ ವಿದ್ಯಾಸಾಗರದಲ್ಲಿ ಸಹಾಯ ಯಾಚಿಸಿ ಪತ್ರ ಬರೆದಾಗ ಇವರು ನೀಡಿದ ಸಹಾಯವು ಇವರ ಔದಾರ್ಯಕ್ಕೆ ಒಂದು ಬಹುದೊಡ್ಡ ಸಾಕ್ಷಿಯಾಗಿದೆ. 1966 - 67ನೇ ಇಸವಿಯಲ್ಲಿ ಬಂಗಾರದಲ್ಲಿ ಭೀಕರ ಬರಗಾಲ ಬಂದಾಗ ಹೋಬಳಿ ಜಿಲ್ಲೆಗಳಲ್ಲಿ ಉಚಿತ ಭೋಜನ ಶಾಲೆಗಳನ್ನು ಆರಂಭಿಸಲು ಸರಕಾರಕ್ಕೆ ಸೂಚನೆಯಿತ್ತರು. ಇದರಿಂದ ಕೂಳಿಲ್ಲದೆ ಸಾಯಬಹುದಾಗಿದ್ದ ಎಷ್ಟೋ ಜನರು ಬದುಕಿದರು. ಬರದ ಜಿಲ್ಲೆಯಲ್ಲಿ ಮಲೇರಿಯ ಸಾಂಕ್ರಾಮಿಕ ರೋಗ ಹರಡಿ ನೂರಾರು ಜನ ಮರಣಶಯ್ಯೆಲ್ಲಿದ್ದರು. ಆಗ ಅದರ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳಲು ಸರಕಾರಕ್ಕೆ ಮನವಿ ಸಲ್ಲಿಸಿದರಲ್ಲದೆ ಸ್ವತಃ ಅವರೇ ಒಂದು ಉಚಿತ ದವಾಖಾನೆಯನ್ನು ಆರಂಭಿಸಿ ಮುನ್ನಡೆಸಿದರು. ಪ್ರತಿಯೊಬ್ಬ ರೋಗಿಯ ಆಹಾರ ಆರೈಕೆ ಬಗ್ಗೆ ಸ್ವತಃ ಕಾಳಜಿ ವಹಿಸಿದ್ದರು. ವಿದ್ಯಾಸಾಗರ ಔದಾರ್ಯ ಅನೇಕ ಸಲ ಗುಪ್ತಗಾಮಿನಿಯೇ ಆಗಿರುತ್ತಿತ್ತು. ಬೀದಿಯಲ್ಲಿ ಹೋಗುತ್ತಿರುವಾಗ ಭೇಟಿಯಾದ ಮಗುವಿನ ಮನೆಯಲ್ಲಿ ಯಾರಾದರೂ ಅಳುತ್ತಿರುವುದನ್ನು ಕೇಳಿದರೆ ಆ ಮನೆಗೆ ಹೋಗಿ ಕಷ್ಟದಲ್ಲಿದ್ದ ಆ ಮನೆಯವರಿಗೆ ಅವರು ಹಣ ಕೊಟ್ಟು ಬರುತ್ತಿದ್ದರು. ಹೀಗೆ ಅವರೊಬ್ಬ ಜನರೊಂದಿಗೆ ಬೆರೆಯುವ ಸ್ವಭಾವದ, ಸಹಾಯ ಮಾಡುವ ವ್ಯಕ್ತಿಯಾಗಿದ್ದು, ದಯಾಸಾಗರ ಎನ್ನುವ ಹೆಸರಿಗೆ ಅನ್ವರ್ಥವಾಗಿದ್ದರು.

- **ಸಮಾಸ ತಿಳಿಯುವುದು**

ವಿದ್ಯಾರ್ಥಿಗಳು ಈಗಾಗಲೇ ಪದವಿಂಗಡಣೆ ಮಾಡುವ ರೀತಿಯನ್ನು ತಿಳಿದಿರುತ್ತಾರೆ. ತತ್ಪುರುಷ ಸಮಾಸಕ್ಕೆ ಉದಾಹರಣೆಯಾಗಿ ಕೊಡಲಾದ ಪದಗಳನ್ನು ವಿಗ್ರಹಿಸಿ ಬರೆದು ಅದರಲ್ಲಿ ವಿಭಕ್ತಿ ಪ್ರತ್ಯಯದ ಬಳಕೆಯ ರೀತಿಯನ್ನು ತಿಳಿಸುವುದು. ವಿದ್ಯಾರ್ಥಿಗಳಿಗೆ ಕ್ಲಿಷ್ಟಕರವಾದುದನ್ನು ಅಧ್ಯಾಪಕರು ವಿಂಗಡಿಸಿ ಬರೆಯುವುದು. ಅಲ್ಲಿ ಆಗುವ ಬದಲಾವಣೆಗಳನ್ನು ವಿದ್ಯಾರ್ಥಿಗಳಲ್ಲಿ ಹೇಳಲು ಸೂಚಿಸುವುದು. ಬಳಿಕ ಪಾಠ ಪುಸ್ತಕದಲ್ಲಿ ಬರುವ ತತ್ಪುರುಷ ಸಮಾಸವಾಗುವ ಪದಗಳನ್ನು ಕಂಡುಹಿಡಿದು ವಿಗ್ರಹಿಸಿ ಬರೆಯಲು ಹೇಳುವುದು. ಕೆಲವರಲ್ಲಿ ಓದಿಸುವುದು. ತಪ್ಪಿದಲ್ಲಿ

ಅಧ್ಯಾಪಕರು ತಿದ್ದುವುದು. ಬಳಿಕ ಮಕ್ಕಳಲ್ಲಿ ತಮ್ಮ ಪುಸ್ತಕದಲ್ಲಿ ಬರೆದುಕೊಳ್ಳಲು ಹೇಳುವುದು.

**ತತ್ಪುರುಷ ಸಮಾಸವಾಗುವ ಪದಗಳು**

- ಮನೆಯ ಮಾತು - ಮನೆ ಮಾತು
- ರಾಷ್ಟ್ರದ ಅಭಿಮಾನ - ರಾಷ್ಟ್ರಾಭಿಮಾನ

ಘಟಕ – 3

# ಮಮತೆಯ ಮಡಿಲು

## ಸಿಲೆಬಸ್ ಗ್ರಿಡ್

| | | |
|---|---|---|
| ವಿಷಯ | : | **ಮುಂದುವರಿದ ಪಥ್ಯ** |
| ತರಗತಿ | : | **9** |
| ಸಮಯ | : | **25 ಪಿರೀಡುಗಳು** |
| ಘಟಕದ ಹೆಸರು | : | **ಮಮತೆಯ ಮಡಿಲು** |
| ಆಶಯ | : | ಮಾನವೀಯ ಮೌಲ್ಯ |

**ಉಪ ಆಶಯಗಳು :**

- ಸಮಾಜದಲ್ಲಿ ಹಿರಿಯರಿಗೆ ಗೌರವ ಕೊಡಬೇಕು.
- ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು.
- ಅಸಮಾನತೆ, ಶೋಷಣೆಗಳ  ವಿರುದ್ಧ ಜನ ಜಾಗೃತಿ ಮೂಡಿಸುವುದು.
- ಅಸಮಾನತೆ, ಶೋಷಣೆಗಳು ಸಮಾಜಕ್ಕೆ ಅಂಟಿದ ಶಾಪ ಎನ್ನುವ ತಿಳಿವಳಿಕೆ.
- ಇಂತಹ ಅಸಮಾನತೆಯ ವಿರುದ್ಧ ಹೋರಾಟ/ಚಳುವಳಿಗಳನ್ನು ನಡೆಸಿದ ಸಮಾಜ ಸುಧಾರಕರು ನಮ್ಮ ಸಮಾಜದಲ್ಲಿ ಆಗಿ ಹೋಗಿದ್ದಾರೆ.

**ಸಾಹಿತ್ಯ ಪ್ರಕಾರಗಳು**

- 
- 
- 

**ಕಲಿಕಾ ಉದ್ದೇಶಗಳು:**

- 

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಕಳ್ಳರು ಮತ್ತು ಸಂತ | | ● ಕತೆ, ತ್ರಿಪದಿ, ಜೀವನ ಚರಿತ್ರೆಗಳ ಆಶಯಗಳನ್ನು ತಿಳಿದುಕೊಂಡು ತಮ್ಮ ಅನಿಸಿಕೆಗಳನ್ನು, ನಿಗಮನಗಳನ್ನು, ವಿಶ್ಲೇಷಣೆಯನ್ನು ಓದುಗರ ಓಲೆ, ಕರಪತ್ರ, ಲೇಖನಗಳ ಮೂಲಕ ಅಭಿವ್ಯಕ್ತ ಪಡಿಸುವ ಸಾಮರ್ಥ್ಯ. ಮೌಲ್ಯಗಳು/ ಮನೋಭಾವಗಳು.<br>● ಸಮಾನತೆಯ ಮೌಲ್ಯಗಳನ್ನು ತಿಳಿದುಕೊಳ್ಳಲು.<br>● ಅಸಮಾನತೆಯ ವಿರುದ್ಧ ಪ್ರತಿಕ್ರಿಯಿಸುವ/ ಹೋರಾಟ ನಡೆಸುವ ಮನೋಭಾವ. | ● ಜವಾಬ್ದಾರಿಯುತ ಪೌರನಾಗಿ ವರ್ತಿಸುವ ಮನೋಭಾವ | ● ವಾಕ್ಯ ರಚನೆ<br>● ಪದ ವಿಂಗಡಣೆ<br>● ತತ್ಪುರುಷ ಸಮಾಸ<br>● ಗುಣ ಸಂಧಿ<br>● ವಿಭಕ್ತಿ ಪ್ರತ್ಯಯ | ● ಓದುಗರ ಓಲೆ<br>● ದಿನಚರಿ<br>● ಸನ್ಮಾನ ಪತ್ರ<br>● ಕರಪತ್ರ<br>● ಆಶುಭಾಷಣ<br>● ಪ್ರಬಂಧ | ● ಐ ಸಿ ಟಿ<br>● ಮಾದರಿ ಚಟುವಟಿಕೆಗಳು<br>● ಆಕರ ಗ್ರಂಥಗಳು | ● ಸ್ವಯಂ<br>● ಪರಸ್ಪರ<br>● ಅಧ್ಯಾಪಕರಿಂದ<br>● ಕರಪತ್ರ<br>● ಓದುಗರ ಓಲೆ<br>● ಪ್ರಬಂಧ |
| | | | | | | | |
| | | | | | | | |

## ಕಳ್ಳರು ಮತ್ತು ಸಂತ

- **ಕವನವಾಚನ ಮಾಡುವುದು**

‘ಕಳ್ಳರು ಮತ್ತು ಸಂತ’ ಕವನವನ್ನು ವಿದ್ಯಾರ್ಥಿಗಳು ಮೌನವಾಗಿ ಓದಲಿ. ಹತ್ತು ನಿಮಿಷಗಳ ಕಾಲ ಮೌನ ಓದಿಗೆ ಅವಕಾಶ ನೀಡಿ. ಬಳಿಕ ಕವನವನ್ನು ಗಟ್ಟಿಯಾಗಿ ಓದಲು ಹೇಳುವುದು. ಕೆಲವು ಸಾಲುಗಳಂತೆ ಪ್ರತಿಯೊಬ್ಬರಿಗೂ ಕವನ ವಾಚನಕ್ಕೆ ಅವಕಾಶ ಕಲ್ಪಿಸುವುದು. ಚೆನ್ನಾಗಿ ಕವನ ವಾಚನ ಮಾಡಿದವರನ್ನು ಅಭಿನಂದಿಸುವುದು .

- **ಉತ್ತರ ಬರೆಯುವುದು**

ವಿದ್ಯಾರ್ಥಿಗಳು ಕವನವನ್ನು ಗುಂಪಿನಲ್ಲಿ ಓದಲಿ ಅನಂತರ ಪ್ರಶ್ನೆಗಳಿಗೆ ಕವನದ ಯಾವ ಭಾಗದಲ್ಲಿ ಉತ್ತರವಿದೆ ಎಂದು ಚರ್ಚಿಸಲಿ. ಬಳಿಕ ಉತ್ತರ ಬರೆಯಲಿ. ಕೆಲವರು ಮಂಡಿಸಲಿ .

- **ಪದಗಳನ್ನು ವಿಂಗಡಿಸಿ**

ವಿದ್ಯಾರ್ಥಿಗಳು ಕವನದಲ್ಲಿ ಬಂದಿರುವ ಸಂಧಿ ಪದಗಳನ್ನು ಪಟ್ಟಿ ಮಾಡಲಿ. ಅನಂತರ ಅದನ್ನು ವಿಂಗಡಿಸಿ ಬರೆಯಲಿ. ಸಂಧಿ ಪದ ಮತ್ತು ಪದವಿಂಗಡಣೆಯನ್ನು ತರಗತಿಯಲ್ಲಿ ಮಂಡಿಸಲಿ.

- ನಿಮಗೆಲ್ಲ - ನಿಮಗೆ + ಎಲ್ಲ
- ಯೇಸುವಿದ್ದಲ್ಲಿ - ಯೇಸು + ಇದ್ದಲ್ಲಿ
- ಸದ್ದಿರದ - ಸದ್ದು + ಇರದ
- ಎಳೆದೊಯ್ದರೇಸುವನು - ಎಳೆದು + ಒಯ್ದರು + ಏಸುವನು
- ಕರೆದೊಯ್ದರು - ಕರೆದು + ಒಯ್ದರು
- ಹಾಡಲುಂಟೆ - ಹಾಡಲು + ಉಂಟೆ

- ## ಸ್ವಾರಸ್ಯ ಬರೆಯುವುದು

ವಿದ್ಯಾರ್ಥಿಗಳು ಕಥನ ಕವನವನ್ನು ಗುಂಪಿನಲ್ಲಿ ಓದಲಿ. ಬಳಿಕ ವಿಶಿಷ್ಟ ಪೂರ್ಣವಾದ ಸಾಲುಗಳನ್ನು ಸಾಲುಗಳನ್ನು ಪಟ್ಟಿ ಮಾಡಲಿ. ಆಶಯ, ವಿಶೇಷತೆ, ಸ್ವಾರಸ್ಯಗಳನ್ನು ಗುಂಪಿನಲ್ಲಿ ಚರ್ಚಿಸಿ ಬರೆಯಲಿ. ಕವನದ ಸಾಲುಗಳನ್ನು ಮತ್ತು ಆ ಸಾಲುಗಳಿಗೆ ತಾವು ಬರೆದ ಸ್ವಾರಸ್ಯವನ್ನು ತರಗತಿಯಲ್ಲಿ ಮಂಡಿಸಲಿ .

## ಸ್ವಾರಸ್ಯ ಹೀಗೂ ಬರೆಯಬಹುದು

"ಅವಿವೇಕಿಗಳ ಕೈಗೆ ಸಿಕ್ಕಿ ನಿಧಿ ಉಳಿದೀತೆ?"

"ಕೊಲ್ಗಂಬದಲ್ಲಿ ಕರುಣೆ ಮೂಡಲುಂಟೆ?"

ಸು.ರಂ. ಎಕ್ಕುಂಡಿ ಅವರ 'ಕಳ್ಳರು ಮತ್ತು ಸಂತ' ಎಂಬ ಕಥನ ಕವನದ ಈ ಸಾಲುಗಳು ಏಸುಕ್ರಿಸ್ತನ ಶ್ರೇಷ್ಠತೆಯನ್ನು ಸೂಚಿಸುತ್ತವೆ. ಏಸುಕ್ರಿಸ್ತನ ಬೋಧನೆಯಿಂದ ಕೆರಳಿದ ಪಿಲಾತನು, ಯೇಸುವಿಗೆ ಮರಣದಂಡನೆ ನೀಡಿ ಕೊಲ್ಗಂಬಕ್ಕೆಳೆದೊಯ್ಯುವಂತೆ ಮಾಡುತ್ತಾನೆ. ಕ್ಷಮಾಗುಣ ಸಂಪನ್ನನೂ, ದಯಾಳುವೂ ಆಗಿರುವ ಏಸುವನ್ನು 'ನಿಧಿ' ಎಂದು ಕವಿ ಉಲ್ಲೇಖಿಸುತ್ತಾರೆ. ಅವಿವೇಕಿಗಳಾದವರಿಗೆ ತಮಗೆ ಸಿಕ್ಕಿದ ಅಮೂಲ್ಯ ನಿಧಿಗಳ ಮೌಲ್ಯದ ಅರಿವಿರುವುದಿಲ್ಲ. ಹಾಗಾಗಿ ಅದು ಅವರಿಗೆ ಉಪಯೋಗ ಶೂನ್ಯವಾಗಿರುತ್ತದೆ. ಹಾಗೆಯೇ ಪಿಲಾತ ಹಾಗು ಅವನ ಅನುಯಾಯಿಗಳು ಏಸುವಿನ ಶ್ರೇಷ್ಠತೆಯನ್ನು ಅರಿಯದೆ ಹೊಡೆಯುತ್ತಾ, ಶಿಲುಬೆಯನ್ನು ಹೊರಿಸುತ್ತಾ, ವಧಾಸ್ಥಾನಕ್ಕೆ ಕರೆದೊಯ್ಯುತ್ತಾರೆ. ಬುದ್ಧಿಶೂನ್ಯರಾದವರ ಕೈಯಲ್ಲಿ ಅಮೂಲ್ಯ ನಿಧಿ ಉಳಿಯಲಾರದು, ಕೊಲ್ಗಂಬದಲ್ಲಿ ಕರುಣೆ ಮೂಡಲು ಅವಕಾಶ ಎಲ್ಲಿ? ಎಂದೆಂದಿಗೂ ಕರುಣೆ ಮೂಡಲಾರದು ಎನ್ನುವ ಮೂಲಕ ಸನ್ನಿವೇಶವನ್ನು ಕವಿ ತುಂಬಾ ಸ್ವಾರಸ್ಯ ಪೂರ್ಣವಾಗಿ ಚಿತ್ರಿಸಿದ್ದಾರೆ.

"ಕೌರ್ಯಗಳ ಆಚೆಗೂ ಉಂಟಲ್ಲ,ಸ್ವರ್ಗಕ್ಕೆ

ಕರೆದೊಯ್ಯಬಲ್ಲದು ಕ್ಷಮೆಯ ಏಣಿ"

ಸು.ರಂ.ಎಕ್ಕುಂಡಿಯವರ 'ಕಳ್ಳರು ಮತ್ತು ಸಂತ' ಎಂಬ ಕಥನ ಕವನದ ಈ ಸಾಲುಗಳು ದೇವದೂತನಾದ ಏಸುವಿನ ಕ್ಷಮಾಗುಣವನ್ನು ಎತ್ತಿ ತೋರಿಸುತ್ತವೆ. ಇಬ್ಬರು ಕಳ್ಳರ ನಡುವೆ ಶಿಲುಬೆಗೇರುವ ಏಸುಕ್ರಿಸ್ತನು ಸುತ್ತಲೂ ಹಲವು ಅವಹೇಳನಗಳಿಂದಲೂ, ಹೊಡೆತಗಳಿಂದಲೂ ಮಾನಸಿಕ ಹಾಗೂ ಶಾರೀರಿಕವಾಗಿ ಜರ್ಜರಿತನಾದರೂ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ತೋರುವುದಿಲ್ಲ. ಕ್ರೌರ್ಯದ ಆಚೆಗೆ ಕ್ಷಮೆ ಎಂಬುದು ಇದೆ ಎಂದು ಕವಿ ಹೇಳುತ್ತಾರೆ. ಆ ಕ್ಷಮೆ ಸ್ವರ್ಗವನ್ನು ಏರಲಿರುವ ಏಣಿಯಾಗಿದೆ. "ತನ್ನನ್ನು ಹಿಂಸಿಸಿದವರೆಲ್ಲರನ್ನು ದೇವರು ಕ್ಷಮಿಸಲಿ" ಎಂದು ಏಸು ಆಶಿಸುವ ಸ್ವಾರಸ್ಯಕರವಾದ ಅಂಶವನ್ನು ಕವಿ ಈ ಸಾಲುಗಳಲ್ಲಿ ಸಾಂಕೇತಿಕವಾಗಿ ಉಲ್ಲೇಖಿಸುತ್ತಾರೆ.

ಕೇವಲ ಕ್ರೌರ್ಯವೇ ಲೋಕವನ್ನಾಳುವುದಲ್ಲ ಎನ್ನುವ ಎಚ್ಚರವನ್ನು ಕವಿಯು ಹೇಳುತ್ತಾರೆ. ಅದರಾಚೆಗೆ ಇರುವ ಪ್ರೀತಿ ವಿಶ್ವಾಸದ ಲೋಕ ಸೃಷ್ಟಿಯಾಗಬೇಕೆಂಬ ಅಪೇಕ್ಷೆಯು ಇಲ್ಲಿ ವ್ಯಕ್ತವಾಗುತ್ತದೆ. ವಿರೋಧಿಸುತ್ತಾ ಹೋಗುವುದರಿಂದ ಅದಕ್ಕೆ ಕೊನೆಯೇ ಇರದೇ ನೆಮ್ಮದಿಯ ಬದುಕು ಇಲ್ಲವಾಗುತ್ತದೆ. ಕೆಟ್ಟವರನ್ನಾದರೂ ಕ್ಷಮಿಸಿ ಸರಿದಾರಿಗೆ ತರಬೇಕೆಂಬ ಆಶಯವು ಇಲ್ಲಿ ಎದ್ದು ತೋರುತ್ತದೆ. ಮಾತ್ರವಲ್ಲ ಏಸುವಿನ ಕ್ಷಮಾಗುಣವು ಅಚಲವಾಗಿರುವ ಸ್ವಾರಸ್ಯಕರ ಅಂಶ ಈ ಸಾಲುಗಳಲ್ಲಿ ಗುರುತಿಸಬಹುದು.

- **ಕವನ ರಚಿಸುವುದು**

ಮಹಾಪುರುಷರು, ಸಮಾಜ ಸೇವಕರು, ಸ್ವಾತಂತ್ರ್ಯ ಹೋರಾಟಗಾರರು, ಇಲ್ಲವೇ ವಿಶ್ವ ಪ್ರಸಿದ್ಧ ವ್ಯಕ್ತಿಗಳ ಕುರಿತು ತಮಗೆ ತಿಳಿದಿರುವ ಕವನಗಳನ್ನು ಹೆಸರಿಸಲು ವಿದ್ಯಾರ್ಥಿಗಳಲ್ಲಿ ಹೇಳುವುದು. ಆ ಕವನಗಳ ನೆನಪಿರುವ ಸಾಲುಗಳನ್ನು ವಿದ್ಯಾರ್ಥಿಗಳು ಹೇಳಲಿ. ಬಳಿಕ ಬುದ್ಧ, ವಿವೇಕಾನಂದ , ಮಹಾವೀರ ಗಾಂಧೀಜಿ, ಅಂಬೇಡ್ಕರ್, ಬಸವಣ್ಣ, ಮದರ್ ತೆರೇಸಾ ಮೊದಲಾದವರ ಕುರಿತು ಲಭ್ಯವಿರುವ ಕವನಗಳನ್ನು ಅಧ್ಯಾಪಕರು ವಿದ್ಯಾರ್ಥಿಗಳ ಮುಂದೆ ಇಡುವುದು. ಮಹಾನ್ ವ್ಯಕ್ತಿಯ ಕುರಿತು ಒಂದು ಕವನ ರಚಿಸಲು ಹೇಳುವುದು. ರಚನೆಯಾದ ಬಳಿಕ ಅದನ್ನು ತರಗತಿಯಲ್ಲಿ ಮಂಡಿಸಲಿ. ಉತ್ತಮವಾಗಿ ಕವನ ರಚನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸುವುದು. ಕೊನೆಗೆ ಆ ಕವನಗಳನ್ನು ಒಟ್ಟು ಸೇರಿಸಿ ಒಂದು ಕವನ ಸಂಕಲನ ತಯಾರಿಸಲಿ.

**ಮಹಾಪುರುಷರ ಕುರಿತಾದ ಒಂದು ಕವನದ ಮಾದರಿ.**

## ಭುವನದ ಬೆಳಕು

ಆಕಾಶದಲ್ಲಿ ಕಂಡ ಬೆಳ್ಳಿ ನಕ್ಷತ್ರ. ನೋಡು ನೋಡುತ್ತಿದ್ದಂತೆ ಧರೆಗಿಳಿದು
ನೆಲಕ್ಕೆ ಹಸಿರು ತೊಡಿಸುವಂತೆ ನಡೆದು
ಕಣ್ಣು ಬಿಟ್ಟು ನೋಡುವಾಗ ವಿಶ್ವ ಮಾತೆಯಾದಳು
ಕುಷ್ಟರೋಗಕ್ಕೆ ಬೇಲಿ ಹಾಕಿದಳು
ಬಡತನದ ಬಾಯಿ ಕಟ್ಟಿದಳು ಅನಾಥರ ಅಮಾಯಕರ ಕಣ್ಣ ತೆರೆದಳು
ಕಾಲಿಲ್ಲದವರಿಗೆ ನಡೆಯಕಲಿಸಿದಳು
ಬಡಿಸಿದ ಅನ್ನದಲ್ಲಿ ಭಾರತವ ಕಂಡವಳು
ಹರಿಯುವ ನೀರಲ್ಲಿ ಬದುಕ ಕಟ್ಟಿದಳು
ಕೈಯ ಬಟ್ಟಲಲ್ಲಿ ಪ್ರೀತಿಯಂಚಿದಳು
ಅಂದು ಬಿಚ್ಚಿದ ಬೀಜದ ತೇಜ ಚಿಗುರೊಡೆಯುತ್ತಿದೆ,
ತಾಯಿಯ ಬಸಿರು

**- ಟಿ.ಎನ್.ಖಂಡಿಗೆ**

- ## ವಿಗ್ರಹಿಸಿ ಬರೆಯುವುದು

ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ತತ್ಪುರುಷ ಸಮಾಸವನ್ನು ತಿಳಿದಿರುತ್ತಾರೆ. ತತ್ಪುರಷ ಸಮಾಸ ಲಕ್ಷಣವೇನು? ಕೆಲವು ಉದಾಹರಣೆಗಳನ್ನು ನೀಡಿ ಅದರ ಕುರಿತು ಚರ್ಚಿಸುವುದು. ವಿದ್ಯಾರ್ಥಿಗಳು ನೀಡಲಾದ ಪದಗಳಲ್ಲಿ ತತ್ಪುರುಷ ಸಮಾಸವಾಗುವ ಪದಗಳನ್ನು ಗುರುತಿಸಿ, ವಿಗ್ರಹಿಸಿ ಬರೆಯಲಿ. ಬಳಿಕ ತರಗತಿಯಲ್ಲಿ ಮಂಡಿಸಲಿ.

**ತತ್ಪುರುಷ ಸಮಾಸವಾಗುವ ಪದಗಳು -**

- ಮುಳ್ಳುಕಿರೀಟ - ಮುಳ್ಳಿನ ಕಿರೀಟ
- ಹದ್ದುಹಿಂಡು - ಹದ್ದಿನ ಹಿಂಡು

**ಜಗತ್ತು ಬದಲಾಗಬಹುದು....**

- ## ಓದುವುದು

'ಜಗತ್ತು ಬದಲಾಗಬಹುದು' ಎಂಬ ವೈಚಾರಿಕ ಲೇಖನವನ್ನು ಬಾಯ್ದೆರೆಯಾಗಿ ಓದುವುದು. ಪ್ರತಿಯೊಬ್ಬ ವಿದ್ಯಾರ್ಥಿಯು ಒಂದೊಂದು ನಿರ್ದಿಷ್ಟ ಭಾಗದವರೆಗೆ ಸರದಿಯಂತೆ ಓದಲಿ. ಬಳಿಕ ಗದ್ಯಭಾಗದ ಆಶಯ ಗ್ರಹಣ ವಾಗುವಂತೆ ಮೌನ ಓದಿಗೆ ಅವಕಾಶ ನೀಡುವುದು. ವಿದ್ಯಾರ್ಥಿಗಳು ಪಾಠ ಭಾಗದಲ್ಲಿ ಬಂದಿರುವ ನವೀನ ಪದಗಳನ್ನು ಗುರುತಿಸಲಿ. ಬಳಿಕ ಅವುಗಳ ಅರ್ಥವನ್ನು ಅರ್ಥ ಕೋಶದ ಸಹಾಯದಿಂದ ಬರೆಯಿರಿ.

- ## ಉತ್ತರ ಬರೆಯುವುದು

ಪಾಠದ ಆಶಯವು ಮನವರಿಕೆ ಆಗಿದೆಯೋ ಎಂದು ತಿಳಿಯುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರ ಬರೆಯಲಿ. ಅನಂತರ ಗುಂಪಿನಲ್ಲಿ ಕುಳಿತು ಚರ್ಚಿಸಿ ತಾವು ಬರೆದ ಉತ್ತರದಲ್ಲಿ ತಪ್ಪಿದ್ದರೆ, ಪರಿಸ್ಕರಿಸಿ ಬರೆಯಲಿ. ಗುಂಪಿನಿಂದ ಒಬ್ಬರಂತೆ ಅದನ್ನು ಮಂಡಿಸಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಕ್ತ ಸಲಹೆಯನ್ನು ನೀಡಲಿ.

- **ಸಂವಾದಿ ಪದ ಬಳಸಿ ವಾಕ್ಯ ರಚಿಸಿರಿ**

ಪಾಠದಲ್ಲಿ ಬಂದಿರುವ ಆಂಗ್ಲ ಪದಗಳನ್ನು ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಅನಂತರ ಒಬ್ಬೊಬ್ಬರು ಒಂದೊಂದು ಆಂಗ್ಲ ಪದವನ್ನು ಹೇಳಲಿ. ಅದಕ್ಕೆ ಸಂವಾದಿಯಾದ ಕನ್ನಡ ಪದವನ್ನು ಇನ್ನೊಬ್ಬರು ಹೇಳಲಿ. ವಿದ್ಯಾರ್ಥಿಗಳು ಹೇಳಿದ ಪದವನ್ನು ಅಧ್ಯಾಪಕರು ಹಲಗೆಯಲ್ಲಿ ಬರೆಯುವುದು. ಈ ಪದಗಳನ್ನು ಬಳಸಿಕೊಂಡು ಮಕ್ಕಳು ವಾಕ್ಯ ರಚಿಸಲಿ. ನಿರ್ದಿಷ್ಟ ಸಮಯದ ಬಳಿಕ ತರಗತಿಯಲ್ಲಿ ಮಂಡಿಸಲಿ. ಅತಿ ಹೆಚ್ಚು ವಾಕ್ಯಗಳನ್ನು ಬರೆದ ಮಕ್ಕಳನ್ನು ಅಭಿನಂದಿಸುವುದು.

- ಸಾಫ್ಟ್ ವೇರ್ - ತಂತ್ರಾಂಶ
- ಫೋನ್ - ದೂರವಾಣಿ
- ನ್ಯೂಟ್ರಲ್ - ತಟಸ್ಥ
- ಸೀಟು - ಆಸನ
- ಸೆಂಟರ್ - ಕೇಂದ್ರ

- **ದಿನಚರಿ ಬರೆಯಿರಿ**

ಮನುಷ್ಯನ ಉತ್ತಮ ಹವ್ಯಾಸಗಳಲ್ಲಿ ದಿನಚರಿ ಬರೆಯುವುದು ಒಂದು. ಬೆಳಗ್ಗೆ ಎಚ್ಚರಗೊಂಡಲ್ಲಿಂದ ರಾತ್ರಿ ಮಲಗುವವರೆಗೆ ಏನೇನು ನಡೆಯಿತು ಎಂಬುದನ್ನು ದಾಖಲಿಸಿಕೊಳ್ಳುವುದೇ ದಿನಚರಿ.

**ದಿನಚರಿ ಹೀಗೂ ಬರೆಯಬಹುದು**

28-10-2024

ಸೋಮವಾರ

ಇಂದು ನನ್ನ ಜೀವನದಲ್ಲಿ ಅವಿ ಸ್ಮರಣೆಯ ದಿನವೆಂದೇ ಹೇಳಬಹುದು. 'ನನ್ನೊಬ್ಬಳಿಂದೇನಾಗುತ್ತದೆ' ಎಂಬ ಪ್ರಶ್ನೆಗೆ ನನಗೆ ಇಂದು ಉತ್ತರ ಸಿಕ್ಕಿದೆ. ನನಗೆ ನನ್ನ ಬಗ್ಗೆ ಹೆಮ್ಮೆ ಅನಿಸಿದ ದಿನ.

ಈ ದಿನ ಬೆಳಗ್ಗೆ ರಮ್ಯಾಳ ಫೋನ್ ಬಂತು. "ನಾನು ಬೆಂಗಳೂರಿಗೆ ಬಂದಿದ್ದೇನೆ. 'ಹಾಲಿಡೇ ಇನ್' ಹೋಟೆಲ್ ನಲ್ಲಿ ಇದ್ದೇನೆ. ಬಂದು ಭೇಟಿಯಾಗಲು ಸಾಧ್ಯವೇ?" ಎಂದು ಕೇಳಿದಳು. ನಾನು ಹಿಂದೂ ಮುಂದು ಯೋಚಿಸದೆ 'ಹಾಲಿಡೇ ಇನ್ ' ಗೆ ಓಡಿದೆ.

ಅಂದಹಾಗೆ ರಮ್ಯಾಳು ನನ್ನೊಡನೆ ಟಾಟಾ ಇನ್ಸ್ಟಿಟ್ಯೂಟ್ ನಲ್ಲಿ ಸಂಶೋಧನೆ ಮಾಡಿದ್ದ ಹುಡುಗಿ . ಸಾಫ್ಟ್ ವೇರ್ ರಂಗದಲ್ಲಿ ಕೈತುಂಬಾ ಸಂಬಳ ಬರುವ ಕೆಲಸದಲ್ಲಿದ್ದಳು. ಅವಳು ಸಂಪ್ರದಾಯಸ್ಥ ಕುಟುಂಬದಿಂದ ಬಂದವಳು. ಗಂಡನ ಹಠದಿಂದಾಗಿ ವಿಚ್ಛೇದನ ಪಡೆದುಕೊಂಡಿದ್ದಳು . ಒಂದು ದಿನ ಅವಳ ಅಮ್ಮ ಫೋನ್ ಮಾಡಿ, "ರಮ್ಯಾ ಕೆಲಸ ಬಿಟ್ಟಿದ್ದಾಳೆ; ಮಗುವನ್ನು ನನ್ನ ಕೈಗೆ ಕೊಟ್ಟು ಆಶ್ರಮಕ್ಕೆ ಹೋಗ್ತೀನಿ ಅಂತಿದ್ದಾಳೆ" ಎಂದರು. ಅಂದೆ ನಾನು ಮಲ್ಲೇಶ್ವರಂನ ಮನೆಗೆ ಹೋಗಿ ಮೂರು ಗಂಟೆಗಳ ಕಾಲ ನಾನಾ ರೀತಿಯಲ್ಲಿ ಅವಳ ಮನವೊಲಿಸಲು ನಡೆಸಿದ ಪ್ರಯತ್ನಗಳೆಲ್ಲ ಗೋರ್ಕಲ್ಲ ಮೇಲೆ ಮಳೆ ಸುರಿಸಿದಂತಾಯಿತು.

ಈ ಘಟನೆ ನಡೆದು ಮೂರು ವರ್ಷಗಳೇ ಸರಿದಿದವೆ. 'ಹಾಲಿಡೇ ಇನ್' ಗೆ ಹೋಗಿ ಅವಳನ್ನು ಭೇಟಿಯಾದಾಗ ನನಗೆ ಅಚ್ಚರಿ ಕಾದಿತ್ತು. ಇಂದು ರಮ್ಯಾ ತುಂಬಾ ಬದಲಾಗಿದ್ದಾಳೆ. ಪ್ರಸ್ತುತ ಹೈದರಾಬಾದಿನ ಸಾಫ್ಟ್ ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾಳೆ. ಕೆಲಸದ ನಿಮಿತ್ತ ಬೆಂಗಳೂರಿಗೆ ಬಂದಿದ್ದಾಳೆ . ಒಂದೊಮ್ಮೆ ಸನ್ಯಾಸಿಯಾಗಲು ಆಶ್ರಮದ ದಾರಿ ಹಿಡಿದವಳು, ಇಂದು ಆತ್ಮವಿಶ್ವಾಸದ ಗಣಿಯಾಗಿ ನನ್ನ ಮುಂದೆ ಕೂತಿದ್ದಾಳೆ. ಅವಳ ಮಾತುಗಳಲ್ಲಿ ಭರವಸೆಯನ್ನು ಕಂಡು ದಿಗ್ಭ್ರಾಂತಳಾದೆ. ನಿಜವಾಗಿ ನೋಡಿದರೆ, ಅವಳು ಮರಳಿ ಬದುಕಿಗೆ ಹಿಂದಿರುಗಿದ್ದು ಒಂದು ದೊಡ್ಡ ಸಾಹಸವೇ ಆಗಿದೆ . ಜೊತೆಗೆ ಅವಳ ಪ್ರಯತ್ನ, ತೆಗೆದುಕೊಂಡ ನಿರ್ಧಾರ ನನ್ನಲ್ಲಿ ವಿಸ್ಮಯ ಮೂಡಿಸಿದೆ. ಆದರೆ ಅಲ್ಲೆಲ್ಲೋ ನಿಮಿತ್ತವಾಗಿ ನನ್ನ ಬುದ್ಧಿವಾದದ ಮಾತುಗಳು ಕೆಲಸ ಮಾಡಿದ್ದು ಎಂದು ನಾನು ಭಾವಿಸುತ್ತೇನೆ. ರಮ್ಯಳನ್ನು ಕಂಡು ಮಾತಾಡಿದಾಗ ನನ್ನಲ್ಲಿ ಧನ್ಯತೆಯ ಭಾವ ಮೂಡಿತು. ಗಂಡನಿಂದ ದೂರವಾದರೂ ಸ್ವ ಪ್ರಯತ್ನದಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಬಲ್ಲೆ ಎಂಬ ಅವಳ ಛಲ ಕಂಡು ನನಗೆ ಸಂತಸವಾಯಿತು. ಅವಳ ಮುಂದಿನ ಜೀವನ ಸುಖಕರವಾಗಿರಲಿ ಎಂದು ದೇವರಲ್ಲಿ ಪ್ರಾರ್ಥಿಸಿದೆ.

- **ಊಹಿಸಿ ಬರೆಯಿರಿ**

ಲೇಖಕಿ ನೇಮಿಚಂದ್ರರು 'ನಾನೊಬ್ಬಳು ಹೋಗಿ ಮಾಡುದೇನು? ''ನನ್ನೊಬ್ಬಳಿಂದೇನಾಗುತ್ತದೆ?' ಎಂದು ಹೇಳಿ ರಮ್ಯಾಳ ಮನೆಗೆ ಹೋಗದೇ ಇರುತ್ತಿದ್ದರೆ ಏನಾಗುತ್ತಿತ್ತು? ವಿದ್ಯಾರ್ಥಿಗಳು ಊಹಿಸಿ ಬರೆಯಲಿ .

- **ಊಹಿಸಿ ಹೀಗೆ ಬರೆಯಬಹುದಲ್ಲವೇ?**

ಲೇಖಕಿ ನೇಮಿಚಂದ್ರರು ರಮ್ಯಾಳು ಇದ್ದ ಉದ್ಯೋಗವನ್ನು ತ್ಯಜಿಸಿ, ಒಂಭತ್ತು ವರ್ಷ ಪ್ರಾಯದ ಮಗುವನ್ನು ಬಿಟ್ಟು ಆಶ್ರಮಕ್ಕೆ ಹೋಗಿ ಸನ್ಯಾಸಿಯಾಗುವುದಾಗಿ ಮಾಡಿದ ನಿರ್ಧಾರವನ್ನು ತಿಳಿದು, ರಮ್ಯಾಳ ಮಲ್ಲೇಶ್ವರಂನಲ್ಲಿರುವ ಮನೆಗೆ ಹೋಗದೇ ಇರುತ್ತಿದ್ದರೆ, ಬಹುಶ: ರಮ್ಯಾ, ಸಾಫ್ಟ್‌ವೇರ್ ರಂಗಕ್ಕೆ ಮರಳಿ ಬರುತ್ತಿರಲಿಲ್ಲ, ಅವಳಲ್ಲಿ ಬದುಕುವ ಛಲ ಮೂಡುತ್ತಿರಲಿಲ್ಲ. ಆಶ್ರಮಕ್ಕೆ ಹೋಗಿ ಸನ್ಯಾಸಿಯಾಗಿ ಜೀವನವನ್ನು ನಡೆಸುತ್ತಿದ್ದಳು. ಔದ್ಯೋಗಿಕ ಬದುಕಿನಿಂದ ದೂರವೇ ಉಳಿಯುತ್ತಿದ್ದಳು. ಅವಳ ಮಗು ಅನಾಥವಾಗುತ್ತಿತ್ತು . ಆಧ್ಯಾತ್ಮಿಕದತ್ತ ಹೊರಳಿ, ಬಂಧು- ಬಳಗದವರಿಂದ ದೂರವಾಗಿ ಸರಳ ಜೀವನವನ್ನು ನಡೆಸಬೇಕಾಗಿ ಬರುತ್ತಿತ್ತು..

# ಪರಹಿತನೆ ವಂದ್ಯನು

'ಪರಹಿತನೆ ವಂದ್ಯನು' ಕಥಾ ಸಂದರ್ಭವನ್ನೂ, ಕಾವ್ಯಭಾಗವನ್ನೂ ವಿದ್ಯಾರ್ಥಿಗಳು ಮೌನವಾಗಿ ಓದಲಿ. ಮಕ್ಕಳಿಗೆ ಇಷ್ಟವಿರುವ ಒಂದೊಂದು ಪದ್ಯವನ್ನು ಆಯ್ದುಕೊಂಡಿರುವವರು ಒಂದೊಂದು ಗುಂಪಾಗಲಿ. ಉದಾಹರಣೆ ಕಾವ್ಯಭಾಗದ ಮೊದಲ ಪದ್ಯವನ್ನು ಆಯ್ದು ಕೊಂಡವರು ಒಂದನೇ ಗುಂಪು. ಹೀಗೆಯೇ ಹತ್ತು ಗುಂಪುಗಳಾಗಲಿ. ಅವರವರು ಆಯ್ದ ಪದ್ಯದಲ್ಲಿರುವ ಪದಗಳನ್ನು ವಿಂಗಡಿಸಿ ಬರೆಯಲಿ. ಕಠಿಣಪದಗಳ ಅರ್ಥ, ಸಂಧಿಪದ, ಸಮಾಸಪದಗಳನ್ನು ಗುರುತಿಸಿ ಬರೆಯಲಿ. ಬಳಿಕ ಗುಂಪಿನಿಂದ ಒಬ್ಬರು ಸರಣಿಯಂತೆ ಪದ್ಯವನ್ನು ಗಟ್ಟಿಯಾಗಿ ಹಾಡಲಿ. ಅಡಕಮುದ್ರಿಕೆಯು ಲಭ್ಯವಿದ್ದರೆ ಅದರ ಮೂಲಕ ಹಾಡನ್ನು ಆಲಿಸುವಂತೆ ಮಾಡುವುದು. ಅಧ್ಯಾಪಕರು ಹಾಡುವುದು. ಪ್ರತಿಯೊಂದು ಗುಂಪಿನವರು ಅವರವರು ಬರೆದ ಪದವಿಂಗಡನೆ. ಕಠಿಣ ಪದಗಳ ಅರ್ಥ ಇತ್ಯಾದಿಗಳನ್ನು ಹೇಳಲಿ. ಅಧ್ಯಾಪಕರು ಅವುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ತಮ್ಮ ಬರವಣಿಗೆಯಲ್ಲಿರುವ ತಪ್ಪುಗಳನ್ನು ಮಕ್ಕಳು ತಿದ್ದಿಕೊಳ್ಳಲಿ. ವಿದ್ಯಾರ್ಥಿಗಳು ಗುರುತಿಸದ ವಿಚಾರಗಳನ್ನು ಅಧ್ಯಾಪಕರು ಹೇಳುವುದು.

- **ಉತ್ತರಿಸುವುದು**

ಆಶಯಗ್ರಹಣ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಉತ್ತರ ಹೇಳಲಿ. ತಪ್ಪಿದಲ್ಲಿ ಸರಿಪಡಿಸುವುದು. ಬಳಿಕ ಅವರು ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

- **ವಿಂಗಡಿಸಿ ಬರೆಯಿರಿ**

- ವಿತಾಳಿಸಿದರಿಂದೆನ್ನ - ವಿತಾಳಿಸಿದರು + ಇಂದು + ಎನ್ನ
- ವಿಪ್ರರೊಳಾವನ್ನೆ - ವಿಪ್ರರೊಳು + ಆವನ್ನೆ
- ತಮ್ಮಂದಿರಲಿವೊಬ್ಬನ - ತಮ್ಮಂದಿರಲಿ + ಒಬ್ಬನ
- ನೀನವರಿಗತಿಹಿತನು - ನೀನು + ಅವರಿಗೆ + ಅತಿಹಿತನು
- ಯಜ್ಞವದೆಂತು - ಯಜ್ಞವು + ಅದು + ಎಂತು
- ನಂದನನಪ್ಪಿದನೊಲವಿನಲಿ - ನಂದನನ + ಅಪ್ಪಿದನು + ಒಲವಿನಲಿ
- ಮೃತ ನೆಂದಾಡವನು - ಮೃತನು + ಎಂದಡೆ + ಆವನು
- ನೃಪನಿಂದಳಿವುದಾ - ನೃಪನಿಂದ + ಅಳಿವುದು + ಆ
- ಯಮತನುಜನಿಂತೆಂದ - ಯಮತನುಜನು + ಇಂತು + ಎಂದ

- **ಸಂಭಾಷಣೆ ಬರೆಯಿರಿ**

ಈಗಾಗಲೇ ವಿದ್ಯಾರ್ಥಿಗಳು ಕಾವ್ಯದ ಆಶಯವನ್ನು ತಿಳಿದುಕೊಂಡಿದ್ದಾರೆ. ಇನ್ನು ಧರ್ಮರಾಯ ಮತ್ತು ಯಕ್ಷನ ನಡುವೆ ನಡೆದಿರುವ ಸಂಭಾಷಣೆಯ ಭಾಗವನ್ನು ಗುರುತಿಸಿ ಕೊಂಡು ಸಂಭಾಷಣೆಯನ್ನು ವೈಯಕ್ತಿಕವಾಗಿ ರಚಿಸಲು ಹೇಳುವುದು. ವೈಯಕ್ತಿಕ ರಚನೆಯ ಬಳಿಕ ಗುಂಪಿನಲ್ಲಿ ಕುಳಿತು ಉತ್ತಮಪಡಿಸಲಿ. ಬಳಿಕ ಪಾತ್ರವನ್ನು ಹಂಚಿಕೊಂಡು ತರಗತಿಯಲ್ಲಿ ಸಂಭಾಷಣೆ ನಡೆಸಲಿ.

**ಸಂಭಾಷಣೆ ಹೀಗೂ ಇರಬಹುದಲ್ಲವೇ?**

ಯಕ್ಷ : ಕ್ಷತ್ರಿಯನು ಯಾವನಯ್ಯಾ ?

ಧರ್ಮರಾಯ : ಧೃತಿಯುತನಾದವನೇ ಕ್ಷತ್ರಿಯನು.

ಯಕ್ಷ : ವಿಪ್ರರಲ್ಲಿ ಶ್ರೋತ್ರಿಯನು ಯಾರು?

ಧರ್ಮರಾಯ : ವೇದಗಳ ಸಾರವನ್ನು ಚೆನ್ನಾಗಿ ಬಲ್ಲವನು.

ಯಕ್ಷ : ಸುಜನರಲ್ಲಿ 'ಮಹಾಪುರುಷ' ಎಂದರೆ ಯಾರು ?

ಧರ್ಮರಾಯ : ಅಹಿಂಸೆಯನ್ನು ಪಾಲಿಸುವವನು .

ಯಕ್ಷ : 'ಧೀಮ' ಎಂದು ಯಾರನ್ನು ಹೇಳಬಹುದು?

ಧರ್ಮರಾಯ : ಸಾಧುಗಳನ್ನು ತ್ರಿಕರಣಪೂರ್ವಕ ಸೇವಿಸವವನೇ 'ಧೀಮ'ನು.

ಯಕ್ಷ : 'ದೇವಪ್ರಿಯ' ನೆಂದರೆ ಯಾರು?

ಧರ್ಮರಾಯ : ಪರೋಪಕಾರ ನಿರತನಾದವನೇ ದೇವಪ್ರಿಯನು.

ಯಕ್ಷ : 'ಕಷ್ಟ' ಎಂದು ಯಾರನ್ನು ಕರೆಯುತ್ತೀಯ?

ಧರ್ಮರಾಯ : ಇತರರ ಗುಣದ ಏಳಿಗೆಯನ್ನು ಸಹಿಸದವನು 'ಕಷ್ಟ 'ನು.

ಯಕ್ಷ : ಜಗತ್ತಿನಲ್ಲಿ 'ನಿಂದ್ಯ ' ಎನ್ನಬಹುದಾದವನು ಯಾರು?

ಧರ್ಮರಾಯ : ಪರನಿಂದಕನೇ ನಿಂದನು.

ಯಕ್ಷ : 'ಅಭಿವಂದ್ಯನು' ಎಂದು ಯಾರನ್ನು ಹೇಳಬಹುದು?

ಧರ್ಮರಾಯ : ಪರರ ಹಿತವನ್ನೇ ಸದಾ ಬಯಸುವವನು ಅಭಿನಂದನೆಗೆ ಅರ್ಹ.

ಯಕ್ಷ : 'ಜೀವನ್ಮೃತ' (ಬದುಕಿದ್ದೂ ಸತ್ತವನು) ಎಂದರೆ ಯಾರು?

ಧರ್ಮರಾಯ : ಕಡುಬಡವನನ್ನೇ ನಡೆವೆಣ (ಜೀವನ್ಮೃತ) ಎನ್ನುತ್ತಾರೆ.

ಯಕ್ಷ : ದೇಶವನ್ನು ಹಾಳುಬಮಾಡುವವನು ಯಾರು?

ಧರ್ಮರಾಯ : ತನ್ನ ಇಷ್ಟದಂತೆ ಎಲ್ಲರೂ ನಡೆಯಬೇಕು ಎಂಬ ರಾಜನಿಂದ ದೇಶ ಹಾಳು.

ಯಕ್ಷ : ಯಾಗ ಯಾವುದರಿಂದ ಕೆಡುತ್ತದೆ?

ಧರ್ಮರಾಯ : ದಕ್ಷಿಣೆಯನ್ನು ತಕ್ಕಷ್ಟು ನೀಡದಿದ್ದಾಗ, ಯಾಗವು ನಿಷ್ಫಲವಾಗುತ್ತದೆ.

ಯಕ್ಷ : ............................

ಧರ್ಮರಾಯ : ............................

ಯಕ್ಷ : ............................

- **ಸ್ವಾರಸ್ಯ ಬರೆಯಿರಿ**

ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ಸ್ವಾರಸ್ಯ ಬರೆಯುವ ಕ್ರಮದ ಬಗ್ಗೆ ತಿಳಿದಿರುವರು. ಸ್ವಾರಸ್ಯ ಬದವಣಿಗೆಯಲ್ಲಿ ಇರಬೇಕಾದ ವಿಚಾರಗಳ ಕುರಿತು ಚರ್ಚಿಸುವುದು. ಬಳಿಕ ಕೊಟ್ಟಿರುವ ಸಾಲುಗಳ ಸ್ವಾರಸ್ಯವನ್ನು ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಬರೆದು ಮಂಡಿಸಲು ಹೇಳುವುದು. ಮಂಡನೆಯ ಬಳಿಕ ತರಗತಿಯಲ್ಲಿ ಚರ್ಚೆ ನಡೆಸುವುದು. ಉತ್ತಮ ಪಡಿಸಬೇಕಾದ ವಿಚಾರವನ್ನು ತಿಳಿದುಕೊಂಡು ಅಗತ್ಯದ ಬದಲಾವಣೆಯೊಂದಿಗೆ ವಿದ್ಯಾರ್ಥಿಗಳು ಬರೆಯಲಿ. ಬಳಿಕ ಪರಸ್ಪರ ಮೌಲ್ಯ ಮಾಪನ ಮಾಡಲು ಹೇಳುವುದು.

**ಸ್ವಾರಸ್ಯ ಬರವಣಿಗೆ ಹೀಗೂ ಇರಬಹುದಲ್ಲವೇ?**

"ಕೇಳು ಪರನಿಂದಕನೆನಿಂದ್ಯನು
ಹೇಳಲೇಂ ಪರಹಿನೆ ವಂದ್ಯನು"

'ಪರಹಿತನೆ ವಂದ್ಯನು' ಕಾವ್ಯಭಾಗದಲ್ಲಿ ಬರುವ ಧರ್ಮ ರಾಯನ ಮಾತುಗಳಿವು. ಯಕ್ಷನು ಧರ್ಮರಾಯನಲ್ಲಿ 'ನಿಂದ್ಯನಾವನು ಲೋಹದೊಳಗಭಿವಂದ್ಯನಾವನು' ಎಂದು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಧರ್ಮರಾಯನು, ಪರರನ್ನು ನಿಂದಿಸುವವನೇ 'ನಿಂದ್ಯ'ನು ಎಂದರೆ ನಿಂದಿಸಲ್ಪಬೇಕಾದವನು. 'ಅಭಿವಂದ್ಯ'ನು ಎಂದರೆ ವಂದನೆಗೆ ಅರ್ಹನು ಯಾರು? ಎಂಬುದು ಪ್ರಶ್ನೆ. ಅದಕ್ಕೆ ಉತ್ತರವಾಗಿ ಪರ ಹಿತವನ್ನೇ ಸದಾ ಬಯಸುವವನು ಅಭಿನಂದನೆಗೆ ಅರ್ಹನು" ಎಂದು ಬಹಳ ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ. ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ ಧರ್ಮರಾಯನ ಮಾತುಗಳು ಸಾರ್ವತ್ರಿಕವಾಗಿಯೂ ಸಾರ್ವಕಾಲಿಕವಾಗಿಯೂ ಪ್ರಸ್ತುತತೆಯನ್ನು ಪಡೆಯುತ್ತವೆ ಎಂಬುದರಲ್ಲಿ ಎರಡು ಮಾತ್ತಿಲ್ಲ.

- **ಕಥೆ ಬರೆಯಿರಿ**

ಈಗಾಗಲೇ ಕಥಾಸಂದರ್ಭ ಕಠಿಣ ಪದಗಳ ಅರ್ಥ ಮತ್ತು ಪದವಿಂಗಡನೆಗಳನ್ನು ತಿಳಿದು ಕೊಂಡಿರುವ ವಿದ್ಯಾರ್ಥಿಗಳಿಗೆ ಕಾವ್ಯಭಾಗದ ಆಶಯವು ಮನವರಿಕೆಯಾಗಿರುತ್ತದೆ. ಇದರ ಆಧಾರದಲ್ಲಿ ಗುಂಪಿನಲ್ಲಿ ಚರ್ಚಿಸಿ, ಕಥೆಯನ್ನು ಬರೆಯಲಿ. ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಮಂಡಿಸುವಾಗ ಬಿಟ್ಟು ಹೋದ ಅಂಶಗಳೇನಾದರೂ ಇದ್ದರೆ ಅವುಗಳನ್ನು ಸೇರಿಸಿ ಉತ್ತಮ ಪಡಿಸಿ, ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದು ಕೊಳ್ಳಲಿ.

**ಕಥೆಯನ್ನು ಹೀಗೂ ಬರೆಯಬಹುದಲ್ಲವೇ?**

ನಾನು ಯಕ್ಷ ಈ ಸರೋವರ ನನ್ನದು. ನಿನ್ನ ತಮ್ಮಂದಿರ ಪ್ರಾಣವನ್ನು ಎಳೆದುಕೊಂಡವನು ನಾನೇ ಧರ್ಮರಾಯ, "ಬಾಲಕರು ನೀವು ನನ್ನ ಮಾತುಗಳನ್ನು ಕೇಳಿ ನೀರು ಕುಡಿಯಿರಿ" ಎಂದರೆ, ಭೂಪಾಲಾ, ನಿನ್ನವರು ನನ್ನ ಮಾತನ್ನು ಮನ್ನಿಸದೆ ಮೀರಿದರು; ಮೇಲುಗಾಣದೆ ನೀರು ಕುಡಿದು ಸತ್ತರು. ನನ್ನ ಮಾತನ್ನು ಕೇಳಿ ನೀನು ಉತ್ತರ ಕೊಡು" ಎಂದಿತು, ಆಕಾಶವಾಣಿ. ಧರ್ಮರಾಯನು ಅದಕ್ಕೊಪ್ಪಿ "ಹೇಳು" ಎಂದನು. ಪ್ರಶ್ನೋತ್ತರ ಪ್ರಾರಂಭವಾಯಿತು.

"ನಯವಿದನೇ ಕೇಳು, ಕ್ಷತ್ರಿಯನು ಯಾರಯ್ಯಾ? ವಿಪ್ರರಲ್ಲಿ ಶ್ರೋತ್ರಿಯನು ಯಾವನಯ್ಯಾ? ಸುಜನರಲ್ಲಿ ಮಹಾಪುರುಷನು ಯಾವನಯ್ಯಾ? ಧೀಮಂತನು ಯಾರು? ದೇವಪ್ರಿಯನು ಯಾವನು? ಕಠಿಣಕಷ್ಟಾಶ್ರನು ಯಾವನು? ಧರ್ಮಸುತಾ ಹೇಳು" ಎಂದನು ಯಕ್ಷ. 'ಧೃತಿಯುತನಾದವನೇ ಕ್ಷತ್ರಿಯ. ವೇದಪ್ರತತಿಯುತನೇ ಶ್ರೋತ್ರಿಯು.ಅಹಿಂಸಾರತನಾದವನೇ ಮಹಾಪುರುಷನು. ಸಾಧು ಸೇವಕನೇ ಶ್ರೇಷ್ಠಧೀಮಂತನು. ಯಾವಾಗಲೂ ಪರರಿಗೆ ಉಪಕಾರಿಯಾಗಿರುವವನು,ದೇವರಿಗೆ ಪ್ರಿಯನಾದವನು. ಪರರಗುಣಗುಣದ ಉನ್ನತಿಯನ್ನು ಸೈರಿಸದವನೇ ದುಷ್ಟನು"ಎಂದು ಧರ್ಮರಾಯನು ಉತ್ತರವನ್ನು ನೀಡಿದನು.

"ನಿಂದ್ಯನು ಯಾವನು? ಲೋಕದೊಳಗೆ ಅಭಿವಂದ್ಯನು ಯಾವನು? ಜೀವವಿದ್ದು ಮೃತನೆನ್ನಿಸಿಕೊಳ್ಳುವವನು ಯಾವನು? ಯಾರ ದೆಸೆಯಿಂದ ದೇಶಕ್ಕೆ ಅಳಿವಾಗುತ್ತದೆ? ಶ್ರೇಷ್ಠವಾದ ಯಜ್ಞವು ಹೇಗೆ ಕೆಡುತ್ತದೆ? ನನಗೆ ಹೇಳಯ್ಯಾ ಎನ್ನಲು ಧರ್ಮರಾಯನು ಆನಂದದಿಂದ ಖಚರನಿಗೆ ಉತ್ತರ ಕೊಟ್ಟನು.

ಧರ್ಮರಾಯನ ಉತ್ತರಗಳನ್ನು ಕೇಳಿ ಯಕ್ಷನು ಸಂತೋಷದಿಂದ ಪ್ರತ್ಯಕ್ಷನಾದನು. ಧರ್ಮಸಂಗತಿಗಳ ಹಿತಕರವಾದ ಸಂಚಾರದಲ್ಲಿ ಅವನಿಗೆ ರೋಮಾಂಚಕನವಾಯಿತು. ಅವನು, "ಎಲೆ ಮಹೀಪತೀ, ಮೆಚ್ಚಿದೆನು. ಅಳಿದ ತಮ್ಮಂದಿರರಲ್ಲಿ ಒಬ್ಬನನ್ನು ಬದುಕಿಸಿ ಕೊಡುತ್ತೇನೆ. ಯಾರು ಬೇಕೋ ಬೇಡು" ಎಂದನು. ಆ ಮಾತು ಕೇಳಿ ಯಮತನುಜನು ಹೀಗೆಂದನು; "ಅಯ್ಯಾ ಖಚರಪತೀ, ನೀನು ಪ್ರಾಣವನ್ನು ಕೊಟ್ಟೆಯಷ್ಟೇ? ಜೀವಿಸಲಿ ನಕುಲನು, ಆಗ ನಾನು ಧನ್ಯನಾದೆ "ಎಂದನು. ಒಡನೆಯೇ ಚೇತರಿಸಿಕೊಂಡು ನಸುನಗುತ ನಕುಲನು ಮೈಮುರಿದೆದ್ದನು. "ನಿಶಿತಮತೀ, ಮೆಚ್ಚಿದೆ ಬೇಡು, ಇನ್ನೊಬ್ಬನಿಗೆ ಪ್ರಾಣಕೊಡುತ್ತೇನೆ." ಎಂದನು ಯಕ್ಷ. ಆಗ ಧರ್ಮನಂದನನು, "ಸಹದೇವನು ಜೀವಿಸಲಿ" ಎಂದನು. "ಜನಪಾ, ನಿನ್ನ ಮಾತು ಕೇಳಿ ನನಗೆ ವಿಸ್ಮಯವಾಯಿತು. ಭೀಮಾರ್ಜುನರು ನಿನ್ನ ನಿನ್ನ ಒಡಹುಟ್ಟಿದವರು. ನೀನು ಅವರಿಗೆ ಅತಿಹಿತನಾದವನು. ನಿನ್ನ ಸ್ವಂತ ತಮ್ಮಂದಿರಾದ ಅವರಿರುವಾಗ, ಮಾದ್ರೀತನುಜರನ್ನು ಬಯಸಿದೆಯಲ್ಲಾ! ಏಕೆ? ಹೇಳು" ಎಂದು ಪ್ರಶ್ನೆಮಾಡಿದನು. ಆಗ ಧರ್ಮನಂದನನು ನಮ್ಮ ತಂದೆಗೆ ಸಾವುಂಟಾಗಲು ಮಾದ್ರಿದೇವಿಯು

ನನ್ನನ್ನು ಕರೆದು, "ಮಗನೇ,ಈ ಮಕ್ಕಳ ನೋವು ಕೇಡುಗಳು ನಿನ್ನವು ಎಂದು ತಿಳಿ,ಇವರನ್ನು ಚೆನ್ನಾಗಿ ನೋಡಿಕೊಂಡು ಕಾಪಾಡು. ಅಣುವಿನಷ್ಟೂ ಭಾವಭೇದವನ್ನೆಣಿಸದೆ ಇವರನ್ನು ಕಾಪಾಡು!" ಎಂದು ಹೇಳಿ ನನಗೊಪ್ಪಿಸಿಕೊಟ್ಟಳು. ಈ ಮಾದ್ರೀಕುಮಾರರನ್ನು ಹೇಗೆ ತಾನೇ ಮರೆಯಲಿ? ಎಂದನು. ಧರ್ಮರಾಯನ ಈ ಮಾತುಗಳನ್ನು ಕೇಳಿ ಮೆಚ್ಚಿ, ಅದುವರೆಗೂ ಖಚರರೂಪದಲ್ಲಿ ಪರೀಕ್ಷಿಸುತ್ತಿದ್ದ ಯಮರಾಜನು ನಿಜರೂಪದಲ್ಲಿ ಬಂದು ಭೀಮಾರ್ಜುನರ ಪ್ರಾಣವನ್ನೂ ಕೊಟ್ಟು ಬದುಕಿಸಿ, ತನ್ನ ನಂದನನನ್ನು ಪ್ರೀತಿಯಿಂದ ಅಪ್ಪಿಕೊಂಡನು. "ಮಗನೇ, ಇನ್ನು ಸಾಕು ನಿನಗೆ ಈ ವನವಾಸ ಮುಗಿಯಿತು. ಮುನಿಜನಗಳನ್ನು ಹೋಗಿ ಬನ್ನಿರೆಂದು ಹೇಳಿ ಕಳುಹಿಸಿಕೊಡು. ಇನ್ನು ಅಜ್ಞಾತವಾಸಕ್ಕೆ ಮನಸ್ಸುಮಾಡು" ಎಂದು ಪಾಂಡುನಂದನರನ್ನು ಬೀಳ್ಕೊಟ್ಟನು.

- **ಪಾತ್ರಚಿತ್ರಣ ಮಾಡಿರಿ**

'ಪರಹಿತನೆ ವಂದ್ಯನು' ಕಾವ್ಯಭಾಗವನ್ನು ಓದಿದ ವಿದ್ಯಾರ್ಥಿಗಳು ಆಶಯವನ್ನು ಸರಿಯಾಗಿ ಅರ್ಥೈಸಿಕೊಂಡ ಬಳಿಕ ಇಷ್ಟವಾದ ಪಾತ್ರದ ಬಗ್ಗೆ ಪ್ರಶ್ನಿಸುವುದು. ವಿದ್ಯಾರ್ಥಿಗಳು ತಮಗೆ ಇಷ್ಟವಾದ ಪಾತ್ರ ಯಾವುದು? ಯಾಕೆ ಇಷ್ಟವಾಯಿತು? ಎಂದು ಹೇಳಲಿ. ಬಳಿಕ ಧರ್ಮರಾಯನ ಪಾತ್ರಚಿತ್ರಣ ಮಾಡಲು ಹೇಳುವುದು.

## ಪಾತ್ರಚಿತ್ರಣ ಹೀಗೂ ಇರಬಹುದಲ್ಲವೇ?

'ಪರಹಿತನೆ ವಂದ್ಯನು' ಎಂಬ ಕಾವ್ಯಭಾಗದಲ್ಲಿ ಧರ್ಮರಾಯನದು ಪ್ರಧಾನ ಪಾತ್ರ . ಆತ ತಾಳ್ಮೆ , ತ್ಯಾಗ, ವಚನಬದ್ಧತೆ ಮುಂತಾದ ಮಾನವೀಯ ಮೌಲ್ಯಗಳ ಸಾಕಾರಮೂರ್ತಿಯಂತೆ ಕಂಗೊಳಿಸುತ್ತಾನೆ. ತನ್ನ ಒಡಹುಟ್ಟಿದ ನಾಲ್ಕು ಮಂದಿ ತಮ್ಮಂದಿರು ಸರೋವರದ ದಡದಲ್ಲಿ ಸತ್ತು ಬಿದ್ದಿದ್ದರೂ, ಆ ನೋವನ್ನು ನುಂಗಿಕೊಂಡು, "ಭೂಪಾಲ ನಿನ್ನವರೆನ್ನ ಮಾತನು ಕೇಳ ಮನ್ನಿಸದೆ ಮೇಲುಗಾಣದೆ ನೀರುಕುಡಿದು ವಿತಾಳಿಸಿದರಿಂದೆನ್ನ ಮಾತನು ಕಳಿ ನೀನುತ್ತರವ ರಚಿಸು", ಎಂಬ ಯಕ್ಷನ ಮಾತಿಗೆ ಧರ್ಮರಾಯನು, ಆತನ ಎಲ್ಲಾ ಪ್ರಶ್ನೆಗಳಿಗೆ ತಾಳ್ಮೆಯಿಂದಲೇ ಉತ್ತರಿಸುತ್ತಾನೆ. ಇಲ್ಲಿ ಧರ್ಮರಾಯನ ಸಹನೆ ಮತ್ತು ಸಂಯಮಗುಣವನ್ನು ಕಾಣಬಹುದು. ನಾಲ್ಕು ಮಂದಿ ಸಹೋದರ ಮೇಲೆ ಪ್ರೀತಿಯಿದ್ದರೂ, ಯಕ್ಷನು "ಎಲೆ ಮಹೀಪತಿ ಮೆಚ್ಚಿದೆನು ಬೇಡಳಿದ ತಮ್ಮಂದಿರಲಿವೊಬ್ಬನ ತಲೆಯ ಬದುಕಿಸಿಕೊಡುವೆನು" ಎಂದಾಗ ಮಾದ್ರಿಸುತನಾದ ನಕುಲನನ್ನು ಬದುಕಿಸಿಕೊಡು ಎಂದು ಬೇಡುತ್ತಾನೆ. ನಕುಲ ಬದುಕಿದ ಬಳಿಕ , ಇನ್ನೊಬ್ಬನ ಅಸುವನ್ನು ಬೇಡು ಎಂದಾಗಲೂ, ಧರ್ಮರಾಯ "ಜೀವಿಸಲಿ ಸಹದೇವಾಂಕನು" ಎಂಬ ಮಾತು ಆತನ ತ್ಯಾಗಗುಣಕ್ಕೆ ಹಿಡಿದ ಕೈಗನ್ನಡಿಯಾಗಿದೆ. "ಭಾವಭೇದವನಣುವ ಬಗೆಯದೆ ಕಾವುದಲೆ ಮಗನನೆಂದು ಬೆಸಸಿದಳಾಪರಿಯಲಿ ಮರೆವೆನ್ನೆ ಮಾದ್ರಿಕುಮಾರಕರ" ಎಂಬ ಮಾತಂತು ಅವನ ವಚನಬದ್ಧತೆ, ಸತ್ಯಸಂದತೆಗೆ ಸಾಕ್ಷಿ. ಒಟ್ಟಿನಲ್ಲಿ ಕಾವ್ಯಭಾಗದಲ್ಲಿ ಧರ್ಮರಯ ಓರ್ವ ಮೇರುವ್ಯಕ್ತಿಯಾಗಿ ಗೋಚರಿಸುತ್ತಾನೆ ಎಂಬುವುದರಲ್ಲಿ ಎರಡು ಮಾತಿಲ್ಲ.

- **ತದ್ಭವರೂಪ ಬರೆಯಿರಿ**

ಅಧ್ಯಾಪಕರು ಸಂಸ್ಕೃತ-ತದ್ಭವ ಪದಗಳ ಪರಚಯ ಮಾಡಿಸುವುದು. ಕೆಲವು ಸಂಸ್ಕೃತ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಪದಗಳಲ್ಲಾದ ಬದಲಾವಣೆಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ಒದಗಿಸುವುದು. ಅನಂತರ ಚಟುವಟಿಕೆಯಲ್ಲಿ ನೀಡಿದ ಪದಗಳನ್ನು ಓದಿಸುವುದು. ಅಲ್ಲಿ ಬಂದಿರುವ ಸಂಸ್ಕೃತ ಪದಗಳಿಗ ಸರಿಯಾದ ತದ್ಭವ ಪದಗಳನ್ನು ಸಾಧ್ಯವಿರುವಷ್ಟು ವಿದ್ಯಾರ್ಥಿಗಳಿಂದಲೇ ಹೇಳಿಸುವುದು. ವಿದ್ಯಾರ್ಥಿಗಳು ಹೇಳಿದ ಪದಗಳು ಸರಿಯಾಗಿದ್ದರೆ ಆ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ವಿದ್ಯಾರ್ಥಿಗಳು ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

- ವನ - ಬನ
- ಯಜ್ಞ - ಜನ್ನ
- ಪ್ರಾಣ - ಹರಣ
- ರಾಜ - ರಾಯ

- **ವಾಚನ ವ್ಯಾಖ್ಯಾನ ಮಾಡಿರಿ**

ತರಗತಿಯಲ್ಲಿ ಕಥಾ ಸಂದರ್ಭವನ್ನು ತಿಳಿಸುವುದು. ಅನಂತರ ತರಗತಿಯಲ್ಲಿ ಮಕ್ಕಳನ್ನು ಗುಂಪುಮಾಡಿ ಕಾವ್ಯಭಾಗವನ್ನು ಓದಲು ಹೇಳುವುದು. ಅದರಲ್ಲಿ ಬರುವ ಪಾತ್ರಗಳನ್ನು ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳಿಗೆ ಹಂಚಿಕೊಡುವುದು. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಗುಂಪುಗಳಾಗಿ ಮಾಡಿ ಹಂಚುವುದು. ಅವರಿಗೆ ಅಗತ್ಯವಾದ ಸಮಯಾವಧಿ ಕೊಟ್ಟ ಬಳಿಕ ಮಂಡಿಸಲು ಹೇಳುವುದು. ಮೌಲ್ಯ ಮಾಪನದ ಸೂಚಕಗಳನ್ನು ಚರ್ಚೆಯ ಮೂಲಕ ನಿಶ್ಚಯಿಸಿ ಕರಿಹಲಗೆಯಲ್ಲಿ ಬರೆಯುವುದು.

**ಮೌಲ್ಯಮಾಪನ ಸೂಚಕಗಳು :**

- ಭಾವಪೂರ್ಣವಾಗಿಯೂ, ರಾಗವಾಗಿಯೂ ತಪ್ಪಿಲ್ಲದೆ ಹಾಡುವುದು.
- ಹಾಡಿಗನುಗುಣವಾದ ಆಶಯಪೂರ್ಣವಾದ ಸಂಭಾಷಣೆ.
- ಉಚ್ಚಾರ ಸ್ಪಷ್ಟತೆ.

ಉತ್ತಮವಾಗಿ ನಿರ್ವಹಿಸಿದ ಗುಂಪನ್ನು ಅಭಿನಂದಿಸುವುದು.ವ್ಯಾಖ್ಯಾನವಿರುವ ಧ್ವನಿಮುದ್ರಿಕೆ ಲಭ್ಯವಿದ್ದಲ್ಲಿ ಮಕ್ಕಳಿಗೆ ಆಲಿಸಲು ಅವಕಾಶ ಮಾಡಿಕೊಡುವುದು.

- **ಛಂದಸ್ಸು ಗುರುತಿಸುವುದು**

ವಿದ್ಯಾರ್ಥಿಗಳು ಪದ್ಯದ ಸಾಲುಗಳನ್ನು ಬರೆಯಲಿ. ಬಳಿಕ ಲಘು ಗುರುಗಳನ್ನು ಗುರುತಿಸಲಿ. 8ನೇ ತರಗತಿಯಲ್ಲಿ ವಿದ್ಯಾರ್ಥಿಗಳು ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿರುವುದನ್ನು ನೆನಪಿಸುವುದು. ಇದೇ ರೀತಿಯಲ್ಲಿ ಕೊಟ್ಟ ಪದ್ಯದ ಗಣ ವಿಭಾಗ ಮಾಡಿ ಯಾವ ಷಟ್ಪದಿಯೆಂದು ಗುರುತಿಸಲಿ.

U U U    U U U U     U

ಒಲಿದ | ನೊಡಲನು|ಧರ್ಮ|

_ U U

ಸಂಗತಿ

U U U   _ _ U U U U U U

ಗಳಸು| ಸಂವಾ|ದದಲಿ|ನಿತನು

U U U _U U  U U U

ಪುಳಕ|ವುಬ್ಬರಿ|ಸಿದುದು|

_U U U U U   _ U   U_

ಗಬ್ಬರಿ|ಸಿದುದು |ದುಷ್ಕೃತ|ವ

U U U   _ U U  _U   U U

ಎಲೆ ಮ|ಹೀಪತಿ| ಮೆಚ್ಚಿ|ದೆನು

_

ಬೇ

U U U  _ _   U UU _ U U

ಡಳಿದ| ತಮ್ಮಂ|ದಿರಲಿ|ವೊಬ್ಬನ

U U U   U U U U  U  U U

ತಲೆಯ |ಬದುಕಿಸಿ| ಕೊಡುವೆ|

UU  U  U   U U U _ _ -

ನೆನೆ ಯಮ|ತನುಜ|ನಿಂತೆಂ|ದ

## ಭಾಮಿನಿ ಷಟ್ಪದಿ :

ಮೇಲಿನ ಪದ್ಯದ ಆರು ಸಾಲುಗಳಲ್ಲಿ ಒಂದು ಎರಡು ನಾಲ್ಕು ಮತ್ತು ಐದನೇ ಸಾಲುಗಳ ಮೂರು ಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣವು ಬರುವಂತೆ ನಾಲ್ಕು ನಾಲ್ಕು ಗಣಗಳಿವೆ. ಮೂರು ಮತ್ತು ಆರನೇ ಸಾಲಿನಲ್ಲಿ ಅಂಥ ಮೂರು ಮೂರು ಗಣಗಳೂ ಕೊನೆಯಲ್ಲಿ ಒಂದು ಗುರುವೂ ಬರುತ್ತದೆ.ಮೂರು ಮತ್ತು ಆರನೇ ಸಾಲಿನ ಕೊನೆಯಲ್ಲಿ ಲಘು ಬಂದರೂ ಅದನ್ನು ಗುರುವಾಗಿಯೇ ಪರಿಗಣಿಸಬೇಕು. ಈ ಲಕ್ಷಣವನ್ನು ಹೊಂದಿದ ಛಂದಸ್ಸಿಗೆ ಭಾಮಿನಿ ಷಟ್ಪದಿ ಎಂದು ಹೆಸರು.

ಘಟಕ 4

# ಉಳುಮೆಯೆ ಉಸಿರು

## ಮುನ್ನುಡಿ

ಪ್ರಕೃತಿ ಮತ್ತು ಮಾನವ ಒಂದಾಗುವ ಕಾಯಕವೆಂದರೆ ಅದು ಕೃಷಿ . ಮನುಷ್ಯ ನಾಗರಿಕತೆಯ ಮೊದಲ ವೃತ್ತಿ ಕೃಷಿ. ಉಳಿವಿನ ಉಸಿರಿಗೆ ಜೊತೆಯಾಗುವ ಈ ಪವಿತ್ರ ವೃತ್ತಿ ಕೇವಲ ಹಣ ಸಂಪಾದನೆಯ ಕೆಲಸವಲ್ಲ. ಅದು ಮೌಲ್ಯಗಳ, ಮನೋಭಾವಗಳ, ಸಂಬಂಧಗಳ, ತ್ಯಾಗದ, ಬಲಿದಾನದ ಹಂಚಿಕೆಯ ಸಮ್ಮಿಳಿತ ಬಾಳ್ವೆಯಾಗಿದೆ.

ಕೃಷಿ ಎಂಬುದು ಎಲ್ಲಾ ವೃತ್ತಿಗಳಿಗೂ ಅಡಿಪಾಯ. ಹಾಗಾಗಿಯೇ ಕೃಷಿಕರನ್ನು 'ಆರಂಭಗಾರರು' ಎಂಬುದಾಗಿಯೂ ಕರೆಯಲಾಗುತ್ತದೆ. ಕೃಷಿಕನ ಹಸಿವು, ನಿದ್ದೆ, ನೋವು, ನಲಿವು, ಉಸಿರು ಎಲ್ಲವೂ ಕೃಷಿಯೇ ಆಗಿದೆ.

ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ

ಅನ್ನವುಂಟಾದರುಣಲುಂಟು ಜಗಕೆಲ್ಲ

ಅನ್ನವೇ ಪ್ರಾಣ ಸರ್ವಜ್ಞ

ಎಂಬ ವಚನ ಅನ್ನದೇವರ ಮಹತ್ವವನ್ನು ಪ್ರಸ್ತುತ ಪಡಿಸುವುದರೊಂದಿಗೆ ಅದನ್ನು ನಮಗೆ ಉಣಲಿಕ್ಕುವ ಕೃಷಿಕನ ಋಣವನ್ನು ನೆನಪಿಸುತ್ತದೆ.

ಭೂಮಿತಾಯಿ ಒಲಿದು ಕೈ ಹಿಡಿಯಬೇಕು, ಗಗನ ಕರುಣೆ ತೋರಿ ಮಳೆ ಸುರಿಸಬೇಕು. ಕಾಲ ಕಾಲಕ್ಕೆ ಬದಲಾಗುವ ಋತುಗಳು ತಮ್ಮ ಇರುವಿಕೆಯನ್ನು ತೋರಬೇಕು. ಹೀಗಾದಾಗ ಭೂಮಿ ಹಸನಾಗುತ್ತದೆ, ಹಸಿರಾಗುತ್ತದೆ. ರೈತನ ಬಾಳು ಬೆಳಗುತ್ತದೆ. ಆ ಬೆಳಕು ಎಲ್ಲರ ಹೊಟ್ಟೆಯನ್ನು ತಂಪಾಗಿಸುತ್ತದೆ.

'ಉಳುಮೆಯೆ ಉಸಿರು' ಘಟಕದಲ್ಲಿರುವ ಪ್ರವೇಶ ಚಟುವಟಿಕೆ ಹಾಗೂ ಮೂರು ಪಾಠಗಳು ಕೃಷಿ ಜಗತ್ತಿನ ಒಳ ಸುಳಿವುಗಳನ್ನು ಅನಾವರಣಗೊಳಿಸುತ್ತವೆ. ಭೂಮಿ ಮತ್ತು ಕೃಷಿಕನ ನಡುವಣ ಭಾವನಾತ್ಮಕ ಸಂಬಂಧ ಹಾಗೂ ಪರಂಪರೆಯಿಂದ ಅದು ಮುಂದಿನ ಪೀಳಿಗೆಗೆ ಹಸ್ತಾಂತರಿಸಲ್ಪಡುವ ಪ್ರಕ್ರಿಯೆ ಈ ಘಟಕದ ಮೂಲ ಧಾತು.

ಪ್ರವೇಶ ಚಟುವಟಿಕೆಯಾಗಿ ನೀಡಿರುವ ಜನಪದ ತ್ರಿಪದಿಯು ಹೊಸದಾಗಿ ಕೃಷಿ ಕಾಯಕಕ್ಕೆ ಕಾಲಿಟ್ಟ ರೈತನ ಮಗ ಭೂದೇವಿಗೆ ನಮಿಸಿ, ಕೃಷಿ ಕಾಯಕದ ಕುರಿತು ತನ್ನ ಅಜ್ಞಾನವನ್ನು ನಿವೇದಿಸುತ್ತಾನೆ. ಕೃಷಿ ಕಾಯಕಕ್ಕೆ ಪ್ರಕೃತಿಯೊಂದಿಗೆ ಬೆರೆತು ಗಳಿಸಿದ ಜ್ಞಾನವೇ ಮೂಲ ಧಾತು. ಅದು ಕಲಿಕೆಯಿಂದಲ್ಲ, ಕೆಸರಾಗುವುದರಿಂದ ಲಭಿಸುವಂತದ್ದು. ಅದನ್ನು ಭೂಮಿತಾಯಿ ಕರುಣಿಸಿ ನೀಡಬೇಕು ಬಳಿ ಬಂದವನನ್ನು ತನ್ನ ಮಗನೆಂಬ ಮಾತೃವಾತ್ಸಲ್ಯದಿಂದ ಮುನ್ನಡೆಸಬೇಕು. ದುಡಿಯುವ ಮನಸ್ಸು ನನಗಿದೆ. ದುಡಿಸಿಕೊಳ್ಳಬೇಕಾದವಳು ನೀನು ಎಂಬ ಆರ್ತತೆ ಈ ಜನಪದ ತ್ರಿಪದಿಯಲ್ಲಿದೆ.

'ಕೂಡುಮನೆ' ಪಾಠಭಾಗವು ಕಿರು ಕಾದಂಬರಿಯೊಂದರ ಭಾಗವಾಗಿದೆ. ನಗರ ಜೀವನದ ಥಳಕು ಬಳುಕಿನ ಮಾಯೆಯಿಂದ ದೂರವಾಗಿ ಸಹಜ ಸೌಂದರ್ಯದಿಂದ ಕಂಗೊಳಿಸುವ ಹಳ್ಳಿಯೆಡೆಗೆ ತುಡಿಯುವ ಯುವಕನೊಬ್ಬನ ಕತೆಯನ್ನು ಒಳಗೊಂಡಿದೆ. ನಗರದಲ್ಲಿ ಉದ್ಯೋಗ, ಅಧಿಕಾರಗಳನ್ನು ಗಳಿಸುವ ಅರ್ಹತೆ , ಅವಕಾಶಗಳಿದ್ದರೂ ಅಜ್ಜನ ಆದರ್ಶ ಬದುಕಿನ ಹಾದಿಯೆಡೆಗೆ ಹೆಜ್ಜೆ ಇಡುವ ಮೂಲಕ ನೆಲಗೆಯ್ಮೆಯನ್ನು ಉಳಿಸಿ ಬೆಳೆಸಬಲ್ಲದು. ಎಂಬ ಶುಭ ನಿರೀಕ್ಷೆಗಳನ್ನು ಹುಟ್ಟುಹಾಕುತ್ತದೆ.

ಕಯ್ಯಾರ ಕಿಞ್ಞಣ್ಣರೈಯವರ 'ನಾವು ಗೆಲುವೆವು' ಕವನ ಮನುಷ್ಯ ಸಾಧನೆಗಳನ್ನು ಕವನ ರೂಪದಲ್ಲಿ ಕಂಡರಿಸುತ್ತದೆ. ಛಲ, ಎದೆಗಾರಿಕೆ ಎಂತಹ ದುರ್ಭೇದ್ಯ ಸನ್ನಿವೇಶಗಳನ್ನು ಭೇದ್ಯವಾಗಿಸುತ್ತದೆ. ಪ್ರಕೃತಿಯೊಂದಿಗಿನ ಒಡನಾಟ, ಸೆಣಸಾಟ ಎರಡೂ ಇಬ್ಬರನ್ನು ಒಂದಾಗಿಸುತ್ತದೆ ಎಂಬ ಆಶಯ ಇಲ್ಲಿದೆ.

ನಾಡು ಕಂಡ ಅಪ್ರತಿಮ ಕೃಷಿ ಸಾಧಕ ನಾರಾಯಣ ರೆಡ್ಡಿಯವರ ವ್ಯಕ್ತಿ ಚಿತ್ರವು ಸಾಧನೆಯ ಹಾದಿಯಲ್ಲಿ ದಾರಿ ದೀಪವಾಗುವ ಹಿರಿಯರ ಆದರ್ಶಗಳು ಸುಭದ್ರ ವ್ಯಕ್ತಿತ್ವಗಳ ರೂಪೀಕರಣಕ್ಕೆ ಹೇಗೆ ಅನುವು ಮಾಡಿಕೊಡುತ್ತದೆ ಎಂಬುದನ್ನು ತಿಳಿಸುತ್ತದೆ. ಕೃಷಿ ಕಾಯಕವು ಬದುಕನ್ನು ನಾವು ಕಂಡರಿಯುವ ದೃಷ್ಟಿಕೋನವನ್ನೇ ಬದಲಾಯಿಸುತ್ತದೆ.

ಬದುಕಿಗೊಂದು ಶಿಸ್ತು, ತಾಳ್ಮೆ, ಅಚ್ಚುಕಟ್ಟುತನ, ಕಾರ್ಯತತ್ಪರತೆ ಇವೆಲ್ಲವೂ ಕೃಷಿ ಬದುಕಿನಲ್ಲಿ ಹಾಸುಹೊಕ್ಕಾಗಿ ಮಿಳಿತಗೊಂಡಿರುತ್ತವೆ. ದಿನ ಬೆಳಗುವ ಸೂರ್ಯ ಅಸ್ತಮಿಸುವುದರೊಂದಿಗೆ ಆ ದಿನದ ಬದುಕು ಸಾರ್ಥಕ್ಯಪಡೆಯುವುದು. ಈ ಮೇಲಿನ ವಿಚಾರಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ.

ಆಧುನಿಕ ಜಗತ್ತಿನ ಏರುಪೇರಿನ ಈ ಜೀವನ ಕ್ರಮ, ಪ್ರಕೃತಿ ವಿರುದ್ಧವಾಗಿ ಚಲಿಸುವ ಈ ಕಾಲಘಟ್ಟದಲ್ಲಿ ಆರೋಗ್ಯಪೂರ್ಣವಾದ ಜೀವನ ಕ್ರಮ ಕಾಣಸಿಗಬೇಕಾದರೆ ಕೃಷಿಕನ ಕಡೆ ನಾವು ಮುಖ ಮಾಡಬೇಕಾಗಿದೆ.

# ಸಿಲೆಬಸ್ ಗ್ರಿಡ್

| | | |
|---|---|---|
| ವಿಷಯ | : | **ಮುಂದುವರಿದ ಪಠ್ಯ** |
| ತರಗತಿ | : | **9** |
| ಸಮಯ | : | **25 ಪಿರೀಡುಗಳು** |
| ಘಟಕದ ಹೆಸರು | : | **ಉಳುಮೆಯೆ ಉಸಿರು** |
| ಆಶಯ | : | **ಕೃಷಿ** |

## ಉಪ ಆಶಯಗಳು :

- ಕೃಷಿ ಮತ್ತು ಸಂಸ್ಕೃತಿ
- ಕೃಷಿ ವಲಯದ ಪಲ್ಲಟಗಳು (ಸಾಂಪ್ರದಾಯಿಕ ಕೃಷಿ , ವಾಣಿಜ್ಯ ಬೆಳೆಗಳು,  ಯಾಂತ್ರೀಕರಣ)
- ಆಹಾರ ಭದ್ರತೆ

## ಸಾಹಿತ್ಯ ಪ್ರಕಾರಗಳು

- ಕಿರು ಕಾದಂಬರಿ (ಕೂಡು ಮನೆ)
- ಕವನ (ನಾವು ಗೆಲುವೆವು)
- ವ್ಯಕ್ತಿ ಚಿತ್ರ ( ಹಸಿರೊಡಲ ಬೆಳಕು)

## ಕಲಿಕಾ ಉದ್ದೇಶಗಳು:

- ಕೃಷಿ ಹಾಗೂ ಕೃಷಿ ವಲಯದ ಸಮಸ್ಯೆಗಳು, ಪರಿಹಾರಗಳ ಮೂಲಕ ತಿಳುವಳಿಕೆ ಪಡೆದುಕೊಳ್ಳುವುದು.
- ವ್ಯಕ್ತಿಚಿತ್ರ, ಕವನ, ಕಿರುಕಾದಂಬರಿಗಳ ಮೂಲಕ ಮಾಹಿತಿಗಳನ್ನು ತಿಳಿದುಕೊಂಡು ಪ್ರಬಂಧ, ವ್ಯಕ್ತಿಚಿತ್ರ, ಓದುಗರ ಓಲೆ, ಕರಪತ್ರ, ಪತ್ರಿಕಾ ವರದಿಗಳ ಮೂಲಕ ತಮ್ಮ ಅನಿಸಿಕೆ, ಪ್ರತಿಕ್ರಿಯೆ, ವಿಶ್ಲೇಷಣೆಗಳನ್ನು ಅಭಿವ್ಯಕ್ತ ಪಡಿಸುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಕೂಡು ಮನೆ<br><br>2. ನಾವು ಗೆಲುವೆವು<br><br>3. ಹಸಿರೊಡಲ ಬೆಳಕು | ● ಕೃಷಿ ಒಂದು ಉದ್ಯೋಗ ಮಾತ್ರವಲ್ಲ, ಅದು ಜನರ ಜೀವನದ ಸಾಂಸ್ಕೃತಿಕ ಭಾಗವಾಗಿದೆ.<br>● ಕೃಷಿ ವಲಯದಲ್ಲಿ ಅನೇಕ ಪಲ್ಲಟಗಳಿವೆ (ಯಾಂತ್ರೀಕರಣ, ವಾಣಿಜ್ಯೀಕರಣ ಇತ್ಯಾದಿ)<br>● ದೇಶದ ಆಹಾರ ಭದ್ರತೆಗೆ ಕೃಷಿ ವಲಯವನ್ನು ಪ್ರೋತ್ಸಾಹಿಸ ಬೇಕಾಗಿದೆ.<br>● ಕೃಷಿಯು ಒಂದು ಉತ್ತಮ ಉದ್ಯೋಗ ಮಾದರಿ.<br>● ಕೃಷಿಕರಿಗೆ ಸಂಬಂಧಿಸಿದ ಅನೇಕ ಕತೆ, ಕವನ, ಲೇಖನಗಳಿವೆ. | ● ಕತೆ ಕಾದಂಬರಿಗಳನ್ನು ಓದಿ ಅವುಗಳ ಕುರಿತಾದ ಅನಿಸಿಕೆ, ಕರಪತ್ರ, ವಿಶ್ಲೇಷಣೆ , ಚಿತ್ರಕತೆ, ಲೇಖನ, ಭಾಷಣ , ಪತ್ರಿಕಾ ವರದಿ, ಓದುಗರ ಓಲೆ, ವ್ಯಕ್ತಿಚಿತ್ರಗಳ ಮೂಲಕ ಮಂಡಿಸುವ ಸಾಮರ್ಥ್ಯ ಪಡೆಯುವುದು. | ● ಕೃಷಿಯ ಕುರಿತಾದ ಕೀಳರಿಮೆಯನ್ನು ದೂರ ಮಾಡುವುದು.<br>● ಕೃಷಿ ಕೆಲಸದಲ್ಲಿ ಆಸಕ್ತಿ ತಾಳುವುದು.<br>● ಕೃಷಿ ಹಾಗೂ ಕೃಷಿಕರ ಕುರಿತು ತಿಳಿದುಕೊಳ್ಳುವ ಮನೋಭಾವಗಳನ್ನು ಬೆಳೆಸುವುದು. | ● ಸವರ್ಣ ದೀರ್ಘ ಸಂಧಿ, ಪ್ರಾಸ ಪದ, ದ್ವಿರುಕ್ತಿ ಪದ, ದ್ವಂದ್ವ ಸಮಾಸ | ● ಆಶಯ<br>● ಸ್ವಾರಸ್ಯ<br>● ಪ್ರಬಂಧ<br>● ಚಿತ್ರಕತೆ<br>● ಕರಪತ್ರ<br>● ಓದುಗರ ಓಲೆ<br>● ವ್ಯಕ್ತಿ ಚಿತ್ರ<br>● ಪತ್ರಿಕಾ ವರದಿ | ● ICT ಬಳಕೆ<br>● ಆಕರ ಗ್ರಂಥ<br>● ಪತ್ರಿಕ ವರದಿಗಳ ಮಾದರಿ<br>● ಓದುಗರ ಓಲೆಗಳ ಮಾದರಿ | ● ಸ್ವಯಂ, ಪರಸ್ಪರ, ಕರಪತ್ರ ಓದುಗರ ಓಲೆ, ಪ್ರಬಂಧ |

## ಪ್ರವೇಶ ಚಟುವಟಿಕೆ

ಪ್ರವೇಶ ಚಟುವಟಿಕೆಯಾಗಿ ನೀಡಿರುವ ತ್ರಿಪದಿಯನ್ನು ವಿದ್ಯಾರ್ಥಿಗಳಲ್ಲಿ ಓದಲು ಹೇಳುವುದು. ಬಳಿಕ ಆಯ್ದ ಕೆಲವು ವಿದ್ಯಾರ್ಥಿಗಳಲ್ಲಿ ಆಶಯವನ್ನು ಬಾಯ್ದೆರೆಯಾಗಿ ಹೇಳಿಸುವುದು. ಅದನ್ನು ನೋಟ್ ಬುಕ್‌ನಲ್ಲಿ ಬರೆಯಲು ಹೇಳುವುದು.

### ಆಶಯ ಹೀಗೂ ಇರಬಹುದಲ್ಲವೇ?

ಭಾರತೀಯ ಸಂಪ್ರದಾಯದಂತೆ ಕೆಲಸದ ಆರಂಭದಲ್ಲಿ ಪ್ರಾರ್ಥನೆ ಮಾಡುವ ರೀತಿ ಈ ತ್ರಿಪದಿಯಲ್ಲಿ ಕಂಡುಬರುತ್ತದೆ.ಹೊಸತಾಗಿ ಕೃಷಿಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಕೃಷಿಕ ಭೂಮಿ ತಾಯಿಯಲ್ಲಿ ತಾನು ಈ ಕ್ಷೇತ್ರಕ್ಕೆ ಹೊಸಬ. ತನ್ನನ್ನು ಅನುಗ್ರಹಿಸಬೇಕೆಂದು ಬೇಡಿಕೊಳ್ಳುತ್ತಾನೆ.

ಕೃಷಿ ಕೆಲಸಕ್ಕೆ ನೆಲ ಉಳಲು ಹೊಂದಿಸಿಕೊಂಡಿರುವುದು ಹೊಸ ಎತ್ತುಗಳನ್ನು ಉಳುವವನು ಹೊಸ ವ್ಯಕ್ತಿ ಎನ್ನುವ ಮೂಲಕ ನಾನು ಕೃಷಿ ಕ್ಷೇತ್ರಕ್ಕೆ ಹೊಸಬನಾಗಿರುವೆನು. ನನ್ನ ಅಜ್ಞಾನವನ್ನು ಅರಿತು, ನಿನ್ನ ಮಗನಂತೆ ನನ್ನನ್ನು ಹರಸಬೇಕೆಂದು ಭೂಮಿ ತಾಯಿಯಲ್ಲಿ ಕೇಳಿಕೊಳ್ಳುತ್ತಾನೆ.

## ಕೂಡು ಮನೆ

- **ಪ್ರಶ್ನೆಗಳಿಗೆ ಉತ್ತರ ಬರೆಯುವುದು**

ಮಕ್ಕಳಿಗೆ ಪಠ್ಯ ವಿಷಯದ ಆಶಯ ಮನವರಿಕೆಯಾಗಿದೆಯೇ ಎಂದು ತಿಳಿದುಕೊಳ್ಳುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ಮಕ್ಕಳಲ್ಲಿ ಬಾಯ್ದೆರೆಯಾಗಿ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಲಿ. ಬಳಿಕ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಯೋಗ್ಯವಾದ ಸಲಹೆ ಸೂಚನೆಗಳನ್ನು ನೀಡುವುದು.

- **ಪಾತ್ರ ಚಿತ್ರಣ ಮಾಡುವುದು**

ಪಾತ್ರ ಚಿತ್ರಣ ಬರೆಯುವ ಹಂತಗಳನ್ನು ಹಿಂದಿನ ಪಾಠಗಳಲ್ಲಿ ತಿಳಿದಿರುವಿರಲಿಲ್ಲವೇ?ಅದೇ ರೀತಿಯಲ್ಲಿ ಮಾಡುವುದು.

- **ಪಾತ್ರ ಚಿತ್ರಣ ಹೀಗೂ ಇರಬಹುದು**
- **ಶ್ರೀಧರ**

ರಾಧಾಕೃಷ್ಣ ಕಲ್ಚಾರರು ಬರೆದ ‘ಕೂಡುಮನೆ’ ಎಂಬ ಕಿರು ಕಾದಂಬರಿಯಲ್ಲಿ ಬರುವ ಪ್ರಧಾನ ಪಾತ್ರವೇ ಶ್ರೀಧರ. ಮಾದರಿ ವಿದ್ಯಾರ್ಥಿಯಾದ ಆತ ಅಧ್ಯಾಪಕರಿಗೆ ಅಚ್ಚುಮೆಚ್ಚಿನವನಾಗಿದ್ದನು. ಸ್ವಭಾವತಃ ಅಂತರ್ಮುಖಿಯಾದ ಶ್ರೀಧರ

ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ಅಗ್ರಿಕಲ್ಚರ್ ನಲ್ಲಿ ಬಿಎಸ್. ಸಿ ಪದವಿ ಪಡೆದು ಊರಿಗೆ ಹಿಂತಿರುಗುತ್ತಿರುವಾಗ ತಾನು ಕಳೆದ ದಿನಗಳನ್ನು ಮೆಲುಕು ಹಾಕುತ್ತಾನೆ. ನಗರ ಜೀವನದ ಮಾಯೆಯಲ್ಲಿ ಮೂರು ವರ್ಷಗಳನ್ನು ಕಳೆದಿದ್ದರೂ ಸಾಮಾನ್ಯವಾಗಿ ಉಳಿದ ಯುವಕರಂತೆ ನಗರ ಜೀವನದ ತಳಕು ಬಳುಕಿಗೆ ಮನಸೋಲದವನು ಶ್ರೀಧರ. ಆಧುನಿಕ ಯುವಕರ ಮನೋ ಧರ್ಮಕ್ಕಿಂತ ಭಿನ್ನವಾಗಿರುವುದು ಅವನ ಚಿಂತನೆ.

'ನಗರದ ವಲಯ ದಾಟುತ್ತಿದ್ದಂತೆ ನಿದ್ರೆ ಮಾಡಬೇಕು ಇಲ್ಲವಾದರೆ ನಾಳೆ ಮನೆ ಮಂದಿಯೊಂದಿಗೆ ಪಟ್ಟಾಂಗ ಹೊಡೆಯಲಾಗುವುದಿಲ್ಲ' ಎಂಬ ಅವನ ಆಲೋಚನೆಯು ಅವನಿಗೆ ಮನೆ ಹಾಗೂ ಮನೆ ಮಂದಿಯವರೊಂದಿಗಿನ ಪ್ರೀತಿ, ಬಾಂಧವ್ಯವನ್ನು ವ್ಯಕ್ತಪಡಿಸುತ್ತದೆ. ಅಜ್ಜ ಮಾಡಿದ ಆಸ್ತಿಯ ಬಗ್ಗೆ ಆಲೋಚಿಸುವಾಗ ಅದನ್ನು ಉಳಿಸಿಕೊಂಡು ಅವರ ಹಂಬಲವನ್ನು ಈಡೇರಿಸಬೇಕು ಎಂದು ನಿರ್ಧರಿಸುತ್ತಾನೆ. ಅವರು ತನ್ನಲ್ಲಿ ಜೀವನ ಪ್ರೇಮವನ್ನು ತುಂಬಿದವರು. ಎಳವೆಯಿಂದಲೇ ಅವನ ಮೇಲೆ ಅಜ್ಜನ ವ್ಯಕ್ತಿತ್ವ ದಟ್ಟವಾದ ಪ್ರಭಾವವನ್ನು ಬೀರಿತ್ತು. ಪ್ರಕೃತಿಯ ಬಗ್ಗೆ, ಶ್ರಮದ ಬಗ್ಗೆ ಅವರು ಅನೇಕ ಜೀವನ ಪಾಠಗಳನ್ನು ಹೇಳಿಕೊಡುತ್ತಿದ್ದರು. ಅಜ್ಜನ ಮೇಲೆ ಶ್ರೀಧರನಿಗಿದ್ದ ಪೂಜ್ಯ ಭಾವವೇ ಅವನನ್ನು ಕೃಷಿಯತ್ತ ಒಲಿಯುವಂತೆ ಮಾಡಿತು. ಒಬ್ಬ ಸಾಮಾನ್ಯ ಸರಕಾರಿ ನೌಕರನಾಗಿ ಅದೇ ತನ್ನ ವಿದ್ಯಾಭ್ಯಾಸದ ಸಾರ್ಥಕತೆ ಎಂದು ತಿಳಿಯಬಹುದಾಗಿದ್ದ ತಾನು ಒಬ್ಬ ಕೃಷಿಕನಾಗಿ ಮಣ್ಣಿನಲ್ಲಿ ಹೊಸ ಚಿಗುರು ಮೂಡಿಸಬೇಕೆಂಬ ಹಂಬಲ ಹುಟ್ಟಿಕೊಳ್ಳುವುದಕ್ಕೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ, ಅಜ್ಜನೇ ಕಾರಣ ಎಂದು ಅವನು ತಿಳಿದಿದ್ದನು. ಕೃಷಿ ಇಲಾಖೆಯಲ್ಲಿ ಆಫೀಸರ್ ಹುದ್ದೆ ದೊರೆಯುವ ಅವಕಾಶವಿದ್ದರೂ ಅದನ್ನು ಕಡೆಗಣಿಸಿ, ಕೂಡು ಮನೆಯ ಭೂಮಿ ಸಮೃದ್ಧವಾಗಬೇಕು, ಅಂಗುಲ ಅಂಗುಲ ನೆಲವೂ ಹಸುರಿನಿಂದ ನಳನಳಿಸಬೇಕು. ಅದಕ್ಕಾಗಿ ತಾನು ಕಲಿತ ವಿದ್ಯೆಯನ್ನು ಧಾರೆಯೆರೆಯಬೇಕು ಎಂಬುದೇ ಶ್ರೀಧರನ ಇಚ್ಛೆ. ಇದು ಅವನಿಗೆ ಭೂಮಿ ಹಾಗೂ ಮನೆಯ ಮೇಲಿರುವ ಕಾಳಜಿಯನ್ನು ತಿಳಿಸುತ್ತದೆ.

ವೈಜ್ಞಾನಿಕ ಆಧಾರದಲ್ಲಿ ಜೈವಿಕ ಕೃಷಿಯೇ ಉತ್ತಮ ಎಂಬುದು ಅವನ ತೀರ್ಮಾನವಾಗಿರುತ್ತದೆ. ಆದ್ದರಿಂದ ಸಹಜ ಕೃಷಿಯತ್ತ ಒಲವು ಮೂಡಿಸುತ್ತಾನೆ. ಇಡೀ ಕತೆಯಲ್ಲಿ ಶ್ರೀಧರನು ತನ್ನ ಕನಸಿನ ಲೋಕವನ್ನು ನನಸಾಗಿಸುವ ಒಬ್ಬ ಉತ್ತಮ ಸಾಂಪ್ರದಾಯಿಕ ಕೃಷಿಕನಾಗುವ 'ಕೂಡು ಮನೆ'ಯ ಆದರ್ಶ ಕುಡಿಯಾಗಿ ಕಂಡು ಬರುತ್ತಾನೆ ಎಂಬುದರಲ್ಲಿ ಎರಡು ಮಾತಿಲ್ಲ.

- **ಕರಪತ್ರ ಬರೆಯುವುದು**

ವೈಯಕ್ತಿಕ ಹಾಗೂ ವ್ಯಾವಹಾರಿಕ ಪತ್ರಗಳನ್ನು ಬರೆಯುವ ವಿಧಾನಗಳನ್ನು ವಿದ್ಯಾರ್ಥಿಗಳು ಈಗಾಗಲೇ ಹಿಂದಿನ ತರಗತಿಯಲ್ಲಿ ಚರ್ಚಿಸಿರುವರು. ಒಂದೆರೆಡು ಕರಪತ್ರಗಳ ಮಾದರಿಗಳನ್ನು ಎಲ್ ಸಿ ಡಿ ಪ್ರೊಜೆಕ್ಟರ್‌ನ ಮೂಲಕ ತೋರಿಸುವುದು. ಇದರ ಕುರಿತಾಗಿ ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಕಂಡುಕೊಂಡ ಅಂಶಗಳನ್ನು ವೈಯಕ್ತಿಕವಾಗಿ ಬರೆಯಲು ಸೂಚಿಸುವುದು.ಕರಪತ್ರದ ಸ್ವರೂಪಗಳನ್ನುತಿಳಿದುಕೊಳ್ಳುವುದು. ಗುಂಪಿನಲ್ಲಿ ಬರೆದ ಕರಪತ್ರವನ್ನು ಓದಿದ ಬಳಿಕ ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡಿ ಸರಿಪಡಿಸಿ ಬರೆಯುವುದು.

## ಕರಪತ್ರ ಹೀಗೂ ಇರಬಹುದು

### ಸಾವಯವ ಕೃಷಿ; ಭೂಮಿತಾಯಿಗೆ ಖುಷಿ

ಪ್ರಿಯರೇ,

ಭಾರತವು ಕೃಷಿ ಪ್ರಧಾನವಾದ ದೇಶ ಎಂಬುದು ನಮಗೆಲ್ಲರಿಗೂ ತಿಳಿದಿದೆ. ಕಡಿಮೆ ಖರ್ಚು ಹೆಚ್ಚು ಗಳಿಕೆ ಎಂಬ ತತ್ವವನ್ನು ಯಥಾವತ್ತಾಗಿ ಕೃಷಿ ಕ್ಷೇತ್ರದಲ್ಲಿ ಅಳವಡಿಸುವ ಅನಿವಾರ್ಯತೆ ಇಂದು ಉಂಟಾಗಿದೆ. ಸಸ್ಯಗಳಿಗೆ ಅಗತ್ಯವಾದ ರಾಸಾಯನಿಕಗಳನ್ನು ಉತ್ಪಾದಿಸಿ ನೇರವಾಗಿ ನೀಡುವುದರಿಂದ ಹೆಚ್ಚು ಬೆಳೆ ಪಡೆಯಬಹುದು ಎಂಬುದನ್ನು ಯಾವಾಗ ಸಂಶೋಧಿಸಲಾಯಿತೋ ಅಂದಿನಿಂದ ರಾಸಾಯನಿಕ ಗೊಬ್ಬರಗಳನ್ನು ಯಥೇಚ್ಛವಾಗಿ ಬಳಸಲು ಆರಂಭಿಸಲಾಯಿತು. ಬೆಳೆ ಹೆಚ್ಚಾದಂತೆ ಕೀಟ ಬಾಧೆಯು ಹೆಚ್ಚಾಗ ತೊಡಗಿತು ಇದನ್ನು ತಡೆಯಲು ಕೀಟನಾಶಕಗಳ ಬಳಕೆ ಮಾಡಿದರೆ ಮಾತ್ರ ಬೆಳೆ ಕೈಗೆ ಸಿಗಬಹುದೆಂಬ ಭ್ರಾಂತಿಯಿಂದಾಗಿ ಪರಿಸರದಲ್ಲಿ ಏರುಪೇರಾಗ ತೊಡಗಿತು. ಮಣ್ಣಿನ ಫಲವತ್ತತೆ ಕುಂಠಿತವಾಯಿತು. ರೈತ ಸ್ನೇಹಿ ಜೀವಿಗಳ ಸಂತತಿ ಅಳಿಯಲಾರಂಭಿಸಿತು. ನಮ್ಮ ಆರೋಗ್ಯವೂ ಹದಗೆಡಲು ಶುರುವಾಯಿತು.

ಇನ್ನು ನಾವು ಎಚ್ಚೆತ್ತುಕೊಳ್ಳದೆ ಗತ್ಯಂತರವಿಲ್ಲ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸದೆ ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಸಂಪತ್ತುಗಳನ್ನು ಬಳಸಿ ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಂಡು ಬೆಳೆಗಳನ್ನು ಉತ್ಪಾದಿಸುವ ಕೃಷಿ ವಿಧಾನವೇ ಸಾವಯವ ಕೃಷಿ. ಇದರ ಮುಖ್ಯ ಉದ್ದೇಶವೆಂದರೆ ಪರಿಸರ ಸಂರಕ್ಷಣೆ, ಭೂಮಿಯ ಫಲವತ್ತತೆಯನ್ನು ಉಳಿಸುವುದು ಹಾಗೂ ಬೆಳೆಗಳನ್ನು ವಿಷಮುಕ್ತಗೊಳಿಸುವುದು.

ಸಾವಯವ ಕೃಷಿಯಿಂದ ಹಲವಾರು ಪ್ರಯೋಜನಗಳಿವೆ. ಗೊಬ್ಬರವನ್ನು ತಯಾರಿಸಲು ಪ್ರಾಣಿಗಳ ಸಗಣಿ ಮತ್ತು ತ್ಯಾಜ್ಯಗಳನ್ನು ಬಳಸುವುದರಿಂದ ಮಾಲಿನ್ಯವು ಕಡಿಮೆಯಾಗುತ್ತದೆ. ಇದರಿಂದ ಸೊಳ್ಳೆಗಳ ಉತ್ಪತ್ತಿಯೂ ಕಡಿಮೆಯಾಗಿ ರೋಗಗಳು ಕಡಿಮೆಯಾಗುತ್ತವೆ. ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ಗಮನಿಸಿದರೆ ಸಾವಯವ ಕೃಷಿಯಿಂದ ತಯಾರಿಸಿದ ವಸ್ತುಗಳಿಗೆ ಹೆಚ್ಚು ಬೇಡಿಕೆ ಇದೆ. ಸರಿಯಾದ ಕ್ರಮದಲ್ಲಿ ಸಾವಯವ ಕೃಷಿ ಮಾಡಿದರೆ ಉತ್ಪಾದನೆಯೂ ಹೆಚ್ಚುತ್ತದೆ. ಇದರಿಂದ ಆರ್ಥಿಕವಾಗಿಯೂ ಪ್ರಯೋಜನವನ್ನು ಪಡೆಯಬಹುದು.

ಭೂಮಿ ನಮ್ಮ ಮುಂದಿನ ಪೀಳಿಗೆಗೂ ಬೇಕು. ಆದ್ದರಿಂದ ವಿಷಮುಕ್ತ ಭೂಮಿಗಾಗಿ ಸಾವಯವ ಕೃಷಿಯನ್ನು ಮಾಡಬೇಕು. ಭೂಮಿಯನ್ನು ಸಂರಕ್ಷಿಸೋಣ, ವಿಷಮುಕ್ತ ಆಹಾರವನ್ನು ಸೇವಿಸಿ ಆರೋಗ್ಯವಂತರಾಗಿ ಬೆಳೆಯೋಣ.

**ಪರಿಸರ ಸ್ನೇಹಿ ಕೃಷಿ; ಸಾವಯವ ಕೃಷಿ.**

**ಇತಿ,**

**ಸಾವಯವ ಕೃಷಿ ಸಂಘ,**

**ಕಾಸರಗೋಡು.**

ಸ್ಥಳ: ಕಾಸರಗೋಡು.

ದಿನಾಂಕ: 16/3/2024

- **ವಿಶ್ಲೇಷಣ ಟಿಪ್ಪಣಿ ಬರೆಯುವುದು**
- ಕೃಷಿಯ ಕುರಿತಾಗಿ ತಂದೆ ಹಾಗೂ ಮಗನ ಮನೋಧರ್ಮದಲ್ಲಿ ಇರುವ ವ್ಯತ್ಯಾಸದ ಕುರಿತು ತರಗತಿಯಲ್ಲಿ ಚರ್ಚೆ ನಡೆಸುವುದು.
- ವಿದ್ಯಾರ್ಥಿಗಳಲ್ಲಿ ಕೆಲವೊಂದು ಪ್ರಶ್ನೆಗಳನ್ನು ಕೇಳುವುದು.
- ಪ್ರಶ್ನೆಗಳಿಗೆ ಮಕ್ಕಳು ಹೇಳಿದ ಉತ್ತರವನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.
- ವಿದ್ಯಾರ್ಥಿಗಳು ಹೇಳದೆ ಬಿಟ್ಟು ಹೋದ ವಿಷಯಗಳನ್ನು ಅಧ್ಯಾಪಕರು ಸೇರಿಸುವುದು.
- ವಿಶ್ಲೇಷಣಾ ಟಿಪ್ಪಣಿ ಬರೆಯುವ ವಿಧಾನವನ್ನು ಮಕ್ಕಳು ಈಗಾಗಲೇ ಹಿಂದಿನ ತರಗತಿಯಲ್ಲಿ ತಿಳಿದಿರುವರು.

## ವಿಶ್ಲೇಷಣ ಟಿಪ್ಪಣಿ ಹೀಗೂ ಇರಬಹುದು

ಕಾಲ ಸರಿದಂತೆ, ನಾಗರೀಕತೆ ಬೆಳೆದಂತೆ ಮಾನವನ ಮನೋ ಧರ್ಮದಲ್ಲಿಯೂ ಬದಲಾವಣೆ ಆಗುವುದು ಸರ್ವೇ ಸಾಮಾನ್ಯ.ಇಂತಹ ಬದಲಾವಣೆಗೊಳಗಾದ ಮನೋಭಾವವನ್ನು 'ಕೂಡುಮನೆ' ಕಿರು ಕಾದಂಬರಿಯಲ್ಲಿ ಕಾಣುತ್ತೇವೆ. ಕಾದಂಬರಿಯಲ್ಲಿ ಬರುವ ಅಪ್ಪನಿಗೆ ತನ್ನ ಮಗ ಉತ್ತಮ ಅಂಕವನ್ನು ಪಡೆದಿರುವಾಗ ಕೃಷಿಯಲ್ಲಿ ಮುಂದುವರಿಯುವ ಬದಲು ಡಾಕ್ಟರೋ ಲೆಕ್ಚರರೋ  ಆಗಬೇಕೆಂಬ ಆಸೆ. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂಬ ಮಾತಿನಂತೆ ಕೃಷಿಯನ್ನು ಸ್ವೀಕರಿಸಿದರೆ ಎಂದೂ ಬರಗಾಲ, ತೊಂದರೆ ಬರುವುದಿಲ್ಲ.  'ಮಾತ್ರವಲ್ಲ ಸ್ವಾವಲಂಬಿಯಾಗಿ ಬದುಕುವನಿಗೆ ಕೃಷಿಯು ಹೇಳಿ ಮಾಡಿಸಿದ ಉದ್ಯೋಗ' ಎಂಬುದು ಹಿರಿಯರಾದ ಅಜ್ಜನ ದೃಢ ನಂಬಿಕೆ.

ಕೃಷಿ ಕಾಯಕದಲ್ಲಿ ಅನ್ಯರ ಅಡಿಯಾಳಾಗಿ ಬದುಕಬೇಕೆಂದಿಲ್ಲ. ತನಗೆ ಇಷ್ಟ ಬಂದಂತೆ ಕೃಷಿ ಕೆಲಸವನ್ನು ಮಾಡಬಹುದು. ಆದರೆ ಇತರ ಯಾವುದೇ ಉದ್ಯೋಗವಾದರೂ ಇನ್ನೊಬ್ಬರ ಅಡಿಯಾಳಾಗಿ ಅವರು ಹೇಳಿದಂತೆ, ಕೆಲವೊಂದು ಕಟ್ಟು ಪಾಡುಗಳಿಗೆ ವಿಧೇಯನಾಗಿ ರಬೇಕಾಗಿರುತ್ತದೆ. ಸ್ವ ಇಚ್ಛೆಯಂತೆ ದುಡಿಯಲು ಸಾಧ್ಯವಿಲ್ಲ. ಉದ್ಯೋಗ ಸ್ವಾತಂತ್ರ್ಯ ಕಡಿಮೆ ಎಂಬುದು  ಅಜ್ಜನ ಅಭಿಪ್ರಾಯ. ತಂದೆಯ ಪ್ರಕಾರ ಕೃಷಿಯಲ್ಲಿ ಹವಾಮಾನ ವೈಪರೀತ್ಯ, ಕೀಟ ಭಾದೆ, ಕಾರ್ಮಿಕರ ಕೊರತೆ ಕೃಷಿಯಿಂದ ಸಿಗುವ ಗಳಿಕೆ ಬಹಳಷ್ಟು ಕಡಿಮೆಯಾಗುತ್ತದೆ. ಈ ಎಲ್ಲಾ ತೊಂದರೆಗಳನ್ನು ಕೃಷಿಕನಾದವನು ಎದುರಿಸಬೇಕಾಗುತ್ತದೆ.

ಇಲ್ಲಿ ನಾವು ಕೃಷಿಯ ಬಗ್ಗೆ ಎರಡು ತಲೆಮಾರುಗಳೊಳಗಿನ ದೃಷ್ಟಿಕೋನದಲ್ಲಿರುವ ವ್ಯತ್ಯಾಸವನ್ನು ಕಾಣುತ್ತೇವೆ. ಅಪ್ಪನಿಗೆ ಕೃಷಿಯಲ್ಲಿ ಲಾಭವಿಲ್ಲ, ಕೃಷಿಕನಾದವನು ಎಷ್ಟು ಕಷ್ಟ ಪಟ್ಟರೂ ಅದರಿಂದ ಅಷ್ಟೇ ಲಾಭ ದೊರೆಯುವುದಿಲ್ಲ ಮಾತ್ರವಲ್ಲ ಕೃಷಿಯು ಬಹಳ ಶ್ರಮದಾಯಕವಾದ ವೃತ್ತಿ ಎಂಬ ಅಭಿಪ್ರಾಯ. ಆದರೆ ಅಜ್ಜನಿಗೆ ಕೃಷಿಯ ಬಗ್ಗೆ ಗೌರವ, ಹೆಮ್ಮೆ ಇದೆ. ಶ್ರಮಪಟ್ಟು ದುಡಿದರೆ ಅದಕ್ಕೆ ತಕ್ಕ ಪ್ರತಿಫಲವನ್ನು ಪಡೆಯಬಹುದು ಎಂಬುದು ಅವರ ಬಲವಾದ ಅಭಿಪ್ರಾಯ.

- **ಚಿತ್ರಕಥೆ ಬರೆಯುವುದು**

ಚಿತ್ರಕಥೆ ಬರೆಯುವ ಮೊದಲು ಚಿತ್ರಕಥೆಯಲ್ಲಿ ಇರಬೇಕಾದ ಅಂಶಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು. ಚರ್ಚೆಯಲ್ಲಿ ಮೂಡಿ ಬಂದ ಅಭಿಪ್ರಾಯಗಳ ಆಧಾರದಲ್ಲಿ ಮಕ್ಕಳು ಗುಂಪಿನಲ್ಲಿ ಕುಳಿತು ಪಾಠ ಭಾಗದಲ್ಲಿ ತಮಗೆ ಇಷ್ಟವಾದ ಸನ್ನಿವೇಶದ ಕುರಿತು ಚಿತ್ರಕಥೆ ಬರೆಯಲಿ. ಗುಂಪಿನಿಂದ ಒಬ್ಬರು ಮಂಡಿಸಲಿ. ಮಂಡಿಸುವಾಗ ಆಯಾ ಚಿತ್ರಕಥೆಯ ಹಿರಿಮೆ ಮತ್ತು ಕೊರತೆಗಳನ್ನು ಗುರುತಿಸಿ ಬರೆದುಕೊಳ್ಳಲು ಉಳಿದವರಲ್ಲಿ ಹೇಳುವುದು. ಎಲ್ಲಾ ಗುಂಪಿನವರು ಚಿತ್ರಕಥೆ ಮಂಡಿಸಿದ ಬಳಿಕ ಪ್ರತಿ ಗುಂಪಿನ ಚಿತ್ರಕಥೆಯಲ್ಲಿ ಕಂಡುಬಂದ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಸೂಚಿಸಿ ಅಧ್ಯಾಪಕರು ಸೂಕ್ತ ಸಲಹೆಗಳನ್ನು ನೀಡುವುದು ಬಳಿಕ ಮಾದರಿ ಚಿತ್ರಕಥೆಯನ್ನು ನೀಡುವುದು.

**ಚಿತ್ರಕಥೆಯಲ್ಲಿ ಇರಬೇಕಾದ ಪ್ರಧಾನ ವಿಚಾರಗಳು**

- ರಂಗಸಜ್ಜಿಕೆ
- ದೃಶ್ಯಗಳು
- ಬೆಳಕು
- ಪಾತ್ರಗಳು
- ಸನ್ನಿವೇಶ
- ಶೀರ್ಷಿಕೆ
- ಸಂಭಾಷಣೆ
- ವೇಷಭೂಷಣ

**ಚಿತ್ರಕಥೆಯ ಮಾದರಿ**

**ಶ್ರೀಧರ ಮನೆಗೆ ಮರಳುವ ಸಂದರ್ಭ**

ದಟ್ಟ ಹಸಿರಿನಿಂದ ಕೂಡಿದ ಹಳ್ಳಿ ಪರಿಸರ ಬೆಳಗ್ಗಿನ 10:00 ಸಮಯ. ರಸ್ತೆಯ ಬದಿ ಬಸ್ಸು ನಿಲ್ಲುವ ಜಾಗದಲ್ಲೇ ಒಂದು ಪುಟ್ಟ ಅಂಗಡಿ ಅಂಗಡಿಯ ಮುಂದೆ ಮರದ ಬೆಂಚು ಹಾಕಲಾಗಿದೆ ನಾಲ್ಕೈದು ಮಂದಿ ಪಂಚೆಯುಟ್ಟು ತಲೆಗೆ ಬೈರಾಸು ಸುತ್ತಿಕೊಂಡ ಹಳ್ಳಿಗರು ಹರಟೆ ಹೊಡೆಯುತ್ತಾ ಅಲ್ಲಿ ಕುಳಿತಿದ್ದಾರೆ.

ಬಿಸಿಲು ನಿಧಾನಕ್ಕೆ ತೀಕ್ಷ್ಣವಾಗುತ್ತಿದೆ ಬಸ್ಸೊಂದು ಬಂದು ಅಂಗಡಿಯ ಮುಂದೆ ನಿಲ್ಲುತ್ತದೆ ಬಸ್ಸಿನಿಂದ ಪ್ಯಾಂಟ್ ಶರ್ಟ್ ತೊಟ್ಟು ಶ್ರೀಧರನೆಂಬ 22ರ ಹರೆಯದ ಯುವಕ ತನ್ನ ಪೆಟ್ಟಿಗೆ ಸರಂಜಾಮುಗಳೊಂದಿಗೆ ಬಸ್ಸಿನಿಂದ ಇಳಿಯುತ್ತಾನೆ.

ಶ್ರೀಧರ ನೇರವಾಗಿ ಅಂಗಡಿಯತ್ತ ಬರುತ್ತಾನೆ ಅಂಗಡಿಯಾತ ಸರಿಸುಮಾರು 45-50ರ ಅಸುಪಾಸಿನ

ವಯಸ್ಸಿರುವ ಪದ್ಮನಾಭ ಶ್ರೀಧರನನ್ನು ನೋಡಿ

"ಓ ಶ್ರೀಧರಾ! ಬೆಂಗಳೂರಿನಿಂದ ಬರುವುದಾ?"

"ಹೌದು ಪದ್ಮಣ್ಣ ಈ ಸಾಮಾನುಗಳನ್ನೆಲ್ಲಾ ಇಲ್ಲಿ ಇಡುತ್ತೇನೆ. ಮತ್ತೆ ಬಂದು ಕೊಂಡೊಯ್ಯುತ್ತೇನೆ. ಈಗ ಆದಷ್ಟು ಬೇಗ ಮನೆ ಸೇರಬೇಕು" ಶ್ರೀಧರ ಅಂಗಡಿಯಿಂದ ಹೊರಡುತ್ತಾನೆ.

ಪದ್ಮನಾಭ "ಅದೆಂಥ ಗಡಿಬಿಡಿ ನಿಮ್ಮದು ಒಂದು ಗ್ಲಾಸು ಶರಬತ್ತು ಕುಡಿದು ಹೋಗಿ ಮಾರಾಯರೇ"

ಶ್ರೀಧರ "ಬೇಡ, ಬೇಡ ಮುಖ ತೊಳೆಯದೆ ಎಂಥ ಶರಬತ್ತು ಕುಡಿಯುವುದು"

ಕೈಯಲ್ಲಿ ಸೂಟ್ ಕೇಸು ಮಾತ್ರ ಹಿಡಿದು ಓಡುನಡಿಗೆಯಲ್ಲಿ ಶ್ರೀಧರ ಮನೆಯ ದಾರಿ ಹಿಡಿಯುತ್ತಾನೆ.

## ನಾವು ಗೆಲುವೆವು

- **ಪ್ರಶ್ನೆಗಳಿಗೆ ಉತ್ತರ ಬರೆಯುವುದು**

ಕವನವನ್ನು ಎಲ್ಲ ವಿದ್ಯಾರ್ಥಿಗಳಲ್ಲಿ ಮೌನವಾಗಿ ಓದಲು ಹೇಳುವುದು. ಆ ಬಳಿಕ ಆಶಯಗ್ರಹಣ ಪ್ರಶ್ನೆಗಳಿಗೆ ಉತ್ತರ ಬರೆಯುವ ಹಂತಗಳನ್ನು ಹಿಂದಿನ ಪಾಠಗಳಲ್ಲಿ ತಿಳಿದಿರುವ ಇರಲಿಲ್ಲವೇ? ಅದೇ ರೀತಿಯಲ್ಲಿ ಮಾಡುವುದು.

- **ಆಶಯ ಬರೆಯುವುದು**

ಈ ಹಿಂದಿನ ತರಗತಿಗಳಲ್ಲಿ ಮಾಡಿದ ರೀತಿಯಲ್ಲೇ ಚಟುವಟಿಕೆಯನ್ನು ಮುಂದುವರಿಸುವುದು.

### ಕವನದ ಆಶಯವನ್ನು ಹೀಗೂ ಬರೆಯಬಹುದಲ್ಲವೇ?

ಕಯ್ಯಾರ ಕಿಞ್ಞಣ್ಣ ರೈಯವರು ಬರೆದ 'ನಾವು ಗೆಲುವೆವು' ಕವನವು ಮನುಷ್ಯ ಸಾಧನ ಆತ್ಮವಿಶ್ವಾಸ ಹಾಗೂ ತಾಯ್ನಾಡ ಪ್ರೇಮದ ದ್ಯೋತಕವಾಗಿ ಚಿತ್ರಿತವಾಗಿದೆ.

ಮನುಷ್ಯನ ಸಾಧನೆಯ ಹಟದ ಮುಂದೆ ಸೋಲಿನ ಸ್ವರವನ್ನೇ ಎತ್ತಬಾರದು. ನಾವು ಬಾಳುವುದೇ ಗೆಲ್ಲಲು. ಅದೇ ನಮ್ಮ ಬಾಳ ಬೆಳಕು. ಏನೇ ಕಷ್ಟಗಳು ಎದುರಾದರೂ ಪ್ರಯತ್ನ ಕೈಬಿಡದೆ ಮುನ್ನಡೆಯುವ ಛಲ ನಮ್ಮದು. ನಮಗೆ ಧೈರ್ಯವೇ ಬಲ. ದೇಹದ ಬಲಕ್ಕಿಂತ ಮನಸ್ಸಿನ ಧೈರ್ಯವು ಒಬ್ಬಂಟಿಯನ್ನು ಗೆಲ್ಲಿಸುತ್ತದೆ. ಅಂತಹ ಎದೆಗಾರಿಕೆ ನಮ್ಮಲ್ಲಿದೆ ಮಾಡಬೇಕೆಂದಿದ್ದ ಕಾರ್ಯ ಕೈಗೂಡಿದಾಗ ಅಲ್ಲೇ ನಿಲ್ಲುವವರಲ್ಲ. ನಾವು ಅದಕ್ಕಿಂತಲೂ ಮಹತ್ತರವಾದ ಕಾರ್ಯಕ್ಕಾಗಿ ಯಶಸ್ಸಿನ ಹಾದಿಯಲ್ಲಿ ಮುನ್ನುಗ್ಗುವವರು. ಈ ಹಂತಗಳಲ್ಲಿ ಎಷ್ಟೇ ಕಹಿ ಅನುಭವಗಳಾದರೂ ಎದೆಗುಂದದೆ ಸಾಹಸ ಭರಿತ ಬದುಕ ಬಯಸುವವರು. ನೀರಸವಾದ ಬದುಕು ಬೇಡ ಎಂಬ ಮನೋಧರ್ಮ ನಮ್ಮದು.

ನಮ್ಮ ಹಿರಿಯರು ತಮಗೆ ಬೇಕಾದಂತೆ ಬದುಕು ರೂಪಿಸುವುದಕ್ಕಾಗಿ ಎಂತಹ ಸಾಹಸಗಳಿಗೂ ಮುಂದಾದವರು. ಅಹಂಕಾರದಿಂದ ತಲೆಯೆತ್ತಿ ನಿಂತಂತಿರುವ ದುರ್ಗಮವಾದ ಪರ್ವತಗಳ ಮಧ್ಯೆ ಮನೆ ಕಟ್ಟಿದ ಕಾಡಾನೆಗಳನ್ನೇ ಪಳಗಿಸಿದ ಹೆಬ್ಬಾವು ಹುಲಿಗಳಂತಹ ಕ್ರೂರ ಪ್ರಾಣಿಗಳನ್ನೇ ಮಣಿಸಿದ ಪರಂಪರೆ ನಮ್ಮ ಹಿರಿಯರದು.

ಕೃಷಿ ಬದುಕಿನ ಸೊಗಸ ತಿಂದುಂಡು ಬಲಿಷ್ಠರಾಗಿ ಬಾಳಿದವರು ನಮ್ಮ ಹಿರಿಯರು. ನೇಗಿಲ ಸಾಲಿನಂತೆ ನೇರ ನಡೆ-ನುಡಿಯ ಬದುಕು ಅವರದು. ಕೆಸರಲ್ಲಿ ಕೆಸರಾಗಿ ಕಷ್ಟಪಟ್ಟು ದುಡಿದು ಕಂಪುಸೂಸುವ ಬೆಳೆಯ ಬೆಳೆದವರು. ಅದನ್ನು ತಿಂದುಂಡು ಗಟ್ಟಿಮುಟ್ಟಾದ ಆರೋಗ್ಯಯುತ ದೇಹ ಹೊಂದಿದವರು.

ಕೂಡು ಕುಟುಂಬದ ಸೊಗಸನ್ನು ಅರಿತು ಎಲ್ಲರೂ ಒಂದಾಗಿ ಬದುಕಿದವರು. ಹಾಗಾಗಿಯೇ ಹೃದಯ ಶ್ರೀಮಂತಿಕೆಯನ್ನು ಹೊಂದಿದ್ದ ನಮ್ಮ ಹಿರಿಯರು ಜ್ಞಾನವನ್ನು ಬೆಳಕೆಂದು ನಂಬಿ ಬಾಳನ್ನು ಬೆಳಗಿಸಿದರು. ಸರಿಯಾದ ದಾರಿಯಲ್ಲಿ ತಲೆಯೆತ್ತಿ ಮುನ್ನಡೆದ ನಮ್ಮ ಹಿರಿಯರ ಪರಂಪರೆಯು ನಮಗೆ ಸಾಕ್ಷಿ. ಹಾಗಾಗಿ ನಾವು ಅವರ ಹಾದಿಯಲ್ಲಿ ಸೋಲರಿಯದೆ ಮುನ್ನಡೆದು ಗೆಲುವು ಸಾಧಿಸಬಲ್ಲೆವು.

ನಮ್ಮ ಹಿರಿಯರು ಪ್ರಾಕೃತಿಕವಾದ ಬೆಟ್ಟಗಳನ್ನು ಮಣಿಸಿದರೆ ನಾವು ಅಹಂಕಾರದ ಕೋಟೆಗಳನ್ನು ಗೆಲ್ಲುವೆವು. ದರ್ಪದಿಂದ ಭುಸುಗುಡುವ ಹಾವುಗಳನ್ನು ಹಿಡಿದು ಕಟ್ಟುವೆವು. ಮದದಿಂದ ಅಟ್ಟಹಾಸ ಗೈಯ್ಯುವ ಅಹಮ್ಮಿಕೆಯ ದಂತಗಳನ್ನು ಮುರಿಯುವೆವು. ಈ ಎಲ್ಲಾ ಕಾರ್ಯಗಳಿಂದ ನಾವು ಜನರ ಹೃದಯಗಳನ್ನು ಗೆಲ್ಲುತ್ತೇವೆ.

ನಮ್ಮ ಗೆಲುವು ಈ ನಾಡಿನ ಗೆಲುವು. ಎಲ್ಲರನ್ನು ಗೆಲ್ಲಿಸಲು ನಮ್ಮ ಹೋರಾಟ. ಈ ಹೋರಾಟದಲ್ಲಿ ನಾವು ಸೋಲನ್ನು ಒಪ್ಪಿಕೊಳ್ಳಲಾರೆವು. ನಾವು ಬದುಕಬೇಕು. ನಮ್ಮೊಂದಿಗೆ ಲೋಕದ ಇತರರೂ ಬದುಕಬೇಕು. ಇದು ನಮ್ಮ ಗುರಿ.

ಪಶ್ಚಿಮ ಘಟ್ಟಗಳ ಶಿಖರವನ್ನೇರಿ ನಡೆದು ಸಮುದ್ರದಲೆಗಳಲ್ಲಿ ಕುಣಿ ಕುಣಿದು ನಮ್ಮ ನಾಡಿನ ವಿಶಾಲತೆಯಲ್ಲಿ ಸ್ವತಂತ್ರವಾಗಿ ಅಡ್ಡಾಡುತ್ತಾ ನಮ್ಮ ಗೆಲುವಿನ ಹಾಡನ್ನು ಹಿಗ್ಗಿ ಹಾಡುತ್ತಿದ್ದೇವೆ.

ನಾವು ಗೆದ್ದರೆ ನಮ್ಮ ತಾಯಿನೆಲದ ಗೆಲುವು. ನಾವು ಸೋತೇವೋ ನಮ್ಮ ತಾಯಿಗೆ ಕಣ್ಣೀರು. ನಮ್ಮ ತಾಯಿ ಕಣ್ಣೀರು ಹಾಕಲು ನಾವು ಬಿಡಲಾರೆವು. ಹಾಗಾಗಿ ನಾವು ಸೋಲನ್ನು ಒಪ್ಪಲಾರೆವು. ನಮ್ಮ ತಾಯಿ ಜಯಗಳಿಸಬೇಕು. ಅದಕ್ಕೆ ನಾವು ಗೆಲ್ಲಲೇ ಬೇಕು.

- **ಸ್ವಾರಸ್ಯ ಬರೆಯುವುದು**

ವಿದ್ಯಾರ್ಥಿಗಳು ಕೊಟ್ಟಿರುವ ಸಾಲುಗಳ ಆಶಯವನ್ನು ಹೇಳಲಿ. ಇದೇ ರೀತಿ ಪದ್ಯದ ಸಾಲಿನಲ್ಲಿರುವ ವೈಶಿಷ್ಟ್ಯವನ್ನು, ಸ್ವಾರಸ್ಯವನ್ನು ಚರ್ಚಿಸಿ ಮಂಡನೆ ಮಾಡಲಿ. ಸ್ವಾರಸ್ಯ ಬರವಣಿಗೆಯಲ್ಲಿ ಇರಬೇಕಾದ ಅಂಶಗಳ ಕುರಿತು ಈಗಾಗಲೇ ಹಿಂದಿನ ಪಾಠಗಳಲ್ಲಿ ತಿಳಿಸಲಾಗಿದೆ. ಅದೇ ಮಾದರಿಯನ್ನು ಅನುಸರಿಸುವುದು.

## ಸ್ವಾರಸ್ಯ ಹೀಗೂ ಬರೆಯಬಹುದಲ್ಲವೇ?

ಕಯ್ಯಾರ ಕಿಞ್ಞಣ್ಣ ರೈಯವರು ಬರೆದ 'ನಾವು ಗೆಲುವೆವು' ಕವನದ ಈ ಸಾಲುಗಳು ಇಡೀ ಕವನದ ಮೂಲ ಆಶಯವನ್ನು ಪ್ರತಿಬಿಂಬಿಸುತ್ತದೆ.

ನಮ್ಮ ಗೆಲುವು ಎಂಬುದು ಯಾರದೋ ಸೋಲಲ್ಲ. ಎಲ್ಲರ ಗೆಲುವೇ ನಮ್ಮ ಗೆಲುವು. ಹಾಗಾಗಿ ಇಲ್ಲಿ ನೋವಿಲ್ಲ, ಯಾತನೆಗಳಿಲ್ಲ, ಹತಾಶೆ ಇಲ್ಲ. ಇರುವುದು ಗೆಲುವಿನ ನಲಿವು ಮಾತ್ರ. ನಾವು ಬದುಕುವ. ಎಲ್ಲರನ್ನೂ ಬದುಕಿಸುವ, ಎಲ್ಲರನ್ನೂ ಗೆಲ್ಲಿಸುವ ಒಂದು ಅರ್ಥದಲ್ಲಿ ಎಲ್ಲರನ್ನೂ ಒಳಗೊಳ್ಳುವ ಸಂತೃಪ್ತ, ಸಮೃದ್ಧ ಬದುಕಿನ ರೀತಿ ಇದು. ಹಾಗಾಗಿ ನಾವು ಬದುಕಬೇಕು. ನಮ್ಮೊಂದಿಗೆ ಇಡೀ ಲೋಕವೇ ಬದುಕಬೇಕು. ಇದೇ ನಮ್ಮ ಬದುಕಿನ ಗುರಿ. ಆ ಗುರಿ ಸಾಧನೆಯ ಹಾದಿಯಲ್ಲಿ ನಾವು ಗೆಲ್ಲಲೇ ಬೇಕು ಎಂಬ ಛಲ, ಧೈರ್ಯ. ಅದಕ್ಕೆ ಬೇಕಾಗಿರುವ ದುಡಿಮೆಯ ಛಾತಿಯನ್ನು ಈ ಸಾಲುಗಳು ಅನಾವರಣಗೊಳಿಸುತ್ತವೆ.

ಜಗತ್ತು ನಮ್ಮಿಂದಾದುದು. ನಾವು ಬೇರೆಯಲ್ಲ, ಜಗತ್ತು ಬೇರೆಯಲ್ಲ ಎಂಬ ಸಮಷ್ಟಿ ಪ್ರಜ್ಞೆ ಕವಿಯದ್ದು. ಹಾಗಾಗಿ ನಮ್ಮ ಗೆಲುವೇ, ಜಗದ ಗೆಲುವು ಎಂಬುದನ್ನು ಕವಿ ಸ್ವಾರಸ್ಯ ಪೂರ್ಣವಾಗಿ ಈ ಸಾಲುಗಳಲ್ಲಿ ನಿರೂಪಿಸಿದ್ದಾರೆ.

- **ಕಿರುಲೇಖನ ಬರೆಯುವುದು**

ಲೇಖನ ಬರೆಯುವಾಗ ಗಮನಿಸಬೇಕಾದ ವಿಚಾರಗಳನ್ನು ಹಿಂದಿನ ತರಗತಿಯಲ್ಲಿ ತಿಳಿದಿರುವಿರಲ್ಲವೇ? ಅದೇ ಕ್ರಮವನ್ನು ಅಳವಡಿಸಿಕೊಂಡು ಕಿರುಲೇಖನ ಬರೆಯಲಿ.

## ಕಿರುಲೇಖನವನ್ನು ಹೀಗೂ ಬರೆಯಬಹುದು

ಕಯ್ಯಾರ ಕಿಞ್ಞಣ್ಣ ರೈ ಅವರು ಬರೆದ ನಾವು ಗೆಲುವೆವು ಪದ್ಯದ ಈ ಸಾಲುಗಳು ಸಮಸ್ಟಿ ಪ್ರಜ್ಞೆಯನ್ನು ಹೊಂದಿವೆ.

ಕವಿಯು ಎಲ್ಲಿಯೂ 'ನಾನು' ಎಂದು ಹೇಳದೆ 'ನಾವು' ಎಂಬುದಾಗಿಯೇ ಹೇಳುತ್ತಾರೆ. ಇಲ್ಲಿ ದೇಶದ ಗೆಲುವು ಎಂಬುದು ಆ ದೇಶದ ಜನರ ಅಭಿವೃದ್ಧಿಯಲ್ಲಿದೆ. ದೇಶವೊಂದರ ಜನರು ಶೈಕ್ಷಣಿಕವಾಗಿ ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಬೆಳೆದರೆ ಆ ದೇಶವೇ ಬೆಳೆದಂತೆ. ತಾಯಿನಾಡೆಂದರೆ ತಾಯಿಯಂತೆ. ತಾಯಿಯಾದವಳು 9 ತಿಂಗಳು ಗರ್ಭದಲ್ಲಿ ಹೊತ್ತು ಹೆತ್ತು ಸಾಕಿದರೆ, ತಾಯಿನಾಡು. ನಾವು ಹುಟ್ಟಿದಲ್ಲಿಂದ ಸಾಯುವವರೆಗೆ ನಮ್ಮನ್ನು ಸಲಹುತ್ತದೆ. ಸತ್ತ ಬಳಿಕವೂ ಅವಳ ಮಡಿಲಲ್ಲಿ ನಾವು ಒಂದಾಗುತ್ತೇವೆ. ಹಾಗಾಗಿ ನಮ್ಮ ಸೋಲು ಗೆಲುವಿನಲ್ಲಿ ತಾಯಿ ನೆಲದ ಸೋಲು ಗೆಲುವಿದೆ. ಮಕ್ಕಳು ಎಂದಿಗೂ ತಾಯಿಯ ಕಣ್ಣಲ್ಲಿ ನೀರು ಬರುವಂತೆ ಮಾಡಬಾರದು ಎಂಬ ಮಾತಿದೆ. ನಮಗೆ ಸೋಲಾದರೆ ನಮ್ಮ ಜನ್ಮದಾತೆಯಾದ ತಾಯಿ ನೆಲದ ಕಣ್ಣಲ್ಲಿ ನೀರು ಹರಿಯುತ್ತದೆ ಎಂದು ಹೇಳುವ ಮೂಲಕ ಕವಿಯು ತಾಯಿನಾಡಿಗೆ ಅಪಮಾನವಾಗುವ ಯಾವುದೇ ಕೃತ್ಯಗಳಲ್ಲಿ ತೊಡಗಬಾರದು. ದೇಶದ ಜನರ ಘನತೆ ಗೌರವಗಳೇ, ಆ ದೇಶದ ಘನತೆಯಾಗಿರುತ್ತದೆ. ಹಾಗಾಗಿ ನಮ್ಮ ದೇಶದ ಗೌರವಕ್ಕೆ ಚ್ಯುತಿ ಬಾರದಂತೆ ನಮ್ಮ ನಡೆ, ನುಡಿ ಕಾರ್ಯಸಿದ್ಧಿಗಳಿರಬೇಕು. ಹಾಗಾದರೆ ನಾವು ಗೆಲ್ಲುತ್ತೇವೆ, ನಮ್ಮ ತಾಯಿನಾಡು ಗೆಲ್ಲುತ್ತದೆ ಎಂಬುದನ್ನು ಮಾರ್ಮಿಕವಾಗಿ ಹೇಳಿದ್ದಾರೆ.

- **ಲಿಖಿತ ಭಾಷಣ ಬರೆಯುವುದು**

ಲಿಖಿತ ಭಾಷಣ ಬರೆಯುವಾಗ ಗಮನಿಸಬೇಕಾದ ವಿಚಾರಗಳನ್ನು ಹಿಂದಿನ ತರಗತಿಯಲ್ಲಿ ತಿಳಿದಿರುವಿರಲ್ಲವೇ? ಅದೇ ಕ್ರಮವನ್ನು ಅಳವಡಿಸಿಕೊಂಡು ಲಿಖಿತ ಭಾಷಣ ತಯಾರಿಸಲಿ.

**ಲಿಖಿತ ಭಾಷಣ ಹೀಗೂ ಬರೆಯಬಹುದು**

ಎಲ್ಲರಿಗೂ ನಮಸ್ಕಾರ. ನಾನಿಂದು ಗ್ರಾಮೀಣ ಜನಜೀವನದ ಸೊಬಗು ಎಂಬ ವಿಷಯದ ಕುರಿತು ಪುಟ್ಟ ಭಾಷಣವನ್ನು ಮಾಡಲು ನಿಮ್ಮ ಮುಂದೆ ನಿಂತಿದ್ದೇನೆ.

ನಗರ ಜೀವನದ ಗಡಿಬಿಡಿ ಒತ್ತಡ ಮಾಲಿನ್ಯಗಳಿಂದ ಬಸವಳಿದ ಬದುಕಿಗೆ ತಂಪೆರೆಯುವುದು ಗ್ರಾಮೀಣ ಬದುಕು ಎಂದರೆ ತಪ್ಪಾಗಲಾರದು. ಗ್ರಾಮ ಭಾರತ ಎಂಬ ಮಾತೇ ಭಾರತವು ಗ್ರಾಮಗಳ ದೇಶ ಎಂಬುದನ್ನು ರುಜುವಾತುಪಡಿಸುತ್ತದೆ. ನಗರ ಬದುಕಿನ ಸಾರಿಗೆ ಸೌಕರ್ಯಗಳು ಗ್ರಾಮಗಳಲ್ಲಿಲ್ಲದಿದ್ದರೂ ಗ್ರಾಮೀಣ ಬದುಕಿನಲ್ಲಿ ಸಹಜತೆ, ಸರಳತೆ, ಸೌಂದರ್ಯಗಳಿರುತ್ತವೆ.ಹಸಿರು ಸಮೃದ್ಧವಾಗಿರುವ ಸ್ವಚ್ಛವಾದ ಪರಿಸರವುಳ್ಳ ಕೃತಕ ಆಡಂಬರಗಳಿಲ್ಲದ ಸಹಜ ಜನಜೀವನವನ್ನು ಗ್ರಾಮಗಳಲ್ಲಿ ಕಾಣಬಹುದು. ಕೃಷಿಯೇ ಉಸಿರಾಗಿರುವ ಜನರು ಪ್ರಕೃತಿಗೆ ನಿಕಟವಾಗಿ ಬದುಕನ್ನು ಕಟ್ಟಿಕೊಂಡವರು. ಹಾಗಾಗಿ ಅವರ ಬದುಕಿನಲ್ಲಿ ಪ್ರಕೃತಿ ಸಹಜವಾದ ಸೊಬಗಿದೆ. ಸಂಬಂಧಗಳು ವ್ಯಾವಹಾರಿಕವಾಗಿರದೆ ಆತ್ಮೀಯ ಹಾಗೂ ಭಾವನಾತ್ಮಕವಾಗಿರುತ್ತದೆ. ಸಂಬಂಧಗಳು ಮನುಷ್ಯರೊಂದಿಗೆ ಮಾತ್ರವಲ್ಲ ಪ್ರಾಣಿ ಪಕ್ಷಿಗಳೊಂದಿಗೂ ಬೆರೆತುಕೊಂಡಿರುತ್ತದೆ. ಹಳ್ಳಿಗಳಲ್ಲಿ ಆಚರಿಸಲ್ಪಡುವ ಆಚರಣೆಗಳು, ಕ್ರೀಡೆಗಳು ಇದಕ್ಕೆ ಪುಷ್ಠಿ ನೀಡುತ್ತವೆ.

ಊರಿನಲ್ಲಿ ನಡೆಯುವ ಜಾತ್ರೆಗಳಾಗಲಿ, ಮನರಂಜನಾ ಕೂಟಗಳಾಗಲಿ, ಮದುವೆಯಂತಹ ಮನೆಯ ಕಾರ್ಯಕ್ರಮಗಳೇ ಇರಲಿ ಊರವರೆಲ್ಲ ಒಂದಾಗಿ ನಡೆಸುತ್ತಾರೆ. ಅಲ್ಲಿ ಜಾತಿ ಮತ ಧರ್ಮದ ಭೇದಗಳಿಲ್ಲದೆ ಎಲ್ಲರೂ ಕಾರ್ಯನಿರತರಾಗುತ್ತಾರೆ. ಇಂತಹ ಮನೋಭಾವಕ್ಕೆ ಕಾರಣ ಹಳ್ಳಿಗರ ಮುಖ್ಯವೃತ್ತಿಯಾದ ಕೃಷಿ ಎಂದರೆ ತಪ್ಪಾಗಲಾರದು. ಕೃಷಿ ಎಂಬುದು ಒಂದಷ್ಟು ಜನರ ಒಗ್ಗೂಡುವಿಕೆಯಿಂದ ನಡೆಯುವ ಕೆಲಸ. ಅದು ಅನ್ನದಾತನ ಕೆಲಸ. ಹಾಗಾಗಿಯೇ ಅದರ ಪಾವಿತ್ರ್ಯ ಹಳ್ಳಿಗಳ ಜನಜೀವನದಲ್ಲೂ ಬೆರೆತು ಅವರ ಬದುಕನ್ನು ಸೊಗಸುಗೊಳಿಸಿದೆ. ಹಾಗೆಂದ ಮಾತ್ರಕ್ಕೆ ಗ್ರಾಮ ಬದುಕಿನಲ್ಲಿ ತೊಂದರೆಗಳಿಲ್ಲವೆಂದಲ್ಲ.

ಹವಾಮಾನ ವೈಪರೀತ್ಯಗಳು ಮಾರುಕಟ್ಟೆಗಳಲ್ಲಿ ಏರಿಳಿಯುವ ಬೆಳೆಗಳ ಧಾರಣೆ, ಸಾರಿಗೆ ಸಂಪರ್ಕದ ಕೊರತೆ ಬೆಳೆಗಳಿಗೆ ಕಾಡುವ ರೋಗಗಳು ಸೂಕ್ತ ವೈದ್ಯಕೀಯ ಸೌಲಭ್ಯಗಳು ಸಕಾಲದಲ್ಲಿ ದೊರೆಯದಿರುವುದು. ಹೀಗೆ ಹತ್ತು ಹಲವು ಸಮಸ್ಯೆಗಳನ್ನು ಗ್ರಾಮೀಣ ಜನರು ಎದುರಿಸಬೇಕಾಗುತ್ತದೆ. ಹಾಗಿದ್ದರೂ ಕಷ್ಟಪಟ್ಟು ಮೈಮುರಿದು ದುಡಿಯುವ ಗ್ರಾಮೀಣ ಜನರು ಇಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸುತ್ತಾರೆ. ಪ್ರಕೃತಿ ಅಂತಹ ಮನೋದಾರ್ಢ್ಯವನ್ನು ಅವರಿಗೆ ಕೊಡಮಾಡಿದೆ. ದುಡಿಮೆಯಲ್ಲಿಯೇ ದೇವರನ್ನು ಕಾಣುವ ಅವರ ಕಾಯಕ ನಿಷ್ಠೆ, ಆದರ್ಶಪ್ರಾಯ ಸೋಲಿಗೆ ಎದೆಗುಂದದೆ ಬದುಕುವ ಛಲ ಅವರ ಜೀವನೋತ್ಸಾಹಕ್ಕೆ ಸಾಕ್ಷಿಯಾಗಿದೆ. ಎಷ್ಟೋ ಜನಪದ ಹಾಡುಗಳು ಗ್ರಾಮೀಣ ಬದುಕಿನ ಸೊಬಗನ್ನು ತೆರೆದುತೋರಿಸುತ್ತವೆ. ಬಾಳನ್ನು ಸುಂದರವಾಗಿ ನೆಮ್ಮದಿಯಿಂದ ಬದುಕುವುದು ಹೇಗೆ? ಎಂಬುದಕ್ಕೆ ನಾವು ಗ್ರಾಮೀಣ ಬದುಕಿನ ಕಡೆ ಮುಖ ಮಾಡಬೇಕು ಎಂದು ಹೇಳಲು ನಾನು ಹೆಮ್ಮೆಪಡುತ್ತೇನೆ ಎಂಬುದಾಗಿ ಹೇಳುತ್ತಾ ಈ ಪುಟ್ಟ ಭಾಷಣವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇನೆ. ನನ್ನ ಮಾತುಗಳಿಗೆ ಕಿವಿಯಾದ ನಿಮಗೆಲ್ಲರಿಗೂ ವಂದನೆಗಳು.

- **ಕವನ ಮುಂದುವರಿಸುವುದು**

**ಕವನವನ್ನು ಹೀಗೂ ಮುಂದುವರಿಸಬಹುದು**

ಗದ್ದೆ ಬಯಲಲಿ ದುಡಿವ ಕೈಗಳು
ಬೆವರ ಹಾಡನು ಹಾಡಿವೆ
ಬಟ್ಟಲನ್ನವ ತುಂಬಿ ನಮ್ಮಯ
ಒಡಲ ಹಸಿವನು ತಣಿಸಿವೆ

ಹಸಿರ ಹಾದಿಯ ಉಸಿರ ಪಯಣದಿ
ಹಾಲು ಪೈರನು ಬೆಳೆಯಲು
ಕೆಸರು ಕಾಲಲಿ ಕಸುವು ಕೈಯಲ್ಲಿ
ಬೆರೆಸಿ ಮೊಸರನು ಚೆಲ್ಲಲು

ಬಾನಹಾಡಿಗೆ ಭುವಿಯ ಚೆಲುವಿಕೆ
ಬಾಗಿ ಹೊನ್ನನು ಬೆಳೆದಿದೆ
ಎತ್ತರೆತ್ತರ ಬೆಳೆಯ ರಾಶಿಯು
ಬೆಳೆದ ಮನವನು ಕುಣಿಸಿದೆ

ಹಂಚಿ ತಿನ್ನುವ ದಾಹ ತೀರದ
ಕೃಷಿಕ ಬಾಳಿನ ಸೊಗಸಿದು
ಭೂಮಿತಾಯಿಯ ಮಡಿಲ
ಮಗುವಿನ ಚೆಂದದಾಟದ ಚೆಲುವಿದು

# ಹಸಿರೊಡಲ ಬೆಳಕು

- ## ಪ್ರಶ್ನೆಗಳಿಗೆ ಉತ್ತರ ಬರೆಯುವುದು

ಮಕ್ಕಳಿಗೆ ಪಾಠಭಾಗದ ಆಶಯ ಮನವರಿಕೆಯಾಗಿದೆಯೇ ಎಂದು ತಿಳಿದುಕೊಳ್ಳುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ಮಕ್ಕಳಲ್ಲಿ ಬಾಯ್ದೆರೆಯಾಗಿ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಲಿ. ಬಳಿಕ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಯೋಗ್ಯವಾದ ಸಲಹೆ ಸೂಚನೆಗಳನ್ನು ನೀಡುವುದು.

- ## ಅಭಿಪ್ರಾಯ ಟಿಪ್ಪಣಿ ಬರೆಯುವುದು

ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳಾಗಿ ಮಾಡುವುದು. ಪ್ರತಿಯೊಂದು ಗುಂಪಿನವರು ಪಾಠಭಾಗವನ್ನೊದಿ ಅದರ ಆಶಯವನ್ನು ಮನದಟ್ಟಾಗಿಸಿಕೊಂಡು ತಮ್ಮ ಅಭಿಪ್ರಾಯಗಳೊಂದಿಗೆ ಟಿಪ್ಪಣಿ ಬರೆಯಲಿ. ತರಗತಿಯಲ್ಲಿ ಮಂಡಿಸುವುದು. ಬಿಟ್ಟು ಹೋದ ಅಂಶಗಳನ್ನು ಅಧ್ಯಾಪಕರ ನೆರವಿನೊಂದಿಗೆ ಪರಿಷ್ಕರಿಸಿ ಬರೆಯುವುದು. ಉತ್ತಮ ರೀತಿಯಲ್ಲಿ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

## ಅಭಿಪ್ರಾಯ ಟಿಪ್ಪಣಿ ಹೀಗೆ ಬರೆಯಬಹುದು

ನಾರಾಯಣ ರೆಡ್ಡಿ ಅವರ ತಾತ ದಾನದಲ್ಲಿ ಹೆಸರುವಾಸಿಯಾದವರು ಒಮ್ಮೆ ಊರಿಗೆ ಬರ ಬಂದಾಗ ಎಲ್ಲಾ ಮನೆಗಳಲ್ಲಿಯೂ ಶೇಖರಿಸಿದ್ದ ಕಾಡು ಮುಗಿದಿತ್ತು ಆಗ ಅವರ ತಾತ ಗ್ರಾಮದಲ್ಲಿ ಇರುವ ಸಾವಿರದ 500 ಜನರಿಗೆ ಒಂದು ತಿಂಗಳ ಕಾಲ ಮೂರು ಹೊತ್ತು ಊಟ ಕೊಟ್ಟು ಪ್ರಾಣ ಉಳಿಸಿದರು 'ಅಂತಹ ಕುಟುಂಬದಲ್ಲಿ ಹುಟ್ಟಿದ ಕೂಸು ನೀನು ಅದರ ಘನತೆ ಗೌರವ ಮರ್ಯಾದೆ ಕಾಪಾಡಬೇಕು' ಎಂದು ಅಜ್ಜಿ ಹೆಮ್ಮೆಯಿಂದ ಹೇಳಿದ ಮಾತು ನಾರಾಯಣ ರೆಡ್ಡಿ ಅವರ ಹೃದಯ ತುಂಬುವಂತೆ ಮಾಡಿತು ಬದುಕಿದರೆ ಹಾಗೆ ಬದುಕಬೇಕು ಎಂದು ಅವರು ಅಂದೇ ನಿರ್ಧರಿಸಿದರು.

ಈ ಸನ್ನಿವೇಶವು ತನ್ನಲ್ಲಿರುವುದನ್ನು ಹಂಚಿ ತಿನ್ನುವ ಮನೋಭಾವವನ್ನು ಸೂಚಿಸುತ್ತದೆ ಮಾನವನಾಗಿ ಹುಟ್ಟಿದ ಮೇಲೆ ನಾಲ್ಕು ಜನರಿಗೆ ಪ್ರಯೋಜನವಾಗುವಂತೆ ಬದುಕಬೇಕೆಂಬ ಆದರ್ಶವೂ ಕಂಡುಬರುತ್ತದೆ ನಮ್ಮ ಹಿರಿಯರು ಮೈಗೂಡಿಸಿಕೊಂಡಿರುವ ಉತ್ತಮ ಜೀವನ ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

- **ಓದುಗರ ಓಲೆಗೆ ಪತ್ರ ಬರೆಯುವುದು**

ಅಧ್ಯಾಪಕರು ವಿದ್ಯಾರ್ಥಿಗಳ ಜೊತೆಗೆ ಓದುಗರ ಓಲೆಯ ಕುರಿತು ಲಘು ಚರ್ಚೆ ನಡೆಸುವುದು . ಬಳಿಕ ಕೆಲವೊಂದು ಪ್ರಶ್ನೆಗಳನ್ನು ಕೇಳುವುದು.

- ಓದುಗರ ಓಲೆ ಎಂದರೇನು?
- ಓದುಗರ ಓಲೆ ಬರೆಯುವುದು ಯಾರು?
- ಇದರ ಉದ್ದೇಶವೇನು?

ಮುಂತಾದ ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಗಳಲ್ಲಿ ಚರ್ಚಿಸುವುದು. ಬಳಿಕ ಅಧ್ಯಾಪಕರು ಸಂಪಾದಕರಿಗೆ ಬರೆಯುವ ಪತ್ರವೇ ಓದುಗರ ಓಲೆಯಾಗಿದೆ ಎಂದು ತಿಳಿಸುವುದು.

ಓದುಗರ ಓಲೆ , ವಾಚಕರ ವಾಣಿ, ದೂರು ಗಂಟೆ ಎಂಬೀ ಶೀರ್ಷಿಕೆಗಳ ಮೂಲಕ ದಿನಪತ್ರಿಕೆಗಳಲ್ಲಿ ಇದನ್ನು ಕಾಣಬಹುದು. ಯಾವುದೇ ಒಂದು ವಿಚಾರದ ಕುರಿತು ಸಾರ್ವಜನಿಕರಿಗೆ ಮನವರಿಕೆ ಮಾಡುವುದರ ಜೊತೆಗೆ ಸಂಬಂಧ ಪಟ್ಟ ಅಧಿಕಾರಿಗಳ ಕಣ್ಣು ತೆರೆಯಿಸಲು ಇದು ಬಳಸಲ್ಪಡುತ್ತದೆ ಎಂಬ ವಿಚಾರವನ್ನು ಮನದಟ್ಟು ಮಾಡುವುದು.

ಬಳಿಕ ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ಕುಳ್ಳಿರಿಸಿ ಓದುಗರ ಓಲೆ ವಿಭಾಗದ ಪತ್ರಿಕಾ ತುಣುಕುಗಳನ್ನು ನೀಡಿ ಓದಲು ಅವಕಾಶವನ್ನು ನೀಡುವುದು. ಅನಂತರ ಓದುಗರ ಓಲೆಯ ಸ್ವರೂಪದ ಕುರಿತು ಚರ್ಚಿಸುವುದು.

**ಚರ್ಚೆಯಲ್ಲಿ ಇರಬೇಕಾದ ಅಂಶಗಳು.**

- ಶೀರ್ಷಿಕೆ
- ದಿನಾಂಕ
- ಸಂಬೋಧನೆ
- ನಿರ್ದಿಷ್ಟ ವಿಚಾರದ ವಿವರ
- ಬರೆದವರ ಹೆಸರು ಮತ್ತು ಸ್ಥಳ

ಈ ಎಲ್ಲ ವಿಚಾರಗಳನ್ನು ಕುರಿತು ಚರ್ಚಿಸಿದ ಬಳಿಕ ವಿದ್ಯಾರ್ಥಿಗಳು ಗುಂಪಿನಲ್ಲಿ ಓದುಗರ ಓಲೆಗೆ ಪತ್ರ ಒಂದನ್ನು ಬರೆಯಲಿ. ಬಳಿಕ ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಮಂಡನೆಯ ಸಂದರ್ಭದಲ್ಲಿ ಬಿಟ್ಟುಹೋದ ಅಂಶಗಳಿದ್ದಲ್ಲಿ ಸೇರಿಸಿ ಪರಿಷ್ಕರಿಸಿ ತಮ್ಮ ಚಟುವಟಿಕೆಯ ಪುಸ್ತಕದಲ್ಲಿ ಬರೆದುಕೊಳ್ಳಲಿ.

ಓದುಗರ ಓಲೆಗೆ ಪತ್ರ ಹೀಗೂ ಬರೆಯಬಹುದು

## ಉಣ್ಣುವ ಅನ್ನಕ್ಕೆ ಮಣ್ಣು ಹಾಕದಿರಿ

ಪ್ರಿಯರೆ, ದಿನಾಂಕ : 4.1.2025

ಇತ್ತೀಚೆಗಿನ ದಿನಗಳಲ್ಲಿ ನಗರೀಕರಣದ ಭರಾಟೆ ಹೆಚ್ಚುತ್ತಿದೆ. ನಗರಗಳ ಕಬಂಧ ಬಾಹುಗಳು ಅನ್ನ ಬೆಳೆಯುವ ಕೃಷಿ ಭೂಮಿಗಳನ್ನು, ಜೀವ ಜಲವೀಯುವ ಕೆರೆಕುಂಟೆಗಳನ್ನು ಆಪೋಶನಗೈಯ್ಯುತ್ತಿವೆ.ಪ್ರಾಣವಾಯುವನ್ನು ನೀಡುವ ಗಿಡಮರಗಳನ್ನು ಕಡಿದುಹಾಕುತ್ತಿವೆ.

ಕೃಷಿಭೂಮಿಗಳಿಗೆ, ಕೆರೆಗಳಿಗೆ ಮಣ್ಣುತುಂಬಿ ಕಟ್ಟಡಗಳನ್ನು ನಿರ್ಮಿಸುವ, ಮರಗಳನ್ನು ಕಡಿದು ರಸ್ತೆಗಳನ್ನು ನಿರ್ಮಿಸುವ ಮಾನವನ ಪ್ರವೃತ್ತಿಗಳು ಇದೇ ರೀತಿ ಮುಂದುವರಿದರೆ ಮುಂದೊಂದು ದಿನ ಆಹಾರಕ್ಕಾಗಿ, ನೀರಿಗಾಗಿ, ಗಾಳಿಗಾಗಿ ಪರದಾಡಬೇಕಾದ ಪರಿಸ್ಥಿತಿ ಬರುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ಕುರಿತು ಸಂಬಂಧ ಪಟ್ಟವರು ಗಮನಹರಿಸುವಂತೆ ಒತ್ತಡ ಹೇರಬೇಕಾದುದು ಸಾರ್ವಜನಿಕರಾದ ನಮ್ಮ ಕರ್ತವ್ಯವೂ ಅಗತ್ಯವೂ ಆಗಿದೆ. ಇಲ್ಲದಿದ್ದರೆ ಅನ್ನದ ಬಟ್ಟಲಲ್ಲಿ ಮಣ್ಣು ತಿನ್ನುವ ಕಾಲ ದೂರವಿರಲಾರದು. ಆದ್ದರಿಂದ ಇನ್ನಾದರೂ ನಾವು ಎಚ್ಚೆತ್ತುಕೊಳ್ಳಬೇಡವೇ?

ನೊಂದ ನಾಗರಿಕರು,

ಬೆಂಗಳೂರು ಗ್ರಾಮಾಂತರ.

## ● ಪತ್ರಿಕಾ ವರದಿ ಬರೆಯುವುದು

ಅಧ್ಯಾಪಕರು ವಿದ್ಯಾರ್ಥಿಗಳ ಜೊತೆಗೆ ಪತ್ರಿಕಾ ವರದಿಯ ಕುರಿತು ಲಘು ಚರ್ಚೆ ನಡೆಸುವುದು. ಬಳಿಕ ಗುಂಪಿನಲ್ಲಿ ಕುಳ್ಳಿರಿಸಿ ಪ್ರತಿ ಗುಂಪಿಗೂ ಒಂದೊಂದು ಪತ್ರಿಕಾವರದಿಯ ತುಣುಕುಗಳನ್ನು ಹಂಚುವುದು. ನಿರ್ದಿಷ್ಟ ಸಮಯಾವಕಾಶವನ್ನು ನೀಡಿ ವಿದ್ಯಾರ್ಥಿಗಳಲ್ಲಿ ಓದಲು ತಿಳಿಸುವುದು. ಬಳಿಕ ಕೆಲವೊಂದು ಪ್ರಶ್ನೆಗಳನ್ನು ಕೇಳುವುದು.

- ಪತ್ರಿಕಾ ವರದಿ ಎಂದರೇನು?
- ಪತ್ರಿಕಾ ವರದಿಯ ಸ್ವರೂಪ ಹೇಗಿರಬೇಕು?
- ಪತ್ರಿಕಾವರದಿಯ ಉದ್ದೇಶವೇನು?

ಪತ್ರಿಕಾವರದಿ ಎಂದರೆ ಒಂದು ಕಾರ್ಯಕ್ರಮದ ಕುರಿತು ಪತ್ರಿಕೆಗೆ ನೀಡುವ ವರದಿ ಎಂದು ತಿಳಿಸುವುದು. ಇದರಲ್ಲಿ ಕಾರ್ಯಕ್ರಮ ದ ಸಂಕ್ಷಿಪ್ತ ವಿವರ ಇರಬೇಕು.

**ಪತ್ರಿಕಾವರದಿ ಹೀಗೂ ಬರೆಯಬಹುದು**

## ‘ರೈತರ ಬೆವರ ಹನಿ ದೇಶದ ಧ್ವನಿ’ - ಶ್ರೀ ಕರುಣಾಕರ

**ಮಂಜೇಶ್ವರ ಸೆಪ್ಟೆಂಬರ್ 8 :** ‘ರೈತರೇ ದೇಶದ ಬೆನ್ನೆಲುಬು. ರೈತರ ಬೆವರ ಹನಿಯೇ ದೇಶದ ಧ್ವನಿ’ ಎಂಬುದಾಗಿ ಮಂಜೇಶ್ವರದ ಕೃಷಿತಜ್ಞರಾದ ಶ್ರೀಯುತ ಕರುಣಾಕರರವರು ಅಭಿಪ್ರಾಯಪಟ್ಟರು. ಅವರು ಇತ್ತೀಚೆಗೆ ಮಂಜೇಶ್ವರದ ಸರಸ್ವತಿ ವಿದ್ಯಾ ನಿಲಯದಲ್ಲಿ ಇಕೋ ಕ್ಲಬ್ಬಿನ ವತಿಯಿಂದ ಜರುಗಿದ 'ಕೃಷಿ ದಿನಾಚರಣೆ' ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಿದ್ದರು. ನಮ್ಮ ದೇಶ ಕೃಷಿ ಪ್ರಧಾನವಾದ ದೇಶವಾಗಿದ್ದು, ರೈತರೇ ನಮ್ಮ ದೇಶದ ಬೆನ್ನೆಲುಬು. ಆದ್ದರಿಂದ ಕೃಷಿ ಹಾಗೂ ಕೃಷಿಕರನ್ನು ಗೌರವಿಸಬೇಕಾದುದು ನಮ್ಮ ಆಧ್ಯ ಕರ್ತವ್ಯವಾಗಿದೆ ಎಂದು ಅವರು ನುಡಿದರು. ಕನ್ನಡ ಶಿಕ್ಷಕಿಯಾದ ಶ್ರೀಮತಿ ಜಮೀಲ ಟೀಚರ್ ಕೃಷಿ ದಿನಾಚರಣೆಯ ಮಹತ್ವದ ಬಗ್ಗೆ ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಥಾಮಸ್ ಡಿಸೋಜಾರವರು ಸ್ವಾಗತಿಸಿ, ಶಿಕ್ಷಕರಾದ ಅತುಲ್‌ರವರು ಧನ್ಯವಾದ ಸಲ್ಲಿಸಿದರು. ಶಾಲಾ ವಿದ್ಯಾರ್ಥಿನಿಯರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮದ ನಿರೂಪಣೆಯನ್ನು ಶಾಲಾ ಇಕೋ ಕ್ಲಬ್‌ನ ಕಾರ್ಯದರ್ಶಿ ದೀಪಕ್ ನಿರ್ವಹಿಸಿದರು. ಸಭಾ ಕಾರ್ಯಕ್ರಮದ ಬಳಿಕ ಸಾವಯವ ಕೃಷಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವು ಜರುಗಿತು.

- **ವ್ಯಕ್ತಿ ಚಿತ್ರ ಬರವಣಿಗೆ**

ಯಾವುದೇ ಕ್ಷೇತ್ರದಲ್ಲಿ ವಿಶೇಷವಾಗಿ ಸಾಧನೆ ಮಾಡಿದ ಸಾಧಕರ ಬದುಕಿನ ಕಿರು ಚಿತ್ರಣವನ್ನು ವ್ಯಕ್ತಿ ಚಿತ್ರ ಎನ್ನಬಹುದು. ಇಲ್ಲಿ ಆ ವ್ಯಕ್ತಿಯ ಬದುಕಿನ ಕುರಿತ ಅವರ ನಿಲುವುಗಳು ಸಾಧಿಸಿದ ಸಾಧನೆಗಳ ಕುರಿತ ಸಂಕ್ಷಿಪ್ತ ಚಿತ್ರಣವಿರುತ್ತದೆ. ಆ ಮೂಲಕ ಆ ವ್ಯಕ್ತಿಯ ಕುರಿತು ಹೆಚ್ಚಿನ ಮಾಹಿತಿಗಳನ್ನು ತಿಳಿದುಕೊಳ್ಳಲು ಸಾಧ್ಯ. ವ್ಯಕ್ತಿ ಚಿತ್ರಬರಹವು ಓದುಗರಲ್ಲಿ ಆಸಕ್ತಿ ,ಕುತೂಹಲ ಮೂಡಿಸುವಂತೆ ಇರಬೇಕು. ವ್ಯಕ್ತಿ ಚಿತ್ರವು ಒಳಗೊಂಡಿರಬೇಕಾದ ವಿವರಗಳ ಕುರಿತು ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡುವುದು ಇದಕ್ಕಾಗಿ ಕೆಲವು ವ್ಯಕ್ತಿ ಚಿತ್ರ ಬರಹಗಳನ್ನು ವಿದ್ಯಾರ್ಥಿಗಳಿಗೆ ನೀಡುವುದರ ಮೂಲಕ ಅಥವಾ ವ್ಯಕ್ತಿ ಚಿತ್ರ ಮಾದರಿಗಳನ್ನು ಪ್ರದರ್ಶಿಸುವುದರ ಮೂಲಕ ವ್ಯಕ್ತಿ ಚಿತ್ರವು ಒಳಗೊಂಡಿರಬೇಕಾದ ವಿವರಗಳು ತಿಳಿಯುವಂತೆ ಮಾಡಬಹುದು.

**ವ್ಯಕ್ತಿ ಚಿತ್ರಗಳು ಒಳಗೊಂಡಿರಬೇಕಾದ ಅಂಶಗಳು**

- ಸಾಧಕನ ಸಂಕ್ಷಿಪ್ತ ಹಿನ್ನಲೆ
- ಸಾಧನೆಯ ಹಾದಿಯ ಸಂಕ್ಷಿಪ್ತ ವಿವರ
- ಬದುಕಿನ ಕುರಿತ ನಿಲುವುಗಳು
- ಸಮಾಜಮುಖಿ ಕಾರ್ಯಗಳು

ಇತ್ಯಾದಿ....

ಒಂದೇ ಪ್ರದೇಶದಿಂದ ಬರುವ ವಿದ್ಯಾರ್ಥಿಗಳ ಗುಂಪುಗಳ ರಚನೆ.

ಆಯಾ ಪ್ರದೇಶಗಳಲ್ಲಿ ಕೃಷಿಯಲ್ಲಿ ಸಾಧನೆ ಮಾಡಿ ಸಮಾಜದಲ್ಲಿ ಗುರುತಿಸಲ್ಪಟ್ಟಿರುವ ಕೃಷಿ ಸಾಧಕರನ್ನು ಗುರುತಿಸಲು ಸೂಚಿಸುವುದು. ಒಂದು ವೇಳೆ ಕೃಷಿ ಸಾಧಕರ ಹೊರತಾಗಿ ಕಲೆ, ಸಾಹಿತ್ಯ, ಸಮಾಜಸೇವೆ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳನ್ನು ಇದಕ್ಕಾಗಿ ಆಯ್ಕೆ ಮಾಡಬಹುದು.

ಗುರುತಿಸಿದ ಸಾಧಕರನ್ನು ಭೇಟಿ ಮಾಡಿ ಅಗತ್ಯವಿರುವ ಮಾಹಿತಿಗಳನ್ನು ಪಡೆದುಕೊಳ್ಳಲು ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸಲು ಹೇಳುವುದು. ಪ್ರಶ್ನೆಗಳನ್ನು ತರಗತಿಯಲ್ಲಿ ಮಂಡಿಸುವುದು ಅಗತ್ಯವಿದ್ದಲ್ಲಿ ಶಿಕ್ಷಕರು ಪರಿಷ್ಕರಿಸುವುದು.

## ಪ್ರಶ್ನೆಗಳು ಹೀಗೂ ಇರಬಹುದು

- ಕೃಷಿಹಿನ್ನಲೆ ನಿಮಗಿದೆಯೇ? ಅಥವಾ ಇದು ನಿಮ್ಮ ಆಯ್ಕೆಯೇ?
- ಕೃಷಿಯಲ್ಲಿ ವಿವಿಧ ಪ್ರಯೋಗಗಳನ್ನು ನಡೆಸಲು ನಿಮಗೆ ಪ್ರೇರಣೆ ನೀಡಿದವರು ಯಾರು?
- ಕೃಷಿಯಲ್ಲಿ ನೀವು ನಡೆಸಿದ ಪ್ರಯೋಗಗಳ ಕುರಿತು ವಿವರಿಸುವಿರಾ?
- ಆಧುನಿಕ ಕೃಷಿ ಮತ್ತು ಸಾಂಪ್ರದಾಯಿಕ ಕೃಷಿ ಇವೆರಡರ ಕುರಿತು ನಿಮ್ಮ ಅನಿಸಿಕೆಗಳನ್ನು ತಿಳಿಸಿ.
- ಯುವಜನಾಂಗವು ಕೃಷಿಕಾಯಕದಿಂದ ವಿಮುಖವಾಗುತ್ತಿರುವ ಈ ಕಾಲಘಟ್ಟದಲ್ಲಿ ಅವರಿಗೆ ನೀವು ನೀಡುವ ಸಂದೇಶವೇನು?
- .......................

ಇತ್ಯಾದಿ ಪ್ರಶ್ನೆ ಮಾದರಿಗಳನ್ನು ಆಯಾ ಸಾಧಕರ ಕ್ಷೇತ್ರಗಳಿಗನುಸರಿಸಿ ತಯಾರಿಸಬೇಕು.

ನಿಗದಿತ ದಿನದಂದು ಗುರುತಿಸಿದ ಸಾಧಕರನ್ನು ಭೇಟಿ ಮಾಡಿ ಸಂದರ್ಶನದ ಮೂಲಕ ಮಾಹಿತಿಗಳನ್ನು ಸಂಗ್ರಹಿಸುವುದು. ಈ ಸಂದರ್ಭದಲ್ಲಿ ವಿಡಿಯೋ ಚಿತ್ರೀಕರಣ ಹಾಗೂ ಫೋಟೋಗಳನ್ನು ತೆಗೆದುಕೊಳ್ಳುವುದು ಸಂಗ್ರಹಿಸಿದ ಮಾಹಿತಿಗಳನ್ನು ಬಳಸಿಕೊಂಡು ವ್ಯಕ್ತಿಚಿತ್ರ ಬರೆಯುವುದು. ತರಗತಿಯಲ್ಲಿ ಮಂಡಿಸುವುದು. ಚೆನ್ನಾಗಿ ಬರೆದ ವಿದ್ಯಾರ್ಥಿಗಳನ್ನು ಅಭಿನಂದಿಸುವುದು. ಆ ಬರಹಗಳನ್ನು ಶಾಲಾ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸುವುದು. ಅದೇ ರೀತಿ ಶಾಲಾ ಬ್ಲಾಗ್ ನಲ್ಲಿ ಬರಹದ ಜೊತೆಗೆ ಫೋಟೋಗಳು ಹಾಗೂ ವಿಡಿಯೋ ಕ್ಲಿಪ್ಪಿಂಗ್ ಗಳನ್ನು ಅಪ್ಲೋಡ್ ಮಾಡುವುದು. ಇದಕ್ಕಾಗಿ ಶಾಲೆಯ ಲಿಟ್ಲ್ ಕೈಟ್ ವಿದ್ಯಾರ್ಥಿಗಳ ನೆರವು ಪಡೆದುಕೊಳ್ಳಬಹುದು.

## ವ್ಯಕ್ತಿ ಚಿತ್ರ ಹೀಗೂ ಬರೆಯಬಹುದು

ಕೃಷಿ ಒಂದು ಬಗೆಯ ಆಧ್ಯಾತ್ಮವಾಗುವುದು. ಭೂಮಿಯನ್ನು ಅನುಭವಿಸಿದಾಗ ಮಾತ್ರ ಕೃಷಿಕ ನಿಜವಾದ ಅರ್ಥದಲ್ಲಿ ಮಣ್ಣಿನಲ್ಲಿ ಒಳಗೊಂಡಾಗ ಮಾತ್ರ ಇಂಥ ಆಧ್ಯಾತ್ಮ ಸಾಧ್ಯವಾಗುತ್ತದೆ. ಈ ರೀತಿ ಭೂಮಿ ಕೃಷಿ, ಕೃಷಿಕ ತದಾತ್ಮ್ಯವನ್ನು ಸಾಧಿಸಿದ ಪ್ರಗತಿಪರ ಕೃಷಿಕ ಡಾ.ಲಿವಿಂಗ್ ಸ್ಟನ್ ಚಂದ್ರಮೋಹನ ಸೋನ್ಸ್.

ಮೂಡಬಿದ್ರೆಯಿಂದ ಕಾರ್ಕಳ ರಸ್ತೆಯಲ್ಲಿ ಮೂಡಬಿದ್ರೆಯಿಂದ ಐದು ಕಿಲೋಮೀಟರ್ ದೂರದಲ್ಲಿ ಸರಿಸುಮಾರು 60 ಎಕರೆ ಜಾಗದಲ್ಲಿ ಕೃಷಿ ಪ್ರೇಮಿಗಳನ್ನು ಆಕರ್ಷಿಸುವ ಕೃಷಿ ಪ್ರವಾಸೀ ತಾಣ ಸೋನ್ಸ್ ಫಾರ್ಮ್ ನೆಲೆಗೊಂಡಿದೆ. ಇದರ ರೂವಾರಿ ಡಾ.ಎಲ್.ಸಿ.ಸೋನ್ಸ್. ಕೃಷಿ ಜಾಗವನ್ನೂ ಪ್ರವಾಸೋದ್ಯಮ ತಾಣವನ್ನಾಗಿಸಬಹುದು ಎಂಬುದನ್ನು ತೋರಿಸಿಕೊಟ್ಟವರು. ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಅಮೆರಿಕದ ಹವಾಯಿ ವಿಶ್ವವಿದ್ಯಾನಿಲಯದಿಂದ ಪಿ ಎಚ್ ಡಿ ಪದವಿಯನ್ನು ಪಡೆದ ಸೋನ್ಸರು ತಾವು ಪಡೆದ ಜ್ಞಾನವನ್ನು ಭೂಮಿತಾಯಿಯ ಮಡಿಲಿಗೆ ಸುರಿದು ಬಂಗಾರ ಬೆಳೆದರು. ಉಳಿದ ಕೃಷಿಕರಿಗೆ ಮಾದರಿಯಾದರು.

ಮೂಲತಃ ಕೃಷಿಕುಟುಂಬದ ಹಿನ್ನಲೆಯಿಂದ ಬಂದವರಾದ ಸೋನ್ಸರು ಎಳವೆಯಿಂದಲೇ ಹಿರಿಯರ ಕೃಷಿ ಚಟುವಟಿಕೆಗಳು ಕೃಷಿಯ ಕುರಿತು ಒಲವನ್ನು ಬೆಳೆಸಿತು. ಕೃಷಿಪ್ರಯೋಗಗಳಿಗೆ ಒಡ್ಡಿಕೊಂಡ ಸಂಶೋಧಕ ಕೃಷಿಕ ಸೋನ್ಸರು ಕರಾವಳಿಯ ಮಣ್ಣಿಗೆ ಹೊಸತಾದ ವಿದೇಶೀ ಹಣ್ಣುಗಳನ್ನು ಬೆಳೆದರು.ಯಂತ್ರಾವಿಷ್ಕಾರಗಳನ್ನು ಬಳಕೆಗೆ ತಂದರು. ಆಧುನಿಕತೆಯೊಂದಿಗೆ ಸಾಂಪ್ರದಾಯಿಕ, ಸಾವಯವ ಕೃಷಿ ಪದ್ದತಿ ಅವರದು. ಮಣ್ಣನ್ನು ಅರಿಯುವ ಆ ಮೂಲಕ ಬೆಳೆಯುವ ಮನಸ್ಸು ಅವರದ್ದು. ಹಾಗಾಗಿಯೇ ಭೂಮಿಯೊಂದಿಗಿನ ಅಧ್ಯಾತ್ಮ ಅವರಿಗೆ ಸಾಧ್ಯವಾಗಿದೆ. ಭೂಮಿಯ ಅಂತರಂಗದ ಕಂಪನಗಳನ್ನು ಅರಿಯುವಲ್ಲಿ ಅವರು ಸಮರ್ಥರು.

ಹಾಗಾಗಿ ಅವರು ಉತ್ತಮ ಜಲಶೋಧಕರೂ ಆಗಿದ್ದಾರೆ. ಅವರ ತೋಟದಲ್ಲಿ ಇಲ್ಲದ ಬೆಳೆಯಿಲ್ಲ ಬೆಳೆಸದ ಹಣ್ಣುಗಳಿಲ್ಲ. ಬೆಳೆಗಳ ಮೌಲ್ಯವರ್ಧನೆಯಲ್ಲಿಯೂ ಅವರು ಪರಿಣತರು. ವಿದೇಶೀ ಹಣ್ಣುಗಳಾದ ರಂಬುಟಾನ್, ಮ್ಯಾಂಗೋಸ್ಟೀನ್‌ನಂಥಹ ವಿದೇಶೀ ಹಣ್ಣುಗಳನ್ನು ಈ ನೆಲದಲ್ಲಿ ಸಾಧ್ಯವಾಗಿಸಿದವರು. ಅವರ ತೋಟದ ಅನನಾಸು ಅದರ ರುಚಿ ಬಹು ಪ್ರಸಿದ್ಧ.

ಸೋನ್ಸ್ ಫಾರ್ಮ್ ಕೃಷಿ ಆಸಕ್ತರಿಗೆ, ಕೃಷಿ ವಿಜ್ಞಾನದ ವಿದ್ಯಾರ್ಥಿಗಳಿಗೆ, ಸಹಜ ಕುತೂಹಲದಿಂದ ಆಗಮಿಸುವ ಪ್ರವಾಸಿಗರಿಗೆ ಕೃಷಿ ಜ್ಞಾನದ ಆಗರವೇ ಆಗಿದೆ. ಅಲ್ಲಿನ ತೋಟವನ್ನಿಡೀ ಸುತ್ತಾಡಲು ಅವಕಾಶವಿದೆ. ಪ್ರತಿಗಿಡಗಳ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಿದೆ. ಕೃಷಿ ಮ್ಯೂಸಿಯಂ ಕೂಡ ಅಲ್ಲಿ ರೂಪುದಳೆಯುತ್ತಿದೆ. ಹೀಗೆ ಕೃಷಿಭೂಮಿಯನ್ನು ಪ್ರವಾಸೀತಾಣವನ್ನಾಗಿ ವ್ಯವಸ್ಥಿತವಾಗಿ ರೂಪಿಸಿದ ಹೆಚ್ಚುಗಾರಿಕೆ ಸೋನ್ಸರದ್ದು. ಸಮಾಜಮುಖಿ ಕೆಲಸಗಳಲ್ಲಿಯೂ ಸಕ್ರಿಯರಾಗಿರುವ ಅವರು ಕಡಲಕೆರೆಯೆಂಬ ಹೂಳು ತುಂಬಿ ಮೈದಾನವಾಗಿದ್ದ ಪ್ರಾಚೀನ ಕೆರೆಯ ಪುನರುಜ್ಜೀವನಕ್ಕೆ ಕಾರಣರಾದರು. ಆ ತಾಣವು ಕೂಡ ಈಗ ಬಿದಿರ ಉದ್ಯಾನ,ದೋಣಿವಿಹಾರ,ಮಕ್ಕಳ ಆಟದ ತಾಣ ಹೀಗೆ ಪ್ರವಾಸೀ ತಾಣವಾಗಿದೆ.

ಸೋನ್ಸರ ಪರಿಸರ ಪ್ರೀತಿ,ಕೃಷಿಗೆ ನೀಡಿದ ಕೊಡುಗೆಗಳಿಗೆ ಕರ್ಣಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ, ಬೇರೆ ಬೇರೆ ಸಂಘಸಂಸ್ಥೆಗಳು ಕೊಡಮಾಡಿದ ಪರಿಸರ ಪ್ರಶಸ್ತಿ, ಉದ್ಯಾನರತ್ನ ಪ್ರಶಸ್ತಿ, ಉತ್ತಮ ಕೃಷಿಕ ಪ್ರಶಸ್ತಿ, ಅಮೇರಿಕಾದ ಮೊಂಟಾನ ವಿಶ್ವವಿದ್ಯಾಲಯದ ಗೌರವಾನ್ವಿತ ಹಳೆವಿದ್ಯಾರ್ಥಿ ಪ್ರಶಸ್ತಿ ಮುಂತಾದ ಗೌರವಗಳು ಸಂದಿವೆ.

'ರೈತನಿಗೆ ಬೇರೆಯವರಿಗಿಂತ ಇರುವ ಬಹುದೊಡ್ಡ ಸುಖವೆಂದರೆ ಆತ ಒಳ್ಳೆಯ ಪರಿಸರ, ಒಳ್ಳೆಯ ನಿರ್ಧಾರದೊಂದಿಗೆ ಸ್ವತಂತ್ರವಾಗಿ ಬದುಕಬಹುದು ಎಂಬುದು. ಅಲ್ಲಿ ಅವನೇ ಯಜಮಾನ.ಅವನೇ ದುಡಿಯುವವ. ಆದರೆ ರೈತ ಖುಶಿಯಿಂದ ಇರಬೇಕಾದರೆ ಕೃಷಿಕ ಯಾವತ್ತೂ ಏಕಬೆಳೆಯನ್ನು ನಂಬಿಕೊಳ್ಳಬಾರದು. ವೈವಿಧ್ಯತೆ ಬೇಕು. ಉಪಬೆಳೆ, ಅಂತರಬೆಳೆಗಳು ಬೇಕು' ಎಂಬುದು ಸೋನ್ಸರ ನಿಲುವು. ಅದರಂತೆ ಬದುಕಿದ ಅವರು ರೈತನ ಹಿತಾಸಕ್ತಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಹಾಗೂ ದುಡಿದ ಡಾ.ಎಲ್.ಸಿ.ಸೋನ್ಸ್ ಹಸಿರ ಹಾದಿಯ ಬೆಳಕು.

**ಕೃಪೆ: ಡಾ.ನರೇಂದ್ರ ರೈ ದೇರ್ಲರ**

**ಸೋನ್ಸ್ ಫಾರ್ಮ್ ಡಾ.ಎಲ್.ಸಿ.ಸೋನ್ಸ್ ಬಿತ್ತಿದ ಫಲಪ್ರಪಂಚ ಪುಸ್ತಕ**

- **ಪ್ರಬಂಧ ಬರೆಯುವುದು**

ವಿದ್ಯಾರ್ಥಿಗಳು ಕೃಷಿ ಅಂದು ಇಂದು ಎಂಬ ವಿಚಾರವಾಗಿ ಚರ್ಚಿಸಲಿ. ಬಳಿಕ ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಪ್ರಬಂಧವನ್ನು ತಯಾರಿಸಲಿ. ಬಿಟ್ಟು ಹೋದ ಅಂಶಗಳಿದ್ದಲ್ಲಿ ಅಧ್ಯಾಪಕರ ನೆರವಿನೊಂದಿಗೆ ಪುನಃ ಪರಿಷ್ಕರಿಸಿ ಬರೆಯಲಿ. ಉತ್ತಮವಾಗಿ ಪ್ರಬಂಧ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

**ಪ್ರಬಂಧವನ್ನು ಹೀಗೂ ಬರೆಯಬಹುದು.**

## ಕೃಷಿ ಆಹಾರ ಸ್ವಾವಲಂಬನೆ

ಅನಾದಿಕಾಲದಿಂದಲೂ ಮಾನವನು ತನ್ನ ಅಸ್ತಿತ್ವಕ್ಕಾಗಿ ಪ್ರಕೃತಿಯಲ್ಲಿ ಸಿಗುವ ಆಹಾರ ವಸ್ತುಗಳನ್ನು ಸೇವಿಸುತ್ತಾ ಬಂದನು. ಬರ ಬರುತ್ತಾ ಜನಸಂಖ್ಯೆ ಹೆಚ್ಚಾದಂತೆ ಆಹಾರ ವಸ್ತುಗಳ ಕೊರತೆ ಉಂಟಾಗತೊಡಗಿತು. ಇದನ್ನು ನಿವಾರಿಸಲು ಮಾನವನು ಸ್ವತಹ ಆಹಾರದ ಬೆಳೆಗಳನ್ನು ಬೆಳೆಸಲು ಆರಂಭಿಸಿದನು. ಇಲ್ಲಿಂದ ಕೃಷಿ ಜೀವನ ಆರಂಭವಾಯಿತು. ಇಂದು ಕೃಷಿ ಇಲ್ಲದಿದ್ದರೆ ಮನುಷ್ಯ ಜೀವನವೇ ನಡೆಯಲಾರದು ಎನ್ನುವಷ್ಟರ ಮಟ್ಟಿಗೆ ಕೃಷಿಯು ನಮ್ಮ ಬದುಕಿಗೆ ಅನಿವಾರ್ಯವಾಗಿದೆ. ಮಾನವನು ಇಂದು ನಾನಾ ರೀತಿಯ ಆಹಾರದ ಬೆಳೆಗಳನ್ನು ಬೆಳೆಸಿ ಜೀವನವನ್ನು ಸಾಗಿಸುತ್ತಿದ್ದಾನೆ. ನಿರ್ದಿಷ್ಟ ಭೂಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಆಹಾರದಬೆಳೆಗಳು ಇಂದು ಸಾರ್ವತ್ರಿಕರಣಗೊಂಡಿವೆ ಎಂದರೆ ಕೃಷಿಯ ಪ್ರಾಧಾನ್ಯವೆಷ್ಟು ಎಂಬುದನ್ನು ಅರ್ಥೈಸಿಕೊಳ್ಳಬಹುದು.

ಕೃಷಿಯಲ್ಲಿ ವಾಣಿಜ್ಯ ಬೆಳೆ ಆಹಾರ ಬೆಳೆ ಎಂದು ಎರಡು ವಿಧ. ರಬ್ಬರ್, ಹತ್ತಿ, ಸೆಣಬು ಮುಂತಾದವು ವಾಣಿಜ್ಯ ಬೆಳೆಗಳಾದರೆ ಭತ್ತ, ರಾಗಿ, ಗೋಧಿ, ಹಣ್ಣುಗಳು ಆಹಾರ ಬೆಳೆಗಳಾಗಿವೆ. ನಮ್ಮ ದೇಶದಲ್ಲಿ ಎರಡು ರೀತಿಯ ಬೆಳೆಗಳನ್ನು ಬೆಳೆಸುತ್ತಾರೆ. 20ನೆಯ ಶತಮಾನದ ಪೂರ್ವಾರ್ಧದಲ್ಲಿ ನಮ್ಮ ದೇಶವು ತೀವ್ರವಾದ ಆಹಾರ ಕೊರತೆಯನ್ನು ಅನುಭವಿಸುತ್ತಿತ್ತು. ಹೀಗಾಗಿ ವಿದೇಶಗಳಿಂದ ಆಹಾರ ವಸ್ತುಗಳನ್ನು ಆಮದು ಮಾಡಬೇಕಾದ ಪರಿಸ್ಥಿತಿ ಒದಗಿಬಂದಿತ್ತು. 1960ರ ಬಳಿಕ ಹಸಿರು ಕ್ರಾಂತಿ ಜಾರಿಗೆ ಬಂದು ಆಹಾರ ಉತ್ಪಾದನೆಯಲ್ಲಿ ಏರುಗತಿ ಉಂಟಾಯಿತು. ಇಂದು ನಾವು ನಮಗೆ ಬೇಕಾದುದಕ್ಕಿಂತಲೂ ಹೆಚ್ಚು ಆಹಾರ ವಸ್ತುಗಳನ್ನು ಬೆಳೆಸಿ ವಿದೇಶಗಳಿಗೆ ರಫ್ತು ಕೂಡ ಮಾಡುತ್ತಿದ್ದೇವೆ.

ನಮ್ಮ ಹೊಟ್ಟೆ ಹೊರೆಯಲು ಬೇರೊಬ್ಬರ ಬಳಿ ಭಿಕ್ಷೆ ಎತ್ತುವುದು ಎಷ್ಟು ಸರಿ ಎಂಬುದನ್ನು ಚಿಂತಿಸಿದಾಗ ಆಹಾರ ಸ್ವಾವಲಂಬನೆಯ ಅಗತ್ಯದ ಅರಿವಾಗುತ್ತದೆ. ನಾವು ಆಮದು ಮಾಡಿಕೊಳ್ಳುವ ಆಹಾರ ವಸ್ತುಗಳ ಗುಣಮಟ್ಟ ಉತ್ತಮವಾಗಿ ಇರಬೇಕೆಂದಿಲ್ಲ. 'ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು' ಎಂಬ ಮಾತಿನಂತೆ ಎಲ್ಲಾ ಅವಕಾಶಗಳಿದ್ದು ಸ್ವತಹ ಕೃಷಿ ಮಾಡದೆ ಅನ್ಯ ದೇಶಗಳನ್ನು ಅವಲಂಬಿಸಿದರೆ ನಮ್ಮ ಸಂಪತ್ತೆಲ್ಲ ಕರಗಿ ಹೋಗಿ ನಾವು ಮತ್ತಷ್ಟು ಪರಾವಲಂಬಿಗಳಾಗುತ್ತೇವೆ. ನಮ್ಮಲ್ಲಿ ಮಣ್ಣು ನೀರು ಹವಾಗುಣ ಎಲ್ಲವೂ ಕೃಷಿಗೆ ಅನುಕೂಲಕರವಾಗಿರುವಾಗ ಶ್ರಮ ಪಟ್ಟರೆ ನಮ್ಮ ಆಹಾರವನ್ನು ನಾವೇ ಸಂಪಾದಿಸಬಹುದಲ್ಲವೇ? ಆಗ ಆಹಾರಕ್ಕಾಗಿ ಪರದೇಶಗಳ ಮುಂದೆ ಕೈಚಾಚಬೇಕಾದದ್ದಿಲ್ಲ.

ಒಂದು ದೇಶವು ಸುಧೃಢವಾಗಿ ಅಭಿವೃದ್ಧಿ ಹೊಂದಬೇಕಾದರೆ ಮೊದಲು ಆಹಾರ ಸ್ವಾವಲಂಬನೆಯನ್ನು ಸಾಧಿಸಬೇಕು. ಅದಕ್ಕಾಗಿ ಬೈವಿಧ್ಯಮಯವಾದ ಆಹಾರದ ಬೆಳೆಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕು. ಅಧಿಕ ಇಳುವರಿ ಕೊಡುವ ತಳಿಗಳನ್ನು ಬೆಳೆಸಬೇಕು. ವೈಜ್ಞಾನಿಕ ರೀತಿಯಲ್ಲಿ ಸ್ಥಾವಯವ ಕೃಷಿ ಪದ್ಧತಿಯ ಮೂಲಕ ಆಹಾರ ವಸ್ತುಗಳನ್ನು ಉತ್ಪಾದಿಸಬೇಕು. ಪ್ರತಿ ಮನೆಯಲ್ಲಿಯೂ ಕೈತೋಟಗಳನ್ನು ತಾರಸಿ ಕೃಷಿಯನ್ನು ಮಾಡಬೇಕು. ಕೃಷಿ ಪ್ರದೇಶಗಳಲ್ಲಿ ಕಟ್ಟಡ ಕಟ್ಟುವುದನ್ನು ನಿಲ್ಲಿಸಬೇಕು. ಕೃಷಿಗೆ ಸರಕಾರವು ಸರ್ವ ರೀತಿಯ ನೆರವುಗಳನ್ನು ನೀಡಬೇಕು. ಪ್ರತಿಕುಟುಂಬವು ಆಹಾರದಲ್ಲಿ ಸ್ವಾವಲಂಬಿಯಾದಾಗ ದೇಶವು ಸುಭೀಕ್ಷ ವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

* * *

ಘಟಕ 5

# ಮಾನವೀಯತೆಯ ಸೆಲೆ

## ಮುನ್ನುಡಿ

ಮಾನವನು ಸಂಘ ಜೀವಿ. ಸಮಾಜದಲ್ಲಿ ಬಾಳಬೇಕಾದ ಮಾನವನು ತನ್ನ ಕುಟುಂಬದವರೊಂದಿಗೆ, ಬಂಧುಬಾಂಧವರೊಂದಿಗೆ ಪ್ರೀತಿಯಿಂದ ಅನ್ಯೋನ್ಯತೆಯಿಂದ ಬಾಳಬೇಕು. ಸಮಾಜದ ಜನರೊಂದಿಗೆ ಸೌಹಾರ್ದತೆಯಿಂದ, ಸಹಕಾರ ಮನೋಭಾವದಿಂದ ಬದುಕಬೇಕು. ಸಮಾಜದಲ್ಲಿ ನೆಮ್ಮದಿಯಿಂದ ಬದುಕಬೇಕಾದರೆ ಮಾನವನು ಪ್ರೀತಿ, ಕರುಣೆ, ತ್ಯಾಗ, ಶಾಂತಿ, ವಿಶ್ವಾಸ, ಕ್ಷಮೆ ಮೊದಲಾದ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಬೇಕು. ಈ ರೀತಿ ಮಾನವೀಯ ಗುಣಗಳನ್ನು ರೂಢಿಸಿಕೊಂಡ ವ್ಯಕ್ತಿಯೇ ಸಮಾಜದ ಆಸ್ತಿ.

"ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಯೆ

ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ಎಲ್ಲರೊಳಗೊಂದಾಗು ಮಂಕುತಿಮ್ಮ"

ಎಂಬ ಡಿವಿಜಿಯವರ ವಾಣಿಯಂತೆ ನಾವು ಸ್ವಾರ್ಥರಹಿತರಾಗಿ ಎಲ್ಲರೊಳಗೆ ಒಂದಾಗಿ ಬಾಳಬೇಕು. 'ನಮ್ಮ ಹಾಗೆ ಇತರರು' ಎಂದು ತಿಳಿದು ವ್ಯವಹರಿಸುವುದು ಉತ್ತಮ ನಾಗರಿಕನ ಕರ್ತವ್ಯವಾಗಿದೆ. ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ಎಲ್ಲರೂ ನೆಮ್ಮದಿಯಿಂದ ಬದುಕುವ ವಾತಾವರಣವನ್ನು ಸೃಷ್ಟಿಸಬೇಕು. ಗುರು ಹಿರಿಯರನ್ನು ಗೌರವಿಸಬೇಕು. ಕಿರಿಯರನ್ನು ಪ್ರೀತಿ ವಾತ್ಸಲ್ಯದಿಂದ ಕಾಣಬೇಕು. ಸಮಾಜಕ್ಕೆ ಕಂಟಕವಾಗುವ ಯಾವ ಕಾರ್ಯಗಳಲ್ಲಿಯೂ ನಾವು ಪಾಲ್ಗೊಳ್ಳಬಾರದು. ಮದ್ಯಪಾನ, ಮಾದಕ ದ್ರವ್ಯ ಸೇವನೆಯಂತಹ ದುಶ್ಚಟಗಳಿಂದ ನಾವು ದೂರವಿರಬೇಕು. ಪ್ರತಿಯೊಬ್ಬರೂ ನಾಗರಿಕ ಪ್ರಜ್ಞೆಯನ್ನು ಬೆಳೆಸಿಕೊಂಡರೆ ಶಾಂತಿ ಸಮಾಧಾನ, ನೆಮ್ಮದಿಗಳಿಂದ ಕೂಡಿರುವ ಸಮಾಜದ ನಿರ್ಮಾಣ ಸಾಧ್ಯ. ಪ್ರತಿಯೊಬ್ಬ ಪ್ರಜೆಯು ಸುಭದ್ರವಾದ ಸಮಾಜದ ನಿರ್ಮಾಣಕ್ಕೆ ಕಟಿಬದ್ಧರಾಗಬೇಕು.

ಈ ಉದ್ದೇಶದಿಂದ 'ಮಾನವೀಯತೆಯ ಸೆಲೆ' ಎಂಬ ಘಟಕವನ್ನು ಈ ಪಾಠ ಪುಸ್ತಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಘಟಕದಲ್ಲಿ ರತ್ನಾಕರವರ್ಣಿಯ 'ಅಂತರಂಗವ ಕಾಂಬರಾರು' ಎಂಬ ಕಾವ್ಯ ಭಾಗವನ್ನು ಎಚ್ ದುಂಡಿರಾಜರ 'ದಾರಿ ಯಾವುದಯ್ಯಾ' ಎಂಬ ಲಲಿತ ಪ್ರಬಂಧವನ್ನು ಹಾಗೂ ಲೀಲಾ ಮಣ್ಣಾಲರು ಬರೆದ, 'ಮುನ್ನಡೆಸು ಬೆಳಕಿನೆಡೆಗೆ' ಎಂಬ ಐತಿಹಾಸಿಕ ನಾಟಕವನ್ನು ನೀಡಲಾಗಿದೆ.

ಎಸ್ ಷಡಕ್ಷರಿ ಅವರು ಬರೆದ 'ಬದುಕು ಸಾರ್ಥಕ ಎನಿಸುವುದು ಯಾವಾಗ?' ಎಂಬ ಅಂಕಣ ಬರಹವನ್ನು ಪ್ರವೇಶ ಚಟುವಟಿಕೆಯಾಗಿ ಇಲ್ಲಿ ನೀಡಲಾಗಿದೆ. ಇದು ಡಾ. ಎಪಿಜೆ ಅಬ್ದುಲ್ ಕಲಾಮರ ಜೀವನದ ಒಂದು ಅನುಭವವಾಗಿದೆ. ಅವರ ಬದುಕು ಸಾರ್ಥಕ ಎಂದು ಅನಿಸಿದ ಕ್ಷಣದ ಬಗ್ಗೆ ಅವರು ಹೇಳಿಕೊಂಡಿದ್ದಾರೆ. ಯಾವ ಪ್ರಶಸ್ತಿ ಗೌರವಗಳಿಂದಲೂ

ಸಿಗದ ಆನಂದ ಮತ್ತೊಬ್ಬರ ಕಷ್ಟವನ್ನು ನಿವಾರಣೆ ಮಾಡಿದ ಕ್ಷಣದಲ್ಲಿ ದೊರಕುತ್ತದೆ ಎಂದು ಈ ಅಂಕಣ ಬರಹದಿಂದ ತಿಳಿದುಕೊಳ್ಳಬಹುದು.

ಘಟಕದ ಮೊದಲ ಪಾಠವಾದ ರತ್ನಾಕರವರ್ಣಿಯ ಭರತೇಶವೈಭವದಿಂದ ಆಯ್ದುಕೊಂಡ 'ಅಂತರಂಗವ ಕಾಂಬರಾರು' ಎಂಬ ಕಾವ್ಯ ಭಾಗದಲ್ಲಿ ಅಣ್ಣನೊಂದಿಗೆ ಯುದ್ಧೋನ್ಮುಖನಾದ ಬಾಹುಬಲಿಯನ್ನು ಯುದ್ಧ ಮಾಡದಂತೆ ತಾಯಿ ಸುನಂದಾದೇವಿ ಮನವೊಲಿಸುವ ಚಿತ್ರಣವಿದೆ. ಕುಟುಂಬವು ಸಮಾಜದ ಒಂದು ಅಂಗ. ಅಣ್ಣ ತಮ್ಮಂದಿರು ಅನ್ಯೋನ್ಯತೆಯಿಂದ ಬಾಳಬೇಕು. ಕುಟುಂಬದ ಸದಸ್ಯರಲ್ಲಿ ಪರಸ್ಪರ ವೈಮನಸ್ಸು ಉಂಟಾದರೆ ಕುಟುಂಬದ ಸಾಮರಸ್ಯ ಹಾಳಾಗುತ್ತದೆ. ಕುಟುಂಬದ ಹಿರಿಯರು ಕುಟುಂಬದಲ್ಲಿ ಸಾಮರಸ್ಯ ನೆಲೆ ನಿಲ್ಲುವಂತೆ ಮಾಡಬೇಕು ಎಂಬುದನ್ನು ಈ ಕಾವ್ಯ ಭಾಗದಿಂದ ತಿಳಿದುಕೊಳ್ಳಬಹುದು.

ಎರಡನೇ ಪಾಠವಾದ ಎಚ್. ದುಂಡಿ ರಾಜರು ಬರೆದ, 'ದಾರಿ ಯಾವುದಯ್ಯಾ' ಲಲಿತ ಪ್ರಬಂಧವು ದಾರಿ ಹುಡುಕುವ ಸಂದರ್ಭದಲ್ಲಿ ದಾರಿಹೋಕರು ಅನುಭವಿಸುವ ಬವಣೆಗಳನ್ನು ಸ್ವಾರಸ್ಯಕರವಾಗಿ ವಿವರಿಸುತ್ತದೆ. ಸಮಾಜದಲ್ಲಿ ಯಾರಿಗಾದರೂ ಸಹಾಯ ಬೇಕಾಗಿ ಬಂದಾಗ ನಾವು ಅವರಿಗೆ ಸಹಾಯ ಮಾಡಬೇಕು ಎಂಬುದನ್ನು ಈ ಲಲಿತ ಪ್ರಬಂಧವು ನಮಗೆ ಸೂಚಿಸುತ್ತದೆ.

ಮೂರನೇ ಪಾಠವಾದ ಲೀಲಾ ಮಣ್ಣಾಲರು ಬರೆದ, 'ಮುನ್ನಡೆಸು ಬೆಳಕಿನೆಡೆಗೆ' ನಾಟಕದಲ್ಲಿ ಸಿದ್ದಾರ್ಥನ ಲೌಕಿಕ ಸುಖ ಭೋಗಗಳನ್ನೆಲ್ಲ ತ್ಯಜಿಸಿ ಜನರ ನೋವು ಸಂಕಟಗಳಿಗೆ ಪರಿಹಾರವನ್ನು ಹುಡುಕಿಕೊಂಡು ಹೋಗುವ ಸನ್ನಿವೇಶದ ಚಿತ್ರಣವಿದೆ. ಒಟ್ಟಿನಲ್ಲಿ ವಿದ್ಯಾರ್ಥಿಗಳು ನಾಗರಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ಉತ್ತಮ ನಾಗರಿಕರಾಗಿ ಬಾಳ ಬೇಕೆಂಬ ಆಶಯ ಈ ಘಟಕದಲ್ಲಿದೆ.

## ಸಿಲೆಬಸ್ ಗ್ರಿಡ್

| | | |
|---|---|---|
| ವಿಷಯ | : | **ಮುಂದುವರಿದ ಪಠ್ಯ** |
| ತರಗತಿ | : | **9** |
| ಸಮಯ | : | **25 ಪಿರೀಡುಗಳು** |
| ಘಟಕದ ಹೆಸರು | : | **ಮಾನವೀಯತೆಯ ಸೆಲೆ** |
| ಆಶಯ | : | |

**ಉಪ ಆಶಯಗಳು :**

- ...............
- ...............
- ...............

**ಸಾಹಿತ್ಯ ಪ್ರಕಾರಗಳು**

- ...............
- ...............
- ...............

**ಕಲಿಕಾ ಉದ್ದೇಶಗಳು:**

- ...............
- ...............

<table>
<tr><th rowspan="2">ಪಾಠದ ಹೆಸರು</th><th colspan="3">ಕಲಿಕಾ ಉದ್ದೇಶಗಳು</th><th rowspan="2">ಭಾಷಾ ಸತ್ಯಾಂಶಗಳು</th><th rowspan="2">ಭಾಷಾ ವ್ಯವಹಾರ ರೂಪಗಳು</th><th rowspan="2">ಕಲಿಕೋಪಕರಣಗಳು</th><th rowspan="2">ಮೌಲ್ಯಮಾಪನ</th></tr>
<tr><th>ಆಶಯ / ತಿಳುವಳಿಕೆಗಳು</th><th>ಭಾಷಾ ಸಾಮರ್ಥ್ಯಗಳು</th><th>ಮೌಲ್ಯಗಳು/ ಮನೋಭಾವಗಳು.</th></tr>
<tr><td>1. ಅಂತರಂಗವ ಕಾಂಬರಾರು<br>2. ದಾರಿ ಯಾವುದಯ್ಯಾ<br>3. ಮುನ್ನಡೆಸು ಬೆಳಕಿನೆಡೆಗೆ</td><td>● ಕೃಷಿ ಒಂದು ಉದ್ಯೋಗ ಮಾತ್ರವಲ್ಲ, ಅದು ಜನರ ಜೀವನದ ಸಾಂಸ್ಕೃತಿಕ ಭಾಗವಾಗಿದೆ.<br>● ಕೃಷಿ ವಲಯದಲ್ಲಿ ಅನೇಕ ಪಲ್ಲಟಗಳಿವೆ (ಯಾಂತ್ರೀಕರಣ, ವಾಣಿಜ್ಯೀಕರಣ ಇತ್ಯಾದಿ)<br>● ದೇಶದ ಆಹಾರ ಭದ್ರತೆಗೆ ಕೃಷಿ ವಲಯವನ್ನು ಪ್ರೋತ್ಸಾಹಿಸ ಬೇಕಾಗಿದೆ.<br>● ಕೃಷಿಯು ಒಂದು ಉತ್ತಮ ಉದ್ಯೋಗ ಮಾದರಿ.<br>● ಕೃಷಿಕರಿಗೆ ಸಂಬಂಧಿಸಿದ ಅನೇಕ ಕತೆ, ಕವನ, ಲೇಖನಗಳಿವೆ.</td><td>● ಕತೆ ಕಾದಂಬರಿಗಳನ್ನು ಓದಿ ಅವುಗಳ ಕುರಿತಾದ ಅನಿಸಿಕೆ, ಕರಪತ್ರ, ವಿಶ್ಲೇಷಣೆ , ಚಿತ್ರಕತೆ, ಲೇಖನ, ಭಾಷಣ , ಪತ್ರಿಕಾ ವರದಿ, ಓದುಗರ ಓಲೆ, ವ್ಯಕ್ತಿಚಿತ್ರಗಳ ಮೂಲಕ ಮಂಡಿಸುವ ಸಾಮರ್ಥ್ಯ ಪಡೆಯುವುದು.</td><td>● ಕೃಷಿಯ ಕುರಿತಾದ ಕೀಳರಿಮೆಯನ್ನು ದೂರ ಮಾಡುವುದು.<br>● ಕೃಷಿ ಕೆಲಸದಲ್ಲಿ ಆಸಕ್ತಿ ತಾಳುವುದು.<br>● ಕೃಷಿ ಹಾಗೂ ಕೃಷಿಕರ ಕುರಿತು ತಿಳಿದುಕೊಳ್ಳುವ ಮನೋಭಾವಗಳನ್ನು ಬೆಳೆಸುವುದು.</td><td>● ಸವರ್ಣ ದೀರ್ಘ ಸಂಧಿ, ಪ್ರಾಸ ಪದ, ದ್ವಿರುಕ್ತಿ ಪದ, ದ್ವಂದ್ವ ಸಮಾಸ</td><td>● ಆಶಯ<br>● ಸ್ವಾರಸ್ಯ<br>● ಪ್ರಬಂಧ<br>● ಚಿತ್ರಕತೆ<br>● ಕರಪತ್ರ<br>● ಓದುಗರ ಓಲೆ<br>● ವ್ಯಕ್ತಿ ಚಿತ್ರ<br>● ಪತ್ರಿಕಾ ವರದಿ</td><td>● ICT ಬಳಕೆ<br>● ಆಕರ ಗ್ರಂಥ<br>● ಪತ್ರಿಕ ವರದಿಗಳ ಮಾದರಿ<br>● ಓದುಗರ ಓಲೆಗಳ ಮಾದರಿ</td><td>● ಸ್ವಯಂ, ಪರಸ್ಪರ, ಕರಪತ್ರ ಓದುಗರ ಓಲೆ, ಪ್ರಬಂಧ</td></tr>
</table>

## ಚಟುವಟಿಕೆಗಳು

ಘಟಕದ ಪ್ರವೇಶ ಚಟುವಟಿಕೆಯಾಗಿ ನೀಡಿರುವ ಅಂಕಣ ಬರಹವನ್ನು ಮಕ್ಕಳು ಓದಲಿ ಅನಂತರ ಮಕ್ಕಳು ಸ್ವಂತ ಅಭಿಪ್ರಾಯವನ್ನು ಬರೆದು ಮಂಡಿಸಲಿ.

## ಅಂತರಂಗವ ಕಾಂಬರಾರು

- **ಕಾವ್ಯವನ್ನು ಓದುವುದು/ ಹಾಡುವುದು**

ಕಥಾ ಸಂದರ್ಭವನ್ನೂ ಕಾವ್ಯ ಭಾಗವನ್ನೂ ವಿದ್ಯಾರ್ಥಿಗಳು ಮೌನವಾಗಿ ಓದಲಿ. ನಿರ್ದಿಷ್ಟ ಸಮಯದ ಬಳಿಕ ವಿದ್ಯಾರ್ಥಿಗಳು ಗಟ್ಟಿಯಾಗಿ ಓದಲಿ. ತಪ್ಪಿದಲ್ಲಿ ಅಧ್ಯಾಪಕರು ಸರಿ ಮಾಡುವುದು. ಹಾಡುವ ವಿದ್ಯಾರ್ಥಿಗಳು ಇದ್ದರೆ ಅವಕಾಶ ನೀಡುವುದು. ಉತ್ತಮವಾಗಿ ಹಾಡಿದವರನ್ನು ಅಭಿನಂದಿಸುವುದು. ಸಾಂಗತ್ಯವನ್ನು ಹಾಡುವ ವಿಧಾನವನ್ನು ಅರಿತುಕೊಳ್ಳುವುದು. ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಹಾಡಿಸುವುದು ಅಥವಾ ಐ ಸಿ ಟಿ ಬಳಸಿ ಕೇಳಿಸುವುದು.

- **ಪದವಿಂಗಡಿಸಿ ಬರೆಯುವುದು**

ಕರಿ ಹಲಗೆಯಲ್ಲಿ ಪದಗಳನ್ನು ಬರೆಯುವುದು. ಅವುಗಳ ಅರ್ಥ ಕೆಡದಂತೆ ವಿಂಗಡಿಸಲು ವಿದ್ಯಾರ್ಥಿಗಳಲ್ಲಿ ಹೇಳುವುದು. ವಿದ್ಯಾರ್ಥಿಗಳು ವಿಂಗಡಣೆ ಮಾಡಿದ್ದು ಸರಿಯಾಗಿದೆಯಾ ಎಂದು ಪರಿಶೀಲಿಸುವುದು. ತಪ್ಪಿದ್ದಲ್ಲಿ ಯಾಕೆ ತಪ್ಪಿದೆ ಎಂದು ತಿಳಿಸಿ ಸರಿಪಡಿಸುವುದು. ಪುಸ್ತಕದಲ್ಲಿ ಮಾದರಿಯಾಗಿ ಕೊಟ್ಟಿರುವ ಪದವಿಂಗಡಣೆಯನ್ನು ಗಮನಿಸುವುದು ಅದೇ ರೀತಿ ಉಳಿದವುಗಳನ್ನು ವಿಂಗಡಿಸುವುದು.

- ಕಾಣಿಸದಂಗಜ - ಕಾಣಿಸದೆ + ಅಂಗಜ
- ಸುಜನರಾರಿದ - ಸುಜನರು + ಆರು + ಇದ
- ಬೆಣ್ಣೆವಾಲೂಡಿ - ಬೆಣ್ಣೆ + ಪಾಲು + ಊಡಿ
- ನಮ್ಮೆಲ್ಲರರ್ತಿಯ - ನಮ್ಮೆಲ್ಲರ + ಅರ್ತಿಯ
- ಪಿಡಿದಲುಗಿದಳು - ಪಿಡಿದು + ಅಲುಗಿದಳು
- ಮೆಲ್ಲಡಿಗೆರಗುವೆನೆಂದ - ಮೆಲ್ಲಡಿಗೆ + ಎರಗುವೆನು + ಎಂದ.
- ಕಾಂಬರಾರು - ಕಾಂಬರು + ಆರು
- ಪಡೆದಳಿಗೆರಗಿ - ಪಡೆದಳಿಗೆ + ಎರಗಿ

- **ನವೀನ ಪದಗಳಿಗೆ ಅರ್ಥ ತಿಳಿಯುವುದು**

ಕಾವ್ಯ ಭಾಗವನ್ನು ಪದ ವಿಂಗಡಿಸಿ ಓದಿದ ಬಳಿಕ ವಿದ್ಯಾರ್ಥಿಗಳು ನವೀನ ಪದಗಳನ್ನು ಪಟ್ಟಿ ಮಾಡಲಿ. ಅರ್ಥಕೋಶದ ಸಹಾಯದಿಂದ ಅರ್ಥವನ್ನು ಕಂಡುಕೊಂಡು ಪುಸ್ತಕದಲ್ಲಿ ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕರಿಸುವುದು.

- **ಉತ್ತರಿಸುವುದು**

ಕಾವ್ಯ ಭಾಗದ ಆಶಯವನ್ನು ವಿದ್ಯಾರ್ಥಿಗಳು ಅರ್ಥೈಸಿದ ಬಳಿಕ ಬಾಯ್ದೆರೆಯಾಗಿ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಲಿ. ತಪ್ಪಿದ್ದಲ್ಲಿ ಸರಿಪಡಿಸಿ ಆನಂತರ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

- **ಆದಿಪ್ರಾಸವನ್ನು ಗುರುತಿಸುವುದು**

ವಿದ್ಯಾರ್ಥಿಗಳು ಪಾಠ ಪುಸ್ತಕದಲ್ಲಿ ನೀಡಲಾದ ಕಾವ್ಯ ಭಾಗದಲ್ಲಿ ಅಡಿಗೆರೆ ಹೇಳಿದ ಅಕ್ಷರಗಳನ್ನು ಗುರುತಿಸಲಿ. ಪದ್ಯದ ಪ್ರತಿ ಪಾದದ ಆದಿಯ ಒಂದು ಮತ್ತು ಎರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನ ಬಂದರೆ ಅದನ್ನು ಆದಿಪ್ರಾಸ ಎಂದು ಕರೆಯುತ್ತಾರೆ. ಕಾವ್ಯ ಭಾಗದಲ್ಲಿ ಬಂದಿರುವ ಆದಿಪ್ರಾಸವನ್ನು ಗುರುತಿಸಿ ಮಕ್ಕಳು ಸ್ವತಃ ಬರೆಯಲಿ.

**ಉದಾಹರಣೆ :**

- ಭುಜಬಲಿ
- ಗಜಬಜಿಸಿದೆ
- ಸುಜನರಾರಿದ
- ಕುಜನ ಮಾರ್ಗ

- ಅಣ್ಣನ
- ಬೆಣ್ಣೆವಾಲೂಡಿ
- ತಣ್ಣನೆ
- ಹುಣ್ಣುಮಾಳ್ಪುದು

- **ಸ್ವಾರಸ್ಯ ಬರೆಯುವುದು**

ಪುಸ್ತಕದಲ್ಲಿ ಕೊಟ್ಟ ಸಾಲುಗಳನ್ನು ಕರಿ ಹಲಗೆಯಲ್ಲಿ ಬರೆಯುವುದು. ಸಾಲುಗಳ ಸ್ವಾರಸ್ಯದ ಕುರಿತು ಚರ್ಚೆ ನಡೆಸುವುದು. ಸಾಲುಗಳ ಆಶಯ, ಸ್ವಾರಸ್ಯಕರ ಅಂಶಗಳು, ವಿಶೇಷ ಪದ ಪ್ರಯೋಗಗಳು ಇತ್ಯಾದಿ ವಿಚಾರಗಳು ಚರ್ಚೆಯಲ್ಲಿ ಮೂಡಿಬರಲಿ. ಬಳಿಕ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಸ್ವಾರಸ್ಯವನ್ನು ಬರೆದು ಮಂಡಿಸಲಿ. ಅನಂತರ ತರಗತಿಯಲ್ಲಿ ಚರ್ಚಿಸಿ ಉತ್ತಮಪಡಿಸಿ ಬರೆಯಲಿ.

**ಸ್ವಾರಸ್ಯವನ್ನು ಹೀಗೂ ಬರೆಯಬಹುದಲ್ಲವೇ?**

ರತ್ನಾಕರವರ್ಣಿಯ ಭರತೇಶ ವೈಭವದ 'ಅಂತರಂಗವ ಕಾಂಬರಾರು' ಎಂಬ ಭಾಗದಿಂದ ಆರಿಸಲಾದ ಸಾಲುಗಳಿವು. ಅಣ್ಣನಾದ ಭರತನೊಡನೆ ಯುದ್ಧ ಮಾಡಲು ಸನ್ನದ್ಧನಾದ ಬಾಹುಬಲಿಯನ್ನು ಯುದ್ಧದಿಂದ ವಿಮುಖನನ್ನಾಗಿಸಲು ತಾಯಿ ಸುನಂದಾದೇವಿ ಪ್ರಯತ್ನಿಸುವ ಭಾಗವನ್ನು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಚಿತ್ರಿಸಲಾಗಿದೆ. "ಅಣ್ಣನೊಂದಿಗೆ ಕಾಳಗವನ್ನು ಮಾಡುವುದಕ್ಕಾಗಿ ನಾನು ನಿನ್ನನ್ನು ಬೆಣ್ಣೆ ಹಾಲುಣಿಸಿ ಸಾಕಿದನೆ?" ಎಂದು ಕೇಳುವಲ್ಲಿ ನಾನು ನಿನಗೆ ಚಿಕ್ಕಂದಿನಲ್ಲಿ ಬೆಣ್ಣೆ ಹಾಲು ಮೊದಲಾದ ಪೌಷ್ಟಿಕ ಆಹಾರವನ್ನು ಕೊಟ್ಟು ನೀನು ಮುಂದೆ ಒಳ್ಳೆಯ ಸಾತ್ವಿಕ ಗುಣ ಸಂಪನ್ನ ವ್ಯಕ್ತಿಯಾಗು ಬೆಳೆಸಿದ್ದೇನೆ. ಆದರೆ ನೀನು ಈಗ ಅಣ್ಣನೊಂದಿಗೆ ಕಾಳಗಕ್ಕೆ ಹೊರಟು ನನ್ನ ಮನಸ್ಸಿಗೆ ನೋವುಂಟು ಮಾಡುತ್ತಿದ್ದಿ. ನಮಗೆ ನೆಮ್ಮದಿಯನ್ನು ತಂದುಕೊಡಬೇಕಾದ ನೀನು ನಮ್ಮ ಮನಸ್ಸಿಗೆ ಗಾಯವನ್ನು ಉಂಟು ಮಾಡುವುದು ಸರಿಯೇ? ಎಂದು ಸುನಂದಾದೇವಿ ಮಗನಲ್ಲಿ ಕೇಳುತ್ತಾಳೆ.

ತಮ್ಮನಾದವ ಅಣ್ಣನನ್ನು ಗೌರವಿಸಬೇಕೆಂದೂ ಕುಟುಂಬ ಕಲಹ ಮಾಡಬಾರದೆಂದೂ ಭ್ರಾತೃ ಸ್ನೇಹದಿಂದ ಬದುಕಬೇಕೆಂದೂ ಆ ಮೂಲಕ ಮಕ್ಕಳು ತಂದೆ ತಾಯಿಯರ ಮನಸ್ಸಿಗೆ ಸಂತೋಷವನ್ನು ಉಂಟು ಮಾಡಬೇಕೆಂದೂ ಬಹಳ ಸ್ವಾರಸ್ಯಕರವಾಗಿ ಸುನಂದಾ ದೇವಿಯ ಮಾತುಗಳ ಮೂಲಕ ಹೇಳಲಾಗಿದೆ. ಒಂದು ಕುಟುಂಬದಲ್ಲಿ ಸಹೋದರರ ನಡುವೆ ವೈಮನಸ್ಸು ಮೂಡಿದಾಗ ತಾಯಿಯಾದವಳು ಹೇಗೆ ಅವರ ನಡುವೆ ಸಮನ್ವಯವನ್ನು ಉಂಟು ಮಾಡಬೇಕು ಎಂಬುದನ್ನು ಈ ಸಾಲುಗಳು ಸೂಚಿಸುತ್ತದೆ. 'ಬೆಣ್ಣೆ ವಾಲೂಡಿ ಸಾಕು' 'ಉದರಕೆ ಹುಣ್ಣು ಮಾಳ್ಪುದು ಲೇಸೆ' ಎಂಬ ಪದ ಪ್ರಯೋಗಗಳು ಸ್ವಾರಸ್ಯಕರವಾಗಿದ್ದು ಆಶಯಕ್ಕೆ ಒತ್ತು ನೀಡಲು ಸಹಕಾರಿಯಾಗಿದೆ.

- **ಆಶಯ ಬರೆಯುವುದು**

ಆಶಯದ ಕುರಿತು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ವಿದ್ಯಾರ್ಥಿಗಳು ಆಶಯವನ್ನು ಬಾಯ್ದೆರೆಯಾಗಿ ಹೇಳಲಿ. ಬಳಿಕ ಉತ್ತಮಪಡಿಸಿ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

## ಆಶಯ ಹೀಗೂ ಬರೆಯಬಹುದಲ್ಲವೇ?

ಭರತನೊಂದಿಗೆ ಯುದ್ಧಕ್ಕೆ ಸಿದ್ದನಾದ ಬಾಹುಬಲಿಯನ್ನು ತಾಯಿ ಸುನಂದಾದೇವಿ ತನ್ನ ಬಳಿಗೆ ಕರೆಸಿಕೊಂಡು ಅಣ್ಣನೊಂದಿಗೆ ಯುದ್ಧ ಮಾಡದಂತೆ ಮನವೊಲಿಸುವ ಸನ್ನಿವೇಶ ಈ ಕಾವ್ಯ ಭಾಗದಲ್ಲಿ ಚಿತ್ರಿತವಾಗಿದೆ.

ತಮ್ಮನಾದ ಬಾಹುಬಲಿ ತನ್ನ ವಿರುದ್ಧ ಹೋರಾಡಲು ಸೈನ್ಯವನ್ನು ಸಜ್ಜುಗೊಳಿಸುತ್ತಿದ್ದಾನೆ ಎಂಬ ವಾರ್ತೆಯನ್ನು ಕೇಳಿದ ಭರತರಾಜನು ಯುದ್ಧದ ಪರಿಣಾಮಗಳ ಬಗ್ಗೆ ಆಲೋಚಿಸಿ ಮನದಲ್ಲಿ ಅಳುಕಿದರೂ ಸಮರ್ಥನಾದ ಅವನು ತಮ್ಮನಾದ ಬಾಹುಬಲಿಯು ಗರ್ವದಿಂದ ತನ್ನೊಂದಿಗೆ ಯುದ್ಧಕ್ಕೆ ಸಿದ್ದನಾದನಲ್ಲ ಎಂದು ಚಿಂತಿತನಾದನು.

ಬಾಹುಬಲಿಯು ಅಣ್ಣನೊಂದಿಗೆ ಯುದ್ಧಕ್ಕೆ ಸಿದ್ದನಾದ ವಾರ್ತೆಯನ್ನು ಕೇಳಿದ ಸುನಂದಾದೇವಿ ಸಮರ್ಥರಾದ ಸೇವಕರನ್ನು ಮಗನಾದ ಬಾಹುಬಲಿಯ ಬಳಿಗೆ ಕಳುಹಿಸಿ ಆತನನ್ನು ತನ್ನ ಮನೆಗೆ ಕರೆಸಿಕೊಂಡಳು. ತಾಯಿ ಸುನಂದಾ ದೇವಿಯ ಬಳಿಗೆ ಬಂದ ಬಾಹುಬಲಿ ತನ್ನ ಮನಸ್ಸಿನ ದುಗುಡ ದುಮ್ಮಾನಗಳನ್ನು ತಾಯಿಗೆ ತೋರಿಸಿಕೊಳ್ಳದೆ ನಗು ಮುಖದಿಂದಲೇ ತಾಯಿಗೆ ನಮಸ್ಕರಿಸಿದನು.

"ಬಾಹುಬಲಿ, ನೀನು ಹಿರಿಯ ಅಣ್ಣನಾದ ಭರತೊಡನೆ ಕಾಳಗಕ್ಕೆ ಸಿದ್ಧನಾಗಿರುವ ಮಾತುಗಳು ಕೇಳಿ ಬರುತ್ತಿವೆ. ಇದು ಎಲ್ಲರ ಆತಂಕಕ್ಕೆ ಕಾರಣವಾಗಿದೆ.ಸುಜನರಾದವರು ಇದನ್ನು ಮೆಚ್ಚಿಕೊಳ್ಳುವರೆ? ನೀನು ಈಗ ಆಯ್ಕೆ ಮಾಡಿದ ದಾರಿ ಸರಿಯಾದುದಲ್ಲ. ಆ ದುರ್ಜನರ ಹಾದಿಗೆ ಬೆಂಕಿ ಬೀಳಲಿ. ಯುದ್ಧದ ವಿಚಾರವನ್ನು ಮನಸ್ಸಿನಿಂದಲೇ ತೆಗೆದುಹಾಕು ಎಂದು ಸುನಂದಾದೇವಿ ಹೇಳಿದಳು. ಅಣ್ಣನೊಡನೆ ಯುದ್ಧ ಮಾಡುವ ಸಲುವಾಗಿಯೇ ನಾನು ನಿನ್ನನ್ನು ಬೆಣ್ಣೆ ಹಾಲು ಉಣಿಸಿ ಬೆಳೆಸಿದೆನೆ? ಮಗನಾದ ನೀನು ನಮ್ಮೆಲ್ಲರ ಮನಸ್ಸಿಗೆ ಸಮಾಧಾನವನ್ನು ತಂದುಕೊಡಬೇಕಾದವನು.ಹಾಗೆ ಮಾಡದೆ ನಮ್ಮ ಹೊಟ್ಟೆ ಉರಿಸುವುದು ಸರಿಯೇ?" ಎಂದು ಮಗನಿಗೆ ಅವಳು ಹಿತನುಡಿಯನ್ನು ಹೇಳಿದಳು.

ಸತ್ಪುರುಷರಾದವರು., ಹಿರಿಯಣ್ಣನು ಹೆತ್ತ ತಂದೆ ತಾಯಿಗೆ ಸರಿಸಮಾನನೆಂದು ಅವನ ಸೇವೆಯನ್ನು ಮಾಡುವರು, ಆದರೆ ಈ ಜಗತ್ತಿನಲ್ಲಿ ದುರ್ಜನರಾದವರು ಮಾತ್ರ ದಾಯಾದಿಗಳೊಂದಿಗೆ ನಾನು- ತಾನು ಎಂದು ಹೋರಾಟದಲ್ಲಿ ನಿರತರಾಗುವರು. ಸಹೋದರರಾದ ನೀವು ದುರ್ಜನರಾಗದೆ ಸುಜನರಾಗಿ ಬಾಳಿ ಎಂಬುದು ಇಲ್ಲಿಯ ಆಶಯ.

ನಿನ್ನ ಸಹೋದರರೆಲ್ಲರೂ ತಮ್ಮ ತಮ್ಮ ರಾಜ್ಯವನ್ನು ಅಣ್ಣನಾದ ಭರತನಿಗೆ ಒಪ್ಪಿಸಿ ತಪಸ್ಸಿಗೆ ಹೋದರು. ನೀನು ನಮ್ಮ ಅಪೇಕ್ಷೆಯನ್ನು ಪೂರೈಸಿ ನಮ್ಮೆಲ್ಲರ ಪ್ರೀತಿಗೆ ಪಾತ್ರನಾಗು. ಅಣ್ಣನಾದ ಭರತನ ಎದುರು ಮಲೆತು ನಿಲ್ಲದಿರು ಎಂದು ಹೇಳಿ ಸುನಂದಾದೇವಿ ಮಗನಾದ ಬಾಹುಬಲಿಯ ಗಲ್ಲವನ್ನು ಹಿಡಿದು ಸಮಾಧಾನ ಮಾಡಿದಳು.

ಇಲ್ಲಮ್ಮ, ಮೊದಲು ಕೋಪದಿಂದ ಅಣ್ಣನೊಡನೆ ಯುದ್ಧವನ್ನು ಮಾಡುತ್ತೇನೆ ಎಂದು ಹೇಳಿಕೊಂಡೆನು. ಆದರೆ ಅದು ಸರಿಯಲ್ಲ ಎಂದು ಎಲ್ಲರೂ ಹೇಳಿದಾಗ ಅಣ್ಣನ ಮೇಲಿನ ಕೋಪವನ್ನು ಬಿಟ್ಟುಬಿಟ್ಟೆನು. ನಾನು ಅವನ ಪಾದಗಳಿಗೆ ನಮಸ್ಕರಿಸುವೆನು ಎಂದು ಬಾಹುಬಲಿ ತಾಯಿಯೊಡನೆ ಹೇಳಿದನು.

ಬೇರೆಯವರು ಬೇಡ ಎಂದು ಹೇಳಿದುದನ್ನು ನಾನು ಮಾಡಲಾರೆನು. ಅಣ್ಣನಾದ ಭರತನಿಗೆ ಇದರ ಬಗ್ಗೆ ಚಿಂತೆ ಯಾಕೆ? ನಾನು ಅಣ್ಣನ ಪಾದಗಳಿಗೆ ನಮಿಸಿ ಬರುವೆನು ಎಂದು ಮಾತಿನಲ್ಲಿ ಹೇಳಿದನು. ಆದರೆ ಮನಸ್ಸಿನಲ್ಲಿ ಕೋಪವನ್ನು ಇರಿಸಿಕೊಂಡನು.

ಈ ಮಾತುಗಳಿಂದ ಸಂತೋಷಗೊಂಡ ಸುನಂದಾದೇವಿ ಬಾಹುಬಲಿಯನ್ನು ತಪ್ಪಿಕೊಂಡು "ನನ್ನ ಮನ್ಮಥನೆ,ನೀನು ಹಾಗೆಯೇ ಮಾಡು. ಈಗ ನನ್ನ ಎಲ್ಲಾ ಚಿಂತೆಯೂ ಮಾಯವಾಯಿತು" ಎಂದು ಮಗನನ್ನು ಹರಸಿ ಕಳುಹಿಸಿದಳು. ಬಾಹುಬಲಿಯ ಮನದೊಳಗೆ ಕೋಪವಿದ್ದರೂ ಬಹಿರಂಗದಲ್ಲಿ ಅದನ್ನು ತೋರ್ಪಡಿಸಿಕೊಳ್ಳಲಿಲ್ಲ. ಆದ್ದರಿಂದ "ಎಲ್ಲರ ಅಂತರಂಗವನ್ನು ಕಾಣುವುದಕ್ಕೆ ಯಾರಿಂದ ತಾನೆ ಸಾಧ್ಯ?" ಎಂದು ಕವಿ ಉದ್ಗರಿಸುತ್ತಾನೆ.

ಬಾಹುಬಲಿ ತಾಯಿಗೆ ನಮಸ್ಕರಿಸಿ ಅಲ್ಲಿಂದ ಬೀಳ್ಕೊಂಡು ತನ್ನ ಅರಮನೆಯನ್ನು ಪ್ರವೇಶಿಸಿದನು. ಬಳಿಕ ಚೆನ್ನಾಗಿ ಅಲಂಕಾರ ಮಾಡಿಕೊಂಡನು. 'ತನ್ನ ದೇಹಕ್ಕೆ ಇದು ಕೊನೆಯ ಅಲಂಕಾರವಲ್ಲವೇ!' ಎಂದು ಅವನು ಭಾವಿಸಿಕೊಂಡನು.

ಯಾವುದೇ ನ್ಯೂನತೆಗಳು ಇಲ್ಲದೆ ಮೋಹಕವಾದುದು ಅವನ ದೇಹ. ಅದಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ಅವನು ಮಾಡಿಕೊಂಡ ಅಲಂಕಾರ.ಇದರಿಂದಾಗಿ ನೋಡಿದವರೆಲ್ಲರ ಕಣ್ಮನಗಳನ್ನು ಅವನು ತನ್ನತ್ತ ಸೆಳೆಯುತ್ತಾ ಇದ್ದನೋ ಎಂಬಂತೆ ಅವನು ಕಾಣಿಸುತ್ತಿದ್ದನು ಎಂದು ಕವಿ ವರ್ಣಿಸುತ್ತಾನೆ.

## ಪಾತ್ರ ಚಿತ್ರಣವನ್ನು ಹೀಗೂ ಬರೆಯಬಹುದು

ರತ್ನಾಕರವರ್ಣಿಯು ಬರೆದ 'ಭರತೇಶ ವೈಭವ' ಎಂಬ ಕಾವ್ಯದಿಂದ ಆರಿಸಿಕೊಂಡ 'ಅಂತರಂಗವ ಕಾಂಬರಾರು' ಎಂಬ ಭಾಗದಲ್ಲಿ ಬರುವ ಪ್ರಮುಖ ಪಾತ್ರವೇ ಸುನಂದಾದೇವಿ. ಅಣ್ಣ ತಮ್ಮಂದಿರೊಳಗೆ ಯುದ್ಧ ನಡೆದರೆ ಕುಟುಂಬದ ಸಾಮರಸ್ಯ ಹಾಳಾಗುತ್ತದೆ. ಅದರ ಜೊತೆಗೆ ಯುದ್ಧದ ದುಷ್ಪರಿಣಾಮ ರಾಜ್ಯದ ವಿನಾಶಕ್ಕೆ ಕಾರಣವಾಗುತ್ತದೆ ಎಂಬ ಅರಿವಿದ್ದ ಸುನಂದಾದೇವಿ ಮಗನಾದ ಬಾಹುಬಲಿಯನ್ನು ಕರೆದು ಯುದ್ಧದಿಂದ ವಿಮುಖನಾಗುವಂತೆ ಅವನ ಮನವೊಲಿಸುತ್ತಾಳೆ. ಇದನ್ನು ನೋಡಿದಾಗ ಅವಳು ತನ್ನ ತಾಯ್ತನದ ಕರ್ತವ್ಯವನ್ನು ಮಾಡುವುದರ ಜೊತೆಗೆ ತನ್ನ ಪ್ರಜೆಗಳ ಹಿತವನ್ನು ಬಯಸುವುದನ್ನು ಕಾಣಬಹುದು. ಬಾಹುಬಲಿಯು ಅಣ್ಣನೊಡನೆ ಯುದ್ಧಕ್ಕೆ ಸಿದ್ದನಾದಾಗ ಅವರಿಬ್ಬರ ನಡುವೆ ಅನ್ಯೋನ್ಯತೆ ಮೂಡುವಂತೆ ಮಾಡುವಲ್ಲಿ ಅವಳು ಪ್ರಮುಖ ಪಾತ್ರವನ್ನು ವಹಿಸುತ್ತಾಳೆ. ''ಅಣ್ಣನ ಜೊತೆಗೆ ಕಾಳಗವ ಮಾಡೆಂದಾನು ಬೆಣ್ಣೆವಾಲೂಡಿ ಸಾಕಿದೆನೆ'' ಎಲ್ಲರೂ ತಪಸಿಗೈದಿದರು ನೀನೊಬ್ಬ ನಮ್ಮೆಲ್ಲರರ್ತಿಯ ಸಲಿಸಣ್ಣ 'ಹಿರಿಯಣ್ಣ ಹೆತ್ತ ತಂದೆಯ ಪಾಟಿ' 'ಬಲ್ಲಿತುದೋರದಿರಣ್ಣ ಅಣ್ಣನಿಗೆರಗು' ಎಂದೆಲ್ಲಾ ಹೇಳುವಲ್ಲಿ ತಮ್ಮನಾದವನು ಅಣ್ಣನನ್ನು ಗೌರವದಿಂದ ನೋಡಿಕೊಳ್ಳಬೇಕು, ಅವನ ವಿರುದ್ಧವಾಗಿ ಹೋಗಬಾರದು, ಎಂದು ಅವಳು ಮಗನಿಗೆ ತಿಳಿಹೇಳಿ 'ಸುಜನರು ಯಾರು ನಿನ್ನ ಈ ಕುಜನ ಮಾರ್ಗವನ್ನು ಮೆಚ್ಚಿಕೊಳ್ಳುವುದಿಲ್ಲ, ಆದಕಾರಣ ಅದನ್ನು ಬಿಟ್ಟು ಬಿಡು' ಎಂದು ಬುದ್ಧಿಮಾತು ಹೇಳುತ್ತಾಳೆ. ತನ್ನ ಮಗ ಧರ್ಮ ಮಾರ್ಗದಲ್ಲಿಯೇ ಹೋಗಬೇಕು ಎಂಬ ಚಿಂತನೆ ಅವಳದು. ಮಕ್ಕಳಾದವರು ಹೆತ್ತವರಿಗೆ ಸಂತೋಷವನ್ನು ಉಂಟು ಮಾಡಬೇಕಲ್ಲದೆ ದುಃಖವನ್ನು ತಂದೊಡ್ಡಬಾರದು ಎಂಬುದನ್ನು 'ತಣ್ಣನೆ ಮಾಡಬೇಕೆಮ್ಮೆಲ್ಲರುದರಕೆ ಹುಣ್ಣು ಮಾಳ್ಪುದು ಲೇಸೆ ಮಗನೇ' ಎಂದು ಕೇಳುತ್ತಾಳೆ ಆ ಮೂಲಕ ಮಕ್ಕಳಾದವರು ಕೆಟ್ಟ ಕೆಲಸ ಮಾಡಿ ಹೆತ್ತವರ ಹೊಟ್ಟೆ ಉರಿಸಬಾರದು ಎಂದು ಉಪದೇಶ ಮಾಡುತ್ತಾಳೆ

ಒಟ್ಟಿನಲ್ಲಿ ಸುನಂದಾದೇವಿ ವಾತ್ಸಲ್ಯಮಯಿ ಮಾತೆಯಾಗಿ, ಪ್ರಜೆಗಳ ಹಿತವನ್ನು ಬಯಸುವ ರಾಣಿಯಾಗಿ, ಜವಾಬ್ದಾರಿಯುತ ವ್ಯಕ್ತಿಯಾಗಿ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುತ್ತಾಳೆ.

- **ಸಂದೇಶ ಬರೆಯುವುದು**

ಕಾವ್ಯ ಭಾಗವನ್ನು ಓದಿ ಆಶಯವನ್ನು ತಿಳಿದ ಬಳಿಕ ಈ ಕಾವ್ಯದಲ್ಲಿರುವ ಸಂದೇಶವೇನು? ಎಂಬ ಪ್ರಶ್ನೆಯನ್ನು ವಿದ್ಯಾರ್ಥಿಗಳ ಮುಂದೆ ಇಡುವುದು. ವಿದ್ಯಾರ್ಥಿಗಳು ವೈಯಕ್ತಿಕವಾಗಿ ಉತ್ತರಗಳನ್ನು ನೀಡಲಿ. ಅನಂತರ ಚರ್ಚೆ ನಡೆಸಿ ಪುಸ್ತಕದಲ್ಲಿ ಬರೆಯಲಿ.

**ಸಂದೇಶ ಹೀಗೂ ಇರಬಹುದು**

ಕುಟುಂಬ ಎಂಬುದು ಸಮಾಜದ ಒಂದು ಅಂಗ. ಕುಟುಂಬದಲ್ಲಿ ಇರುವ ವ್ಯಕ್ತಿಗಳೊಳಗೆ ಸಾಮರಸ್ಯ ಇರಬೇಕು. ಸಹೋದರರ ನಡುವೆ ಉತ್ತಮ ಬಾಂಧವ್ಯವಿದ್ದರೆ ಸಮಾಜ ಸ್ವಾಸ್ಥ್ಯದಿಂದ ಇರುತ್ತದೆ. ಸಹೋದರರು ಪರಸ್ಪರ ಕಚ್ಚಾಡದೆ ಅನ್ಯೋನ್ಯತೆಯಿಂದ ಬಾಳಬೇಕು. ಕುಟುಂಬ ಸದಸ್ಯರ,ದಾಯಾದಿಗಳ ನಡುವೆ ಸಾಮರಸ್ಯ ಉಂಟುಮಾಡಲು ಕುಟುಂಬದ ಹಿರಿಯ ಸದಸ್ಯರು ಪ್ರಯತ್ನಿಸಬೇಕು. ಮನೆಯಲ್ಲಿ ಇರುವ ಹಿರಿಯರು ಸಕಾಲದಲ್ಲಿ ಕಿರಿಯರಿಗೆ ಉತ್ತಮ ಮಾರ್ಗದರ್ಶನವನ್ನು ನೀಡಿ ಅವರು ಸರಿದಾರಿಯಲ್ಲಿ ನಡೆಯುವಂತೆ ಮಾಡಬೇಕು

- **ಘೋಷಣ ವಾಕ್ಯ ರಚಿಸುವುದು**

ಯುದ್ಧದ ವಿರುದ್ಧ ಜನಜಾಗೃತಿ ಮೂಡಿಸುವ ಘೋಷಣ ವಾಕ್ಯವನ್ನು ವಿದ್ಯಾರ್ಥಿಗಳಲ್ಲಿ ರಚಿಸಲು ಹೇಳುವುದು. ಪುಸ್ತಕದಲ್ಲಿ ಕೊಟ್ಟ ಘೋಷಣ ವಾಕ್ಯವನ್ನು ಗಮನಿಸುವುದು.

- ಆಶಯ
- ಸಂಕ್ಷಿಪ್ತತೆ
- ಆಕರ್ಷಕ ವಾಕ್ಯಗಳು ಆಗಿರಬೇಕು.

**ಉದಾಹರಣೆ**

- ಯುದ್ಧ ಅಳಿಯಲಿ
  ಶಾಂತಿ ಬೆಳಗಲಿ

- ಯುದ್ಧದಿಂದ ವಿನಾಶ
  ಶಾಂತಿಯಿಂದ ವಿಕಾಸ

- ಯುದ್ಧವು ಹಾನಿಕರ

  ಶಾಂತಿಯು ಕ್ಷೇಮಕರ

- ಯುದ್ಧಕ್ಕೆ ಹಾಕೋಣ ಕಡಿವಾಣ

  ಪ್ರೀತಿಯಿಂದ ಮನಸ್ಸನ್ನು ಗೆಲ್ಲೋಣ.

  ಈ ರೀತಿಯ ವಾಕ್ಯಗಳು ಇರಲಿ.

- **ಸಮಾಸ ಗುರುತಿಸುವುದು**

  ಪೂರ್ವ ಪದವು ನಾಮಪದವಾಗಿದ್ದು ಉತ್ತರ ಪದವು ಕ್ರಿಯಾ ವಾಚಕವಾಗಿ ಬರುವ ಪದಗಳು ಸೇರಿ ಕ್ರಿಯಾ ಸಮಾಸವಾಗುವುದು.

- ಶಿರಬಾಗು - ಶಿರವನ್ನು ಬಾಗು
- ಕೈಯೆತ್ತು - ಕೈಯನ್ನು ಎತ್ತು

ಈ ರೀತಿ ಕ್ರಿಯಾ ಸಮಾಸವಾಗುವ ಪದಗಳನ್ನು ವಿದ್ಯಾರ್ಥಿಗಳು ಸ್ವತಃ ಸಂಗ್ರಹಿಸಿ ಬರೆಯಲಿ. ಅದನ್ನು ವಿಸ್ತರಿಸಿ ಬರೆಯಲು ಹೇಳುವುದು. ಈ ರೀತಿ ವಿಸ್ತರಿಸುವುದನ್ನು ವಿಗ್ರಹ ವಾಕ್ಯ ಎನ್ನುವರು ಎನ್ನುವುದನ್ನು ಸ್ಪಷ್ಟಪಡಿಸುವುದು.

**ಉದಾಹರಣೆ**

- ಭಕ್ತಿ ಮಾಡು - ಭಕ್ತಿಯನ್ನು ಮಾಡು
- ಬೆಣ್ಣೆವಾಲೂಡು - ಬೆಣ್ಣೆವಾಲನ್ನು ಊಡು
- ಬಲ್ಲಿದುದೋರು - ಬಲ್ಲಿತನ್ನು ತೋರು
- ಸಂತಸ ಬಟ್ಟು - ಸಂತಸವನ್ನು ಪಟ್ಟು

  ಈ ರೀತಿಯ ಪದಗಳನ್ನು ಸಂಗ್ರಹಿಸಿ ಬರೆಯಲಿ

- **ಅಂಶಗಣವನ್ನು ತಿಳಿಯುವುದು**

ಅಂಶಗಳನ್ನು ಪರಿಗಣಿಸಿ ರೂಪಿಸುವ ಗಣವನ್ನು ಅಂಶಗಣ ಎನ್ನುತ್ತಾರೆ. ಅಂಶಗಣದಲ್ಲಿ ಮೂರು ಪ್ರಕಾರಗಳಿವೆ.

- ಎರಡು ಅಂಶ ಇರುವ ಗಣ - ಬ್ರಹ್ಮಗಣ
- ಮೂರು ಅಂಶವಿರುವ ಗಣ - ವಿಷ್ಣುಗಣ
- ನಾಲ್ಕು ಅಂಶ ಇರುವ ಗಣ - ರುದ್ರಗಣ

ಪ್ರತಿಗಣದ ಆರಂಭದ ಅಂಶದಲ್ಲಿ ಗುರುವಾದರೆ ಒಂದು,ಲಘುವಾದರೆ ಎರಡು ಅಕ್ಷರಗಳಿರುತ್ತದೆ. ಮುಂದಿನ ಅಂಶಗಳಲ್ಲಿ ಲಘು ಅಥವಾ ಗುರು ಒಂದೊಂದೇ ಬರುತ್ತದೆ ಎಂಬ ವಿಚಾರವನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸುವುದು. ಪುಸ್ತಕದಲ್ಲಿ ಕೊಟ್ಟ ಗಣ ವಿಭಜನೆಯನ್ನು ಗಮನಿಸುವುದು.

ಸಾಂಗತ್ಯ ಛಂದಸ್ಸು ಅಂಶಗಣ ಪ್ರಧಾನವಾದ ಛಂದಸ್ಸು.ಇದರಲ್ಲಿ ನಾಲ್ಕು ಸಾಲುಗಳಿರುತ್ತವೆ. ಆರಂಭದ ಎರಡು ಸಾಲುಗಳು ಅನಂತರದ ಎರಡು ಸಾಲುಗಳಿಗೆ ಸಮಾನವಾಗಿರುತ್ತವೆ.. ಒಂದನೇ ಮತ್ತು ಮೂರನೆಯ ಸಾಲುಗಳಲ್ಲಿ ನಾಲ್ಕು ನಾಲ್ಕು ವಿಷ್ಣುಗಣಗಳು, ಎರಡು ಮತ್ತು ನಾಲ್ಕನೇಯ ಸಾಲುಗಳಲ್ಲಿ ಎರಡೆರಡು ವಿಷ್ಣುಗಣಗಳು ಕೊನೆಯಲ್ಲಿ ಒಂದು ಬ್ರಹ್ಮಗಣ ಬರುತ್ತದೆ.

ಪುಸ್ತಕದಲ್ಲಿ ಕೊಟ್ಟ ಪದ್ಯಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಲು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಹೇಳುವುದು. ಅಧ್ಯಾಪಕರು ಸಹಕರಿಸುವುದು.

ಪಡೆದಳಿ|ಗೆರಗಿ ಬೀ|ಳ್ಕೊಂಡು ತ|ನ್ನರಮನೆ

ಗೊಡನೆ ಹೊ|ಕ್ಕನು ಪುಷ್ಪ|ಬಾಣ

ಬೆಡಗಾಗಿ |ಸಿಂಗರಿ|ಸಿದನು ತ|ನ್ನಂಗಕೆ

ಕಡೆಯ ಶೃಂ|ಗಾರವ|ದಲ್ತೆ

# ದಾರಿ ಯಾವುದಯ್ಯಾ

ವಿದ್ಯಾರ್ಥಿಗಳು 'ದಾರಿ ಯಾವುದಯ್ಯಾ' ಪಾಠವನ್ನು ಓದಲಿ. ಅಧ್ಯಾಪಕರು ಇಲ್ಲಿ ಗಟ್ಟಿ ಓದು ಸರಣಿ ಓದು ಮೊದಲಾದ ತಂತ್ರಗಳನ್ನು ಬಳಸಿಕೊಳ್ಳಬಹುದು. ಎಲ್ಲಾ ವಿದ್ಯಾರ್ಥಿಗಳಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳಬೇಕು. ಓದುವಾಗ ಅರ್ಥವಾಗದ ಪದಗಳನ್ನು ಗುರುತಿಸಿಕೊಳ್ಳಲು ಹೇಳುವುದು. ಬಳಿಕ ಅದಕ್ಕೆ ಅರ್ಥವನ್ನು ಹುಡುಕುವುದು. ಪಾಠದ ಆಶಯವನ್ನು ತಿಳಿಯುವುದು. ಪೂರಕ ಮಾಹಿತಿಯನ್ನು ಓದಿಕೊಳ್ಳುವುದು.

- **ಉತ್ತರ ಬರೆಯುವುದು**

ಪಾಠದ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳನ್ನು ಮಕ್ಕಳು ಓದಲಿ. ಅದಕ್ಕೆ ಸರಿಯಾದ ಉತ್ತರವನ್ನು ಪಾಠದಿಂದ ಕಂಡುಕೊಳ್ಳಲಿ. ಬಳಿಕ ಅದನ್ನು ಬರೆದು ಮಂಡಿಸಲಿ. ಉತ್ತರವನ್ನು ಅಧ್ಯಾಪಕರ ಸಹಾಯದಿಂದ ಪರಿಷ್ಕರಿಸಿಕೊಳ್ಳಲಿ. ಬಳಿಕ ಪುಸ್ತಕದಲ್ಲಿ ಬರೆಯಲಿ.

- **ಸಮರ್ಥಿಸಿ ಬರೆಯುವುದು**

ಪಾಠದಲ್ಲಿ ಇಷ್ಟವಾದ ಭಾಗ ಯಾವುದು?, ಅದು ಯಾಕೆ ಇಷ್ಟವಾಯಿತು? ಎಂದು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ವಿದ್ಯಾರ್ಥಿಗಳು ವೈಯಕ್ತಿಕವಾಗಿ ಅವರಿಗೆ ಇಷ್ಟವಾದ ಭಾಗ ಯಾವುದು ಅದು ಯಾಕೆ ಇಷ್ಟವಾಯಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅದನ್ನು ಟಿಪ್ಪಣಿಯಾಗಿ ಅವರು ಪುಸ್ತಕದಲ್ಲಿ ಬರೆಯಲಿ.ಅನಂತರ ತರಗತಿಯಲ್ಲಿ ಮಂಡಿಸಲಿ.

**ಹೀಗೂ ಬರೆಯಬಹುದಲ್ಲವೇ?**

ಮನೆಯೊಳಗೆ ಕಾಟ ಕೊಡುತ್ತಿದ್ದ ಬೆಕ್ಕನ್ನು ದೂರದ ಕಾಡಿನೊಳಗೆ ಬಿಟ್ಟು ಬರುತ್ತೇನೆ ಎಂದು ಹೋದವನಿಗೆ ಪುನಃ ಮನೆಗೆ ಬರುವ ದಾರಿ ತಪ್ಪಿ ಹೋಗುತ್ತದೆ ಆಗ ದಾರಿ ಕಾಣದೆ ತಲೆಯ ಮೇಲೆ ಕೈಹೊತ್ತು ಕುಳಿತಿದ್ದ ಆತನನ್ನು ಆ ಬೆಕ್ಕು 'ಮಿಯಾಂ' ಎಂದು ಕರೆಯುತ್ತದೆ. ಅದರ ಹಿಂದೆಯೇ ನಡೆದು ಆತ ಮನೆ ಸೇರಿಕೊಳ್ಳುತ್ತಾನೆ.ದುಂಡಿರಾಜರ 'ದಾರಿ ಯಾವುದಯ್ಯಾ' ಲಲಿತ ಪ್ರಬಂಧದ ಈ ಭಾಗ ನನಗೆ ತುಂಬಾ ಇಷ್ಟವಾಯಿತು.

ಬುದ್ಧಿವಂತನಾದ ಮಾನವ ತನ್ನ ಸಾಕುಪ್ರಾಣಿಯಾದ ಬೆಕ್ಕನ್ನು ಚೆನ್ನಾಗಿ ನೋಡಿಕೊಳ್ಳಬೇಕಾಗಿತ್ತು.ಆದರೆ ಸ್ವಾರ್ಥಿಯಾದ ಅವನು ಅದನ್ನು ಕಾಡಿಗೆ ಬಿಟ್ಟು ಬರಲು ಹೋದನು. ಅವನ ಈ ಯೋಚನೆ ಒಳ್ಳೆಯದಲ್ಲ. ಕೊನೆಗೆ ಅವನೇ ದಾರಿ ತಪ್ಪುವ ಸ್ಥಿತಿ ಬಂತು. ಆಗ ನಿಕೃಷ್ಟ ಪ್ರಾಣಿಯಾದ ಅವನ ಬೆಕ್ಕು ಅವನ ಸ್ಥಿತಿಯನ್ನು ಅರ್ಥ ಮಾಡಿಕೊಂಡು 'ಮಿಯಾಂ' ಎಂದು ಕೂಗಿ ಕರೆದು ಅವನನ್ನು ತಿರುಗಿ ಮನೆಗೆ ಕರೆದುಕೊಂಡು ಹೋಗುತ್ತದೆ. ಇಲ್ಲಿ ಬೆಕ್ಕಿನ ಸ್ವಾಮಿ ಭಕ್ತಿ

ಮೆಚ್ಚತಕ್ಕದ್ದಾಗಿದೆ. ಪ್ರಾಣಿಗೆ ಇದ್ದ ಪ್ರೀತಿ ಮನುಷ್ಯನಿಗೆ ಇಲ್ಲ ಎಂದು ನಾವು ಇದರಿಂದ ಅರ್ಥಮಾಡಿಕೊಳ್ಳಬಹುದು. ಈ ನಿಸರ್ಗ ಪ್ರಾಣಿ ಪಕ್ಷಿಗಳಿಗೆ ತಾವು ಕ್ರಮಿಸಿದ ದಾರಿಯನ್ನು ನೆನಪಿಟ್ಟುಕೊಳ್ಳುವ ಶಕ್ತಿಯನ್ನು ಕೊಟ್ಟಿದೆ. ಆದ ಕಾರಣ ಪ್ರಾಣಿ, ಪಕ್ಷಿಗಳು ಬುದ್ಧಿವಂತಿಕೆಯಲ್ಲಿ ಮಾನವನನ್ನು ಮೀರಿ ನಿಲ್ಲುತ್ತದೆ ಎಂದು ನಾವು ಅರ್ಥಮಾಡಿಕೊಳ್ಳಬಹುದು.

- **ಅನುಭವ ಟಿಪ್ಪಣಿ ಬರೆಯುವುದು**

ಅಧ್ಯಾಪಕರು ಮೊದಲು ತಾವು ದಾರಿತಪ್ಪಿ ಹೇಚಿಗೆ ಸಿಲುಕಿದ ಸನ್ನಿವೇಶವನ್ನು ರಸವತ್ತಾಗಿ ಮಂಡಿಸಲಿ. ವಿದ್ಯಾರ್ಥಿಗಳಲ್ಲಿ ಅವರು ಎಂದಾದರೂ ದಾರಿತಪ್ಪಿ ಪೇಚಿಗೆ ಸಿಲುಕಿದ ಸನ್ನಿವೇಶಗಳನ್ನು ನೆನಪಿಸಿಕೊಳ್ಳಲು ಹೇಳುವುದು. ಅವುಗಳಲ್ಲಿ ರಸವತ್ತಾದ ಯಾವುದಾದರೂ ಒಂದು ಸನ್ನಿವೇಶವನ್ನು ಟಿಪ್ಪಣಿ ರೂಪದಲ್ಲಿ ಬರೆಯಲು ಹೇಳುವುದು. ಅನಂತರ ಅದನ್ನು ವೈಯಕ್ತಿಕವಾಗಿ ಬರೆಯಲು ಎಲ್ಲಾ ಮಕ್ಕಳಿಗೂ ಅವಕಾಶವನ್ನು ನೀಡುವುದು. ಮಕ್ಕಳು ಬರೆದ ಬರಹವನ್ನು ಪರಿಷ್ಕರಿಸಿ ಬರೆದು ಸಂಚಿಕೆ ತಯಾರಿಸಲಿ.

**ಅನುಭವ ಟಿಪ್ಪಣಿ ಹೀಗೂ ಬರೆಯಬಹುದು**

## ದಾರಿ ತಪ್ಪಿಸಿದ ಮಾವಿನ ಮರ

ನಾನು ಆಗ ಎಂಟನೇ ತರಗತಿಯಲ್ಲಿ ಓದುತ್ತಿದ್ದೆ. ನಾನು ಹೆಚ್ಚಾಗಿ ತಾಯಿಯೊಂದಿಗೆ ನೆಂಟರ ಮನೆಗಳಿಗೆ ಹೋಗುತ್ತಿದ್ದೆ. ಬೇಸಿಗೆಯ ರಜಾ ಸಮಯ. ತೀರ್ಥರೂಪರು  ಅಡ್ಯನಡ್ಕದ ಸಮೀಪದ ತಲಂಜೇರಿಯಲ್ಲಿ ನಡೆಯುವ ವಿವಾಹ ಸಮಾರಂಭಕ್ಕೆ ತೆರಳಲು ತಾಯಿಯವರಲ್ಲಿ ಸೂಚಿಸಿದ್ದರು. ನಾವು ಹಿಂದಿನ ದಿನವೇ ಹೊರಡಲು ಅಣಿಯಾದೆವು. ಇಬ್ಬರು ಆ ಮನೆಗೆ ಪ್ರಪ್ರಥಮವಾಗಿ ಹೋಗುತ್ತಿರುವುದು. ಅಡ್ಯನಡ್ಕದಲ್ಲಿ ಇಳಿದು ಸ್ವಲ್ಪ ಮುಂದೆ ಹೋದಾಗ ಎಡ ಭಾಗಕ್ಕೆ ಒಂದು ಕಾಲು ರಸ್ತೆ ಇದೆ.ಅದರಲ್ಲೇ ಮುಂದೆ ಸಾಗಿದಾಗ ಎಡ ಭಾಗದಲ್ಲಿ ಒಂದು ದೊಡ್ಡ ಮಾವಿನ ಮರ ಇದೆ. ಅದರ ಬುಡಕ್ಕೆ ತಾಗಿಕೊಂಡೆ ಒಂದು ಕಾಲು ದಾರಿ ಸಿಗುತ್ತದೆ.ಅದು ನೇರ ವಿವಾಹ ನಡೆಯುವ ಮನೆಗೆ ಹೋಗುತ್ತದೆ ಎಂದು ತಂದೆಯವರು ದಾರಿಯ ಬಗ್ಗೆ ತಿಳಿಸಿದ್ದರು.

ನಾವು ಬೆಳಿಗ್ಗೆಯೇ ಹೊರಟು ಪೆರ್ಲಕ್ಕೆಬಂದು ಅಲ್ಲಿಂದ ಬಸ್ಸಿನಲ್ಲಿ ಅಡ್ಯನಡ್ಕಕ್ಕೆ ಬಂದೆವು. ಅಂದಿನ ಕಾಲದಲ್ಲಿ ಹೆಚ್ಚು ವಾಹನಗಳಿರಲಿಲ್ಲ. ಜನಸಾಮಾನ್ಯರ ಮನೆಗಳಿಗೆ ರಸ್ತೆಗಳೂ ಇರಲಿಲ್ಲ. ಅಪ್ಪ ಹೇಳಿದ ಹಾಗೆಯೇ ಕಾಲು ರಸ್ತೆಯಲ್ಲಿ ಸಾಗಿದೆವು. ದಾರಿಯ ಬದಿಯಲ್ಲಿಸುಮಾರು ಮಾವಿನ ಮರಗಳು ಇದ್ದವು. ಮರಗಳಲ್ಲಿಮಾವಿನಕಾಯಿಗಳ ಗೊಂಚಲುಗಳು ನೇತಾಡುತ್ತಿದ್ದುನಯನ ಮನೋಹರವಾಗಿತ್ತು. ಮರಗಳ ಅಡಿಯಲ್ಲಿಮಾವಿನಹೀಚುಗಳು ಮಾತ್ರಬಿದ್ದಿತ್ತು. ಎಲ್ಲಾಮಾವಿನ ಮರದ ಬದಿಗಳಲ್ಲಿಯೂ ಕಾಲುಧಾರಿಗಳಿದ್ದುಯಾರಲ್ಲಾದರೂ  ಕೇಳೋಣ ಅಂದರೆ ಅಲ್ಲಿ ಸುತ್ತಮುತ್ತ ಯಾರು ಇರಲಿಲ್ಲ. 'ಅಮ್ಮ, ದಾರಿ ಇದೆ ಆಗಿರಬೇಕು, ಇಲ್ಲೇ ಹೋಗುವ' ಎಂದು ತಾಯಿಯೊಡನೆ ಹೇಳುತ್ತಾ ನಾನು ಒಂದು ಮಾವಿನ ಮರದ ಹತ್ತಿರವಿದ್ದ ದಾರಿಯಲ್ಲಿ ಮುಂದೆ ಸಾಗಿದೆ. ಆ ದಾರಿ ಚೆನ್ನಾಗಿ ಸವೆದಿತ್ತು. ಸುಮಾರು ಅರ್ಧ ಕಿಲೋಮೀಟರ್ ನಡೆದರೂ ಮದುವೆಯ ಸಂಭ್ರಮದ ಮನೆ ಕಾಣ ಸಿಗಲಿಲ್ಲ. ಮುಂದೆ ನಡೆದಾಗ ಚಿಕ್ಕ ಚಿಕ್ಕ ಗುಡಿಸಲುಗಳಿರುವ ಒಂದು ಕಾಲನಿ ಸಿಕ್ಕಿತು.ಅಲ್ಲಿ ಒಂದು ಗುಡಿಸಲಿನ ಅಂಗಳದಲ್ಲಿ ಒಬ್ಬರು ಅಜ್ಜಿ ಬುಟ್ಟಿ ಹೆಣೆಯುತ್ತಿದ್ದರು. ಅವರಲ್ಲಿ ತಾಯಿಯವರು

ತಲಂಜೇರಿಗೆ ಹೋಗುವ ದಾರಿಯ ಬಗ್ಗೆ ವಿಚಾರಿಸಿದಾಗ "ಅಕ್ಕಾ, ಈ ದಾರಿ ಅಲ್ಲ.ನೀವು ಮುಂದೆ ಬಂದು ಎಡಕ್ಕೆ ತಿರುಗಿದಿರಿ. ಇದಕ್ಕಿಂತಲೂ ಮೊದಲು ಸಿಗುವ ಎಡ ಕಾಲು ದಾರಿಯಲ್ಲಿ ಹೋಗಬೇಕು "ಆಗ ನಾನು ಹೇಳಿದೆ" ಹೌದು, ದಾರಿ ಇದೆ. ಆದರೆ ನನ್ನ ತಂದೆ ಹೇಳಿದಂತೆ ಮಾವಿನ ಮರ ಇಲ್ಲ" ಆಗ ಆ ಅಜ್ಜಿ ನಗುತ್ತಾ ಮಗು, ಮೊದಲು ಅಲ್ಲಿ ದೊಡ್ಡದೊಂದು ಮಾವಿನ ಮರವಿತ್ತು. ಆ ಮಾವಿನ ಮರ ಕಡಿದು ಈಗ ಎರಡು ವರ್ಷಗಳೇ ಕಳೆದುವು"ಎಂದಾಗ ನಾನು ಸುಸ್ತು. ಬಂದ ದಾರಿಗೆ ಸುಂಕವಿಲ್ಲ ಎಂದು ಪುನಃ ಹಿಂದಕ್ಕೆ ಬಂದು ಅಜ್ಜಿ ಹೇಳಿದ ದಾರಿಯಲ್ಲಿ ಸಾಗಿ ಅಂತೂ ಮದುವೆ ಮನೆಗೆ ತಲುಪಿದೆವು.

- **ವಾಕ್ಯ ರಚಿಸುವುದು**

ಮಕ್ಕಳು ಪಾಠದಲ್ಲಿ ಬಂದಿರುವ ಅನ್ಯದೇಶಿಯ ಪದಗಳನ್ನು ಗುರುತಿಸಿ ಪಟ್ಟಿ ಮಾಡಲಿ. ಅವುಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಬರೆಯಲಿ.ಅನಂತರ ಪಠ್ಯಪುಸ್ತಕದಲ್ಲಿ ಮಾದರಿಯಾಗಿ ಕೊಟ್ಟಿರುವಂತೆ ವಾಕ್ಯಗಳನ್ನು ರಚಿಸಲಿ. ಅಧ್ಯಾಪಕರು ವಾಕ್ಯಗಳನ್ನು ಪರಿಶೀಲಿಸುವುದು.

**ಉದಾಹರಣೆ**

- ಗುರುರಾಜ ಕರ್ಜಗಿ ಯವರ ಮಾತು ವಿದ್ಯಾರ್ಥಿಗಳನ್ನು ಇಂಪ್ರೆಸ್ ಮಾಡಿತು.
- ಸತ್ಯಹರಿಶ್ಚಂದ್ರನಾಟಕವು ಗಾಂಧೀಜಿಯ ಮೇಲೆ ಪರಿಣಾಮ ಬೀರಿದ ಕಾರಣ ಅವರು ಸತ್ಯವನ್ನೇ ನುಡಿಯುತ್ತಿದ್ದರು.
- ನಾನು ಶಾಲೆಗೆ ಬರುವಾಗ ಬಸ್ಸಿನಲ್ಲಿ ತುಂಬಾ ರಶ್ ಇತ್ತು.
- ಭಾನುವಾರದಂದು ಸಂತೆಯಲ್ಲಿ ನೂಕು ನುಗ್ಗಲು ಇತ್ತು.
- ನಮ್ಮ ಮನೆಯ ಮುಂದಿನ ಮಾರ್ಗದಲ್ಲಿ ಲೆಫ್ಟಿಗೆ ಹೋದರೆ ದೊಡ್ಡ ಆಟದ ಮೈದಾನವಿದೆ.
- ನಮ್ಮ ಊರಿನಲ್ಲಿರುವ ದೇವಾಲಯದ ಎಡಭಾಗದಲ್ಲಿ ದೊಡ್ಡ ಕೆರೆ ಇದೆ.
- ಮೊಬೈಲ್ ಎಂಬ ಉಪಕರಣ ಜಗತ್ತಿನಲ್ಲಿ ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿತು.
- ಜಂಗಮವಾಣಿ ಕೈಯಲ್ಲಿ ಇದ್ದರೆ ದಾರಿ ಹುಡುಕುವುದು ಕಷ್ಟದ ಕೆಲಸವಲ್ಲ.
- ನಾನು ನಾಳೆ ಶಾಲೆಗೆ ಬರುವುದಿಲ್ಲ ಎಂದು ಅಧ್ಯಾಪಕರಿಗೆ ಕಾಲ್ ಮಾಡಿ ತಿಳಿಸಿದೆನು.
- ದೂರದರ್ಶನದಲ್ಲಿ ಪ್ರಸಾರವಾದ ವೈದ್ಯರೊಂದಿಗೆ ಸಮಾಲೋಚನೆ ಎಂಬ ಕಾರ್ಯಕ್ರಮದಲ್ಲಿ ರೋಗಿಯ ಕರೆಗೆ ಓಗೊಟ್ಟ ವೈದ್ಯರು ಸೂಕ್ತವಾದ ಉತ್ತರವನ್ನು ನೀಡಿದರು.

ಈ ರೀತಿಯ ವಾಕ್ಯಗಳನ್ನು ತಯಾರಿಸುವುದು.

- **ಪ್ರಬಂಧ ಬರೆಯುವುದು**

**ಪ್ರಬಂಧದ ಹಂತಗಳು :**

- ಶೀರ್ಷಿಕೆ
- ಪೀಠಿಕೆ
- ವಿಷಯದ ಬೆಳವಣಿಗೆ

  ಮಾದಕ ದ್ರವ್ಯ ಸೇವನೆಯ ದುಷ್ಪರಿಣಾಮಗಳು

  ಮಾದಕ ದ್ರವ್ಯ ಸೇವನೆಯನ್ನು ನಿಯಂತ್ರಿಸುವ ವಿಧಾನಗಳು
- ಉಪಸಂಹಾರ

## ಮದ್ಯಪಾನ ಮತ್ತು ಮಾದಕದ್ರವ್ಯ ಸೇವನೆಯ ದುಷ್ಪರಿಣಾಮಗಳು

ಮದ್ಯಪಾನ ಮತ್ತು ಮಾದಕ ದ್ರವ್ಯ ಸೇವನೆಯು ಪ್ರಪಂಚದಾದ್ಯಂತ ಕಂಡುಬರುವ ಒಂದು ದೊಡ್ಡ ಪಿಡುಗಾಗಿದೆ. ಗಂಡು-ಹೆಣ್ಣು, ಬಡವ-ಶ್ರೀಮಂತ ಎಂಬ ಭೇದವಿಲ್ಲದೆ ಇಂದು ಎಲ್ಲಾ ಕಡೆಯೂ ಇದರ ದಾಸರಾಗುವವರ ಸಂಖ್ಯೆ ಜಾಸ್ತಿ ಆಗುತ್ತಿದೆ. ಮದ್ಯ, ಹೊಗೆ ಸೊಪ್ಪು ಕೊಕೇನ್, ಅಫೀಮು, ಗಾಂಜಾ, ಬ್ರೌನ್ ಶುಗರ್, ಅಂಪಿಟಮೈನ್, ಹಿರಾಯಿನ್ ಮೊದಲಾದವುಗಳು ಮಾದಕ ವಸ್ತುಗಳ ಪಟ್ಟಿಗೆ ಸೇರುತ್ತದೆ. ಇದನ್ನು ಸೇವಿಸುವ ವ್ಯಕ್ತಿಯು ತಾತ್ಕಾಲಿಕವಾಗಿ ಸುಖದ ಸ್ಥಿತಿಯನ್ನು ತಲುಪುತ್ತಾನೆ. ಇಂತಹ ಸ್ಥಿತಿಯನ್ನು ಮತ್ತೆ ಮತ್ತೆ ತಲುಪಬೇಕೆಂಬ ಆಸೆಯೇ ಅವರನ್ನು ಈ ದಾಸರನ್ನಾಗಿ ಮಾಡುತ್ತದೆ. ಇಂತವುಗಳ ಸೇವನೆಯಿಂದ ವ್ಯಕ್ತಿಯು ಮನೋವಿಕಲ್ಪ ಸಮಾಧಿ ಸ್ಥಿತಿಯನ್ನು ತಲುಪುತ್ತಾನೆ.

ಮದ್ಯ, ಮಾದಕದ್ರವ್ಯಗಳ ಸೇವನೆಯು ಅನೇಕ ದುಷ್ಪರಿಣಾಮಗಳನ್ನು ಉಂಟುಮಾಡುತ್ತದೆ. ಕೌಟುಂಬಿಕ ಮತ್ತು ಸಾಮಾಜಿಕ ನೆಮ್ಮದಿಯನ್ನು ಕೆಡಿಸುವ ಈ ಚಟಗಳು ವ್ಯಕ್ತಿಯ ಬದುಕಿನ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಉಂಟುಮಾಡುತ್ತದೆ.ಮದ್ಯ, ಮಾದಕ ವಸ್ತುಗಳ ಸೇವನೆಯು ವ್ಯಕ್ತಿಯ ಮೆದುಳಿನ ಮೇಲೆ ತೀವ್ರವಾದ ಮತ್ತು ದೀರ್ಘಕಾಲದ ಪರಿಣಾಮವನ್ನು ಉಂಟುಮಾಡುತ್ತದೆ. ಅಮಲು ಪದಾರ್ಥ ಸೇವನೆಯು ಕೆಲ ನಿಮಿಷಗಳ ಕಾಲ ಆನಂದವನ್ನು ನೀಡಿದರೂ ಅದು ದೂರಗಾಮಿ ಅಡ್ಡ ಪರಿಣಾಮಗಳನ್ನು ಹೊಂದಿದೆ. ಅದು ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ನಾಶಮಾಡುತ್ತದೆ. ಸಮಾಜದಲ್ಲಿ ಅವನ ಜೀವನವನ್ನು ಎಲ್ಲಾ ರೀತಿಯಿಂದಲೂ ಹಾಳುಮಾಡುತ್ತದೆ.ಅಮಲು ಪದಾರ್ಥಗಳನ್ನು ಸೇವಿಸಿದ ವ್ಯಕ್ತಿಗಳು ಅವರದೇ ಆದ ಲೋಕದಲ್ಲಿ ವಿಹರಿಸುತ್ತಿರುತ್ತಾರೆ. ಮಾದಕ ವಸ್ತುಗಳು ಅವರನ್ನು ಸಮಾಜ ಒಪ್ಪಿಕೊಂಡಿರುವ ರೀತಿ ನೀತಿಗಳಿಂದ ವಿಮುಖರನ್ನಾಗಿ ಮಾಡುತ್ತದೆ. ಒಮ್ಮೆ ಆ ಚಟಕ್ಕೆ ಬಲಿಯಾದರೆ ಅಂಥ ವ್ಯಕ್ತಿಗಳಲ್ಲಿ ಮಾದಕ ವಸ್ತುಗಳ ಸೇವನೆಯ ತವಕ ಜಾಸ್ತಿಯಾಗುತ್ತದೆ. ಅದಕ್ಕಾಗಿ ಅವರು ಹಪಹಪಿಸುತ್ತಾರೆ. ನಿಯಂತ್ರಣ ತಪ್ಪಿ , ಹೆಚ್ಚಿನ ಪ್ರಮಾಣದಲ್ಲಿ ಸೇವಿಸುತ್ತಾರೆ. ದುಷ್ಪರಿಣಾಮಗಳು ಉಂಟಾಗುತ್ತಿದ್ದರೂ

ಅದರ ಸೇವನೆಯನ್ನು ಬಿಡಲಿಕ್ಕಾಗದೆ ಒದ್ದಾಡುತ್ತಾರೆ. ಅಮಲು ಪದಾರ್ಥಗಳಿಗೆ ದಾಸನಾದವರು ಕೌಟುಂಬಿಕ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ನಿರ್ಲಕ್ಷಿಸಲಾರಂಭಿಸುತ್ತಾರೆ. ಮನೆಯ ಖರ್ಚಿಗೆ ದುಡ್ಡು ಕೊಡದೆ ಮಾದಕ ವಸ್ತುಗಳನ್ನು ಖರೀದಿಸುತ್ತಾರೆ. ಮಾದಕ ವಸ್ತುಗಳ ಖರೀದಿಗಾಗಿ ಹಿಂಸಿಸಿ ಹಣ ಪಡೆದುಕೊಳ್ಳುವುದು, ಮಾದಕ ವಸ್ತು ಸೇವಿಸಿ ಮತ್ತಿನಲ್ಲಿ ಇರುವಾಗಲೇ ಅಪಾಯಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಮದ್ಯ ಮಾದಕ ವಸ್ತು ಸೇವಿಸಿ ವಾಹನ ಚಲಾಯಿಸುವುದು, ಒಂದೇ ಸಿರಿಂಜನ್ನು ಬಳಸುವುದು ಮೊದಲಾದವುಗಳನ್ನೆಲ್ಲ ಮಾಡುತ್ತಾರೆ. ಇದರಿಂದ ಅಪರಾಧವೆಸಗಿ ಕಾನೂನು ಕ್ರಮಕ್ಕೆ ಒಳಗಾಗುತ್ತಾರೆ.ಅಮಲು ಪದಾರ್ಥಗಳ ಚಟವನ್ನು ಬೆಳೆಸಿಕೊಂಡ ಜನರು ಪ್ರತಿದಿನ ಮನೆಯ ಸದಸ್ಯರೊಂದಿಗೆ, ಉಳಿದವರೊಂದಿಗೆ ಜಗಳವಾಡಲು ಪ್ರಾರಂಭಿಸುತ್ತಾರೆ. ಬೈಯುವುದು, ಹೊಡೆಯುವುದು ಮೊದಲಾದ ಹಿಂಸೆಗಳನ್ನು ನೀಡಲಾರಂಭಿಸುತ್ತಾರೆ. ಕಚೇರಿ ಮತ್ತು ಕೆಲಸದ ಸ್ಥಳಗಳಲ್ಲಿ ಸಹೋದ್ಯೋಗಿಗಳೊಂದಿಗೆ ಅನುಚಿತವಾಗಿ ವರ್ತಿಸುತ್ತಾರೆ. ಕೆರಳುವ ಸ್ವಭಾವ ಮತ್ತು ಕೋಪದ ಸ್ವಭಾವಗಳನ್ನು ತೋರಿಸುತ್ತಿರುತ್ತಾರೆ ಕೆಲಸ ಮಾಡಲು ಮನಸ್ಸಿಲ್ಲದಿರುವುದು, ಕೆಲಸವನ್ನು ಬಿಡುವುದು ಮಾಡುತ್ತಿರುತ್ತಾರೆ. ಉಳಿದವರಿಗೆ ಕಿರಿಕಿರಿಯನ್ನುಂಟು ಮಾಡುತ್ತಾರೆ.

ಮದ್ಯ ಸೇವನೆಯಿಂದ ಪಿತ್ತಕೋಶ ಹಾಳಾಗಿ ಕಾಮಾಲೆ ರೋಗಕ್ಕೆ ತುತ್ತಾಗಬಹುದು. ಹೃದಯಾಘಾತವಾಗುವ ಸಾಧ್ಯತೆಯಿದೆ. ಅಕಾಲಿಕ ಮರಣವೂ ಸಂಭವಿಸುತ್ತದೆ. ದಿನಾಲೂ ಮಾದಕ ವಸ್ತುಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳಿಗೆ ಒಂದು ದಿನ ತೆಗೆದುಕೊಳ್ಳದಿದ್ದರೆ ತಲೆ ಸುತ್ತುವುದು, ಮೈ ಬೆವರುವುದು,ಎದೆ ಡಬ್ಬ ಡಬ ಎಂದು ಬಡಿದುಕೊಳ್ಳುವುದು, ಗಾಬರಿಯಾಗುವುದು, ಕೈ ಕಾಲು ನಡುಗುವುದು, ಹೊಟ್ಟೆ ನೋವಾಗುವುದು, ಕೆಲಸದ ಮೇಲೆ ಗಮನ ಕಷ್ಟವಾಗುವುದು ಇತ್ಯಾದಿ ಲಕ್ಷಣಗಳು ಕಂಡುಬರುತ್ತದೆ, ಮಾದಕ ವಸ್ತುಗಳ ಸೇವನೆಯಿಂದ ವ್ಯಕ್ತಿಗಳು ಮನೋರೋಗಗಳಿಗೆ ತುತ್ತಾಗುತ್ತಾರೆ, ಮನೋ ದೌರ್ಬಲ್ಯ ಉಂಟಾಗುತ್ತದೆ. ಕ್ಯಾನ್ಸರ್ ನಂತಹ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಆರ್ಥಿಕವಾಗಿ ಹಿನ್ನಡೆಯನ್ನು ಅನುಭವಿಸಬೇಕಾಗುತ್ತದೆ. ಸಮಾಜದಲ್ಲಿ ಗೌರವವನ್ನು ಕಳೆದುಕೊಳ್ಳಬೇಕಾಗುತ್ತದೆ.

ಮದ್ಯ, ಮಾದಕ ದ್ರವ್ಯ ಸೇವನೆಯ ಚಟಕ್ಕೆ ಒಂದು ಸಲ ಸಿಕ್ಕಿ ಬಿದ್ದರೆ ತಪ್ಪಿಸಿಕೊಳ್ಳುವುದು ಬಹಳ ಕಷ್ಟ. ಇಂದು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಈ ಚಟಕ್ಕೆ ಬಲಿಯಾಗುತ್ತಿದ್ದಾರೆ. ಮಾತ್ರವಲ್ಲ ಮಾದಕ ವಸ್ತುಗಳ ಸರಬರಾಜಿನಲ್ಲೂ ಮಹತ್ತರ ಪಾತ್ರ ವಹಿಸುತ್ತಿದ್ದಾರೆ ಎಂಬುದು ಶೋಚನೀಯ ಸಂಗತಿ. ಇದೊಂದು ಸಾರ್ವತ್ರಿಕ ಸಮಸ್ಯೆಯಾಗಿದೆ. ಆದ್ದರಿಂದ ಈ ಚಟದಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂದು ಎಲ್ಲಾ ದೇಶಗಳ ವಿಜ್ಞಾನಿಗಳು, ಚಿಂತಕರು, ಸರಕಾರ ಚಿಂತಿಸುತ್ತಿದ್ದಾರೆ ಆದರೆ ಇನ್ನೂ ಪರಿಣಾಮಕಾರಿಯಾದ ಪರಿಹಾರವನ್ನು ಕಂಡುಹಿಡಿಯಲಾಗುತ್ತಿಲ್ಲ. ಮಾದಕ ವಸ್ತುಗಳ ಸೇವನೆಗೆ ಬಲಿಯಾಗದಂತೆ ಜಾಗ್ರತೆ ವಹಿಸುವುದೇ ಮೊದಲ ಹೆಜ್ಜೆ. ಮದ್ಯ, ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ಮೂಡಿಸಿ ಜನರು ಅದಕ್ಕೆ ಬಲಿಯಾಗದಂತೆ ನೋಡಿಕೊಳ್ಳಬೇಕು ಯುವಜನತೆ ಮತ್ತು ವಿದ್ಯಾರ್ಥಿಗಳು ಉಳಿದವರನ್ನು ಎಚ್ಚರಿಸಬೇಕು. ದುಶ್ಚಟಕ್ಕೆ ಬಲಿಯಾದವರನ್ನು ಟೀಕಿಸುವುದು, ಹೀಯಾಳಿಸುವುದು, ಕೆಟ್ಟ ನೋಟದಿಂದ ನೋಡುವುದು ಸರಿಯಲ್ಲ. ಅವರನ್ನು ಸಮಾಜದಿಂದ ದೂರ ಮಾಡದೆ ಪ್ರೀತಿ, ವಿಶ್ವಾಸಗಳಿಂದ ಅವರ ಮನಸ್ಸನ್ನು ಗೆದ್ದು ಅವರಲ್ಲಿ ಅನುಕಂಪವನ್ನು ತೋರಿಸಿ ಅವರನ್ನು ಸರಿದಾರಿಗೆ ತರಬೇಕು. ದುಶ್ಚಟಗಳಿಂದ ದೂರವಿರುವುದಕ್ಕೆ ಅಂತವರು ಎಲ್ಲಾ ಸಮಯದಲ್ಲೂ ತಮ್ಮ ಸ್ನೇಹಿತರು, ಸಂಬಂಧಿಕರು ಮತ್ತು ಹಿತೈಷಿಗಳೊಂದಿಗೆ ಇರುವುದು ಸೂಕ್ತವಾಗಿದೆ. ಧ್ಯಾನ ಮತ್ತು ಯೋಗದ ಮೂಲಕವೂ ವ್ಯಸನವನ್ನು ದೂರ ಮಾಡಬಹುದು. ಈ ವ್ಯಸನವನ್ನು ಬಿಡಲು ಸ್ವಪ್ರಯತ್ನ ಅವಶ್ಯಕ. ಎಲ್ಲರೂ ಮದ್ಯ,ಮಾದಕ ವಸ್ತುಗಳಿಂದ ಮುಕ್ತವಾದ ಸಮಾಜವನ್ನು ಕಟ್ಟಲು ಕಟಿಬದ್ಧರಾಗೋಣ.

# ಮುನ್ನಡೆಸು ಬೆಳಕಿನೆಡೆಗೆ

## ● ನಾಟಕವನ್ನು ಓದುವುದು

ಮುನ್ನಡೆಸು ಬೆಳಕಿನೆಡೆಗೆ ನಾಟಕವನ್ನು ಮಕ್ಕಳು ಮೌನವಾಗಿ ಓದಲಿ, ಆನಂತರ ಮಕ್ಕಳನ್ನು ಗುಂಪುಗಳನ್ನಾಗಿ ಮಾಡುವುದು. ಚೀಟಿ ಎತ್ತುವುದರ ಮೂಲಕ ನಾಟಕದ ದೃಶ್ಯಗಳನ್ನು ಗುಂಪುಗಳಿಗೆ ಹಂಚಿಕೊಡುವುದು. ಮಕ್ಕಳಿಂದಲೇ ತೀರ್ಪುಗಾರರನ್ನು ನೇಮಿಸುವುದು. ಮಕ್ಕಳ ಗುಂಪು ಪಾತ್ರಗಳನ್ನು ಹಂಚಿಕೊಂಡು ತಮಗೆ ಸಿಕ್ಕಿದ ದೃಶ್ಯಗಳ ಸಂಭಾಷಣೆಯನ್ನು ಭಾವಪೂರ್ಣವಾಗಿ ಓದಲಿ. ಉತ್ತಮವಾಗಿ ಓದಿದವರನ್ನು ಅಭಿನಂದಿಸುವುದು.

## ● ಉತ್ತರಿಸುವುದು

ನಾಟಕದ ಆಶಯವನ್ನು ಅರ್ಥೈಸಿಕೊಂಡ ಬಳಿಕ 'ಉತ್ತರಿಸಿರಿ' ಚಟುವಟಿಕೆಯನ್ನು ಮಾಡುವುದು. ಅಧ್ಯಾಪಕರು ಪ್ರಶ್ನೆಯನ್ನು ಕೇಳುವುದು. ಅದಕ್ಕೆ ವಿದ್ಯಾರ್ಥಿಗಳು ಉತ್ತರವನ್ನು ಹುಡುಕಿ ಹೇಳಲಿ.. ಸರಿಯಾದ ಉತ್ತರವನ್ನು ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

## ● ಅಭಿಪ್ರಾಯ ಬರೆಯುವುದು

'ಮುನ್ನಡೆಸು ಬೆಳಕಿನೆಡೆಗೆ' ನಾಟಕಕ್ಕೆ ಈ ಶೀರ್ಷಿಕೆ ಒಪ್ಪುತ್ತದೆಯೇ? ಅಭಿಪ್ರಾಯವನ್ನು ಸಮರ್ಥಿಸಿ ಬರೆಯುವುದು. ಶೀರ್ಷಿಕೆಯ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಸುವುದು. ಮಕ್ಕಳು ತಮ್ಮ ಅಭಿಪ್ರಾಯವನ್ನು ಮಂಡಿಸಲಿ. ಆ ಶೀರ್ಷಿಕೆ ಯಾಕೆ ಒಪ್ಪುತ್ತದೆ ಎಂದು ಸಮರ್ಥಿಸಿ ಬರೆಯಲಿ.

## ಅಭಿಪ್ರಾಯ ಟಿಪ್ಪಣಿಯನ್ನು ಹೀಗೂ ಬರೆಯಬಹುದಲ್ಲವೇ?

ಅರಮನೆಯಲ್ಲಿ ಸುಖದ ಸುಪ್ಪತ್ತಿಗೆಯಲ್ಲಿ ಮೆರೆಯುತ್ತಿದ್ದ ಸಿದ್ದಾರ್ಥನು ಅದರಿಂದ ಬೇಸತ್ತು ಒಂದು ದಿನ ನಗರ ಸಂಚಾರಕ್ಕೆಂದು ಹೊರಡುತ್ತಾನೆ. ಆಗ ಅವನು ಹಾದಿಯಲ್ಲಿ ಒಬ್ಬ ಕುಷ್ಟರೋಗಿಯನ್ನು, ಮುದುಕನನ್ನು, ಶವಯಾತ್ರೆಯನ್ನು ನೋಡುತ್ತಾನೆ. ಈ ಜೀವನದಲ್ಲಿ ಯಾವುದು ಶಾಶ್ವತವಲ್ಲ ಎಂಬ ಸತ್ಯವನ್ನು ಅವನು ಅರಿತುಕೊಳ್ಳುತ್ತಾನೆ. ಜನರು ಅಷ್ಟೊಂದು ನೋವು ಸಂಕಟಗಳಿಂದ ಬಳಲುತ್ತಿರುವಾಗ ನಾನು ಅರಮನೆಯಲ್ಲಿ ಸುಖದ ಭ್ರಮೆಯಲ್ಲಿ ಮುಳುಗಿರಲೆ? ಜನರ ನೋವು ತುಂಬಿದ ಮುಖಗಳೇ, ಕಣ್ಣೆದುರು ಬರುತ್ತಿರುವಾಗ ಆ ಅಪಾರ ದುಃಖಕ್ಕೆ ಕಾರಣವೇನು ಎಂದು ತಿಳಿದು ಅವರ ನೋವು ಸಂಕಟಗಳಿಗೆ ಪರಿಹಾರ ಹುಡುಕಬೇಕೆಂದು ಅವನು ಶಾಶ್ವತವಾದ ಬೆಳಕನ್ನು ಅಂದರೆ ಜ್ಞಾನವನ್ನು ಹುಡುಕಿಕೊಂಡು ಹೋಗುತ್ತಾನೆ. ಎಲ್ಲರ ಸುಖಕ್ಕಾಗಿ ಇಲ್ಲಿ ಸಿದ್ದಾರ್ಥ ವೈಯಕ್ತಿಕ ಸುಖಗಳನ್ನೆಲ್ಲ ತ್ಯಜಿಸಿ ತಂದೆ ,ತಾಯಿ, ಹೆಂಡತಿ ಮಗು ,ಅರಮನೆಯನ್ನೆಲ್ಲಾ ತ್ಯಜಿಸಿ, ಮೋಹವನ್ನು ತೊರೆದು ಶಾಶ್ವತವಾದ ಬೆಳಕಿನೆಡೆಗೆ ಸಾಗುತ್ತಾನೆ. ಆದ ಕಾರಣ 'ಮುನ್ನಡೆಸು ಬೆಳಕಿನೆಡೆಗೆ' ಎಂಬ ಶೀರ್ಷಿಕೆ ನಾಟಕಕ್ಕೆ ಚೆನ್ನಾಗಿ ಒಪ್ಪುತ್ತದೆ

- ಪಾತ್ರ ಚಿತ್ರಣ ಮಾಡುವುದು

**ಪಾತ್ರ ಚಿತ್ರಣ ಹೀಗೂ ಇರಬಹುದಲ್ಲವೇ?**

## ಸಿದ್ಧಾರ್ಥ

ಲೀಲಾ ಮಣ್ಣಾಲ ಅವರು ಬರೆದ 'ಮುನ್ನಡೆಸು ಬೆಳಕಿನೆಡೆಗೆ' ನಾಟಕದಲ್ಲಿ ಬರುವ ಪ್ರಧಾನ ಪಾತ್ರವೇ ಸಿದ್ಧಾರ್ಥ. ಕಪಿಲವಸ್ತುವಿನ ಶುದ್ಧೋದನ ಮಹಾರಾಜನ ಮಗನಾದ ಆತ ಸಂಪ್ರದಾಯ, ಶಿಷ್ಟಾಚಾರಗಳನ್ನು ಪಾಲಿಸಿಕೊಂಡು ಹೋಗುವ ವ್ಯಕ್ತಿಯಾಗಿ ಗೋಚರಿಸುತ್ತಾನೆ. ತಂದೆಯ ರಾಜಕಾರಣದ ಬಗ್ಗೆ ಆಸಕ್ತಿ ಇಲ್ಲದ ಅವನಿಗೆ ಪ್ರಜಾಹಿತವೇ ತನ್ನ ಹಿತವೆಂಬ ಧ್ಯೇಯ. ಅದಕ್ಕಾಗಿ ನಗರ ಸಂಚಾರ ಮಾಡುವ ಹಂಬಲವನ್ನು ವ್ಯಕ್ತಪಡಿಸುತ್ತಾನೆ. 'ಬಂಗಾರದ ಪಂಜರ ಮಾಡಿಸಿದ ಮಾತ್ರಕ್ಕೆ ಹಕ್ಕಿ ಬಂದಿಯಾಗಿರಲು ಬಯಸುವುದೇನು' ಎಂಬ ಅವನ ಮಾತು ಅವನಿಗೆ ಲೌಕಿಕ ಜೀವನದಲ್ಲಿ ಇರುವ ಅಸಮಾಧಾನ, ಜಿಗುಪ್ಸೆಯನ್ನು ಸೂಚಿಸುತ್ತದೆ. ಸಿದ್ಧಾರ್ಥನಿಗೆ ಪ್ರಜಾಕ್ಷೇಮದ ಬಗ್ಗೆ ಎಷ್ಟು ಕಾಳಜಿ ಇತ್ತೆಂದರೆ ರಾಜ್ಯವನ್ನಾಳುವ ರಾಜನಿಗಿಂತಲೂ ಜನರ ಹೃದಯವನ್ನಾಳುವ ರಾಜನಾಗಬೇಕು ಎಂಬುದೇ ಅವನ ಆಸೆಯಾಗಿತ್ತು. ಜನರ ಒಳಿತಿಗಾಗಿ ಕಾರ್ಯಪ್ರವೃತ್ತನಾಗಬೇಕು ಎಂಬುದು ಅವನ ನಿರ್ಧಾರವಾಗಿತ್ತು. ನಗರ ಸಂಚಾರದ ಪ್ರತಿಯೊಂದು ಹಂತದಲ್ಲಿಯೂ ಪ್ರಕೃತಿ-ಮಾನವ ಸಂಬಂಧದ ಬಗ್ಗೆ ಚಿಂತಿಸಿ ಪ್ರಕೃತಿಯ ಮುಂದೆ ಮಾನವನೆಷ್ಟು ಕುಬ್ಜ ಎಂಬುದನ್ನು ಆಲೋಚಿಸುತ್ತಾನೆ. ನಗರ ಸಂಚಾರದ ಸಮಯದಲ್ಲಿ ಸಿದ್ಧಾರ್ಥ ಪ್ರತಿಯೊಂದು ವಿಚಾರವನ್ನು ಪ್ರಶ್ನಿಸುತ್ತಾನೆ. ವೃದ್ಧ, ಅಶಕ್ತ, ಶವಯಾತ್ರೆ ಮೊದಲಾದವುಗಳನ್ನು ಕಂಡ ಅವನ ಮನಸ್ಸಿನಲ್ಲಿ ಜೀವನದ ನಶ್ವರತೆಯ ಬಗ್ಗೆ ಜಿಜ್ಞಾಸೆ ಉಂಟಾಗುತ್ತದೆ. ನಮ್ಮ ಸಮಾಜದಲ್ಲಿ ಕಷ್ಟ ಕಾರ್ಪಣ್ಯಗಳಿರುವಾಗ ನಾವು ಮಾತ್ರ ಸಂತೋಷದಲ್ಲಿರಲು ಅವನ ಮನಸ್ಸು ಒಪ್ಪುವುದಿಲ್ಲ. ರಾಜನ ಸಂತೋಷದಲ್ಲಿ ಪ್ರಜೆಗಳು ಭಾಗಿಗಳಾಗುವಂತೆ ರಾಜನು ಪ್ರಜೆಗಳ ದುಃಖದಲ್ಲಿ ಭಾಗಿಯಾಗಬೇಕು ಎಂದು ಅವನು ಹೇಳುತ್ತಾನೆ ನಶ್ವರವಾದ ಜೀವನದಲ್ಲಿ ನಾವು ಸ್ವಾರ್ಥಿಗಳಾಗಿ ಬದುಕುವುದರಲ್ಲಿ ಅರ್ಥವಿಲ್ಲ ಎಂದು ನಿರ್ಧರಿಸಿದ ಅವನು ಎಲ್ಲವನ್ನು ತ್ಯಜಿಸಿ ಸತ್ಯವನ್ನು ಹುಡುಕುತ್ತಾ ಹೋಗುತ್ತಾನೆ. ಒಟ್ಟಿನಲ್ಲಿ ಸಿದ್ಧಾರ್ಥ ಓರ್ವ ಪ್ರಜಾಹಿತ ಪರಿಪಾಲಕನಾಗಿ ಕಂಡುಬರುತ್ತಾನೆ.

- **ನಾಟಕವನ್ನು ಕಥಾ ರೂಪಕ್ಕೆ ಪರಿವರ್ತಿಸುವುದು**

ನಾಟಕವನ್ನು ಓದಿ ಅರ್ಥೈಸಿಕೊಂಡ ಬಳಿಕ ಮಕ್ಕಳು ನಾಟಕವನ್ನು ಕಥೆಯಾಗಿ ಪರಿವರ್ತಿಸುವುದು. ನಾಟಕದ ಶೈಲಿ ಮತ್ತು ಕಥೆ ಶೈಲಿಯ ಬಗ್ಗೆ ಚರ್ಚಿಸಿ ತಿಳಿದುಕೊಳ್ಳುವುದು. ನಾಟಕದ ಆಶಯವನ್ನು ಕಥೆಯ ರೂಪದಲ್ಲಿ ಮಂಡಿಸಲು ಹೇಳುವುದು. ಒಬ್ಬರಾದ ಮೇಲೆ ಒಬ್ಬರಂತೆ ಕಥೆಯನ್ನು ಬೆಳೆಸುತ್ತಾ ಹೋಗುವುದು. ಅಧ್ಯಾಪಕರು ಅಗತ್ಯವಿದ್ದಲ್ಲಿ ಸಹಕರಿಸುವುದು. ಅನಂತರ ಮಕ್ಕಳು ವೈಯಕ್ತಿಕವಾಗಿ ಕಥೆಯ ರೂಪದಲ್ಲಿ ಬರೆಯುವುದು. ಕಥೆಗೆ ಶೀರ್ಷಿಕೆ ನೀಡಲು ಸೂಚಿಸುವುದು. ಅಧ್ಯಾಪಕರು ಪರಿಶೀಲಿಸುವುದು.ತಪ್ಪಿದ್ದಲ್ಲಿ ಸರಿಪಡಿಸಲು ಹೇಳುವುದು.

# ತ್ಯಾಗ

ಕಪಿಲವಸ್ತುವಿನ ರಾಜ ಶುದ್ಧೋದನ. ಅವನ ಮಗ ಸಿದ್ಧಾರ್ಥ. ಸಿದ್ಧಾರ್ಥನು ಶಿಶುವಾಗಿದ್ದಾಗ ಅರಮನೆಗೆ ಬಂದಿದ್ದ ಅಸಿತಮುನಿಗಳು ಸಿದ್ಧಾರ್ಥನು ಮುಂದೆ ಸನ್ಯಾಸಿಯಾಗುತ್ತಾನೆ ಎಂದು ಭವಿಷ್ಯನುಡಿದಿದ್ದರು. ಇದರಿಂದ ಚಿಂತೆಗೊಳಗಾದ ಶುದ್ಧೋದನ ಮಹಾರಾಜನು ತನ್ನ ಮಗನು ಸನ್ಯಾಸಿಯಾಗುವುದಕ್ಕೆ ನಾನು ಬಿಡಲಾರೆ ಎಂದುಕೊಂಡು ಅವನನ್ನು ಯಾವ ನೋವು ಭಾದಿಸದಂತೆ ಸುಖದ ಸುಪ್ಪತ್ತಿಗೆಯಲ್ಲಿ ಇಟ್ಟು ಸಾಕಿದನು. ಅರಮನೆಯಿಂದ ಹೊರಗೆ ಹೋಗುವ ಸಂದರ್ಭವನ್ನೇ ಅವನಿಗೆ ಒದಗಿಸಲಿಲ್ಲ ಯೋಗ್ಯ ವಯಸ್ಸಿಗೆ ಬಂದಾಗ ಯಶೋಧರೆ ಎಂಬ ಯೋಗ್ಯ ಕನ್ಯೆಯನ್ನು ತಂದು ಅವನಿಗೆ ವಿವಾಹ ಮಾಡಿಸಿದನು. ಹಾಗೆ ಸಿದ್ಧಾರ್ಥನು ಅರಮನೆಯೊಳಗೆ ಬಂದಿಯಾಗಿಯೇ ಬೆಳೆದನು.

ಹೀಗಿರಲು ಒಂದು ದಿನ ಸಿದ್ಧಾರ್ಥನು ತಂದೆಯ ಬಳಿಗೆ ಬಂದು "ಅಪ್ಪಾಜಿ, ಅದೇಕೋ ಈಗೀಗ ಅರಮನೆಯಲ್ಲಿ ಬಹಳ ಬೇಸರವಾಗುತ್ತಿದೆ. ಒಂದು ಬಾರಿ ನಗರ ಸಂಚಾರ ಮಾಡಬೇಕೆಂಬ ಆಸೆ ಇದೆ. ನಗರ ಸಂಚಾರ ಮಾಡಲು ನೀವು ನನಗೆ ಅನುಮತಿಯನ್ನು ಕೊಡಿ" ಎಂದನು. "ನೀನು ರಾಜನಾದ ಮೇಲೆ ಪ್ರಜೆಗಳ ಕ್ಷೇಮವನ್ನು, ಕಷ್ಟ ಸುಖಗಳನ್ನು ಅರಿಯುವುದು ಇದ್ದೇ ಇದೆ.ಈಗ ಏನು ಅವಸರ? "ಎಂದು ಶುದ್ಧೋದನರಾಜನು ಕೇಳುತ್ತಾನೆ. ಆಗ ಸಿದ್ಧಾರ್ಥನು ಅರಮನೆಯಲ್ಲಿ ಸುಖದ ಸುಪ್ಪತ್ತಿಗೆಯಲ್ಲಿದ್ದರೂ ನಾಲ್ಕು ಗೋಡೆಗಳ ನಡುವೆ ಯಾವಾಗಲೂ ಬಂದಿಯಾಗಿರಲು ಸಾಧ್ಯವೇ? ನನ್ನನ್ನು ಹೀಗೆ ಕೂಡಿ ಹಾಕುವ ಉದ್ದೇಶವಾದರೂ ಏನು?" ಎಂದು ಕೇಳಿದನು. ಅದಕ್ಕೆ ಮರು ಉತ್ತರ ನೀಡದ ರಾಜನು ಸಿದ್ಧಾರ್ಥನ ಮನಸ್ಸಿಗೆ ನೋವು ಮಾಡಲು ಇಚ್ಛಿಸದೆ ಅವನ ಕೋರಿಕೆಯನ್ನು ಈಡೇರಿಸಲು ಒಪ್ಪಿಕೊಂಡನು. ಮರುದಿನ ಸೂರ್ಯೋದಯಕ್ಕೆ ಸಿದ್ಧನಾಗಲು ಹೇಳಿದನು. ನಿನಗಾಗಿ ರಥ ಸಿದ್ಧಪಡಿಸಲು ಚೆನ್ನನಿಗೆ ಹೇಳುತ್ತೇನೆ ಎಂದನು. ಸಿದ್ಧಾರ್ಥನು ಹೊರಟು ಹೋದ ಮೇಲೆ ರಾಜನು ಮಂತ್ರಿಗಳನ್ನು ಕರೆದು ಸಿದ್ಧಾರ್ಥನು ನಗರ ಪ್ರದಕ್ಷಿಣೆಗೆ ಹೋಗುವಾಗ ನಗರವನ್ನು ಸಿಂಗರಿಸಿ ಇಡಬೇಕು. ಸತತಯಾವುದೇ ನೋವು ಸಂಕಟಗಳು ಕಾಣಬಾರದು ಎಂದು ಅಜ್ಞಾಪಿಸಿದನು. ಮರುದಿನ ನಗರ ಸಂಚಾರಕ್ಕೆ ಹೊರಟ ಸಿದ್ಧಾರ್ಥನನ್ನು ಪ್ರಜೆಗಳೆಲ್ಲ ದಿಟ್ಟಿಸಿ ನೋಡುತ್ತಾರೆ. ಹೀಗೆ ಹೋಗುತ್ತಾ ಇರುವಾಗ ಅವರಿಗೆ ಒಬ್ಬ ಕುಷ್ಟರೋಗಿ ಎದುರಿಗೆ ಕಾಣಿಸುತ್ತಾನೆ. ಅವನು ನೋವಿನಿಂದ ಬಳಲುತ್ತಿದ್ದನು. ಇದನ್ನು ನೋಡಿದ ಸಿದ್ಧಾರ್ಥನ ಮನಸ್ಸಿಗೆ ನೋವುಂಟಾಗುತ್ತದೆ. ಹಾಗೆ ಮುಂದೆ ಹೋದಾಗ ವೃದ್ಧನೊಬ್ಬನು ಕಾಣಸಿಗುತ್ತಾನೆ. ಅವನ ಬೆನ್ನು ಬಾಗಿತ್ತು. ಮುಖ ಸುಕ್ಕುಗಟ್ಟಿತ್ತು. ಹಲ್ಲುಗಳೆಲ್ಲ ಉದುರಿ ಹೋಗಿದ್ದವು. ಮನುಷ್ಯನ ಈ ಸ್ಥಿತಿಯ ಬಗ್ಗೆ ಸಿದ್ಧಾರ್ಥನು ಚೆನ್ನನನ್ನು ಕೇಳಿದಾಗ ಎಲ್ಲಾ ಮನುಷ್ಯರು ವೃದ್ಧರಾಗುತ್ತಾರೆ ಎಂಬ ವಿಷಯ ತಿಳಿಯುತ್ತದೆ ಹಾಗೆಯೇ ಮುಂದೆ ಹೋದಾಗ ಸಿದ್ಧಾರ್ಥನಿಗೆ ಶವಯಾತ್ರೆಯು ಕಾಣಿಸುತ್ತದೆ. ತನ್ನ ಸಂಶಯವನ್ನು ಚೆನ್ನನಲ್ಲಿ ಕೇಳಿ ನಿವಾರಿಸಿಕೊಳ್ಳುತ್ತಾನೆ. ಹುಟ್ಟಿದವರೆಲ್ಲ ಒಂದಲ್ಲ ಒಂದು ದಿನ ಸಾಯಬೇಕು ಎಂಬುದು ಅವನಿಗೆ ತಿಳಿಯುತ್ತದೆ.ಈ ಜೀವನ ಶಾಶ್ವತವಲ್ಲ. ಇದು ನಶ್ವರವಾದದ್ದು ಎಂದು ತಿಳಿದ ಅವನ ಮನಸ್ಸಿಗೆ ನೋವಾಗುತ್ತದೆ. ಅವನು ಅರಮನೆಗೆ ಹಿಂತಿರುಗಿ ಹೋಗುತ್ತಾನೆ.ಸ್ವಲ್ಪಕಾಲದ ನಂತರ ಸಿದ್ಧಾರ್ಥನಿಗೆ ಪುತ್ರೋತ್ಸವವಾಗುತ್ತದೆ. ಆದರೆ ಅವನಿಗೆ ಯಾವ ಸಂತೋಷವೂ ಉಂಟಾಗುವುದಿಲ್ಲ. ಶುದ್ಧೋದನ ಮಹಾರಾಜನು ತನಗೆ ಮೊಮ್ಮಗ ಹುಟ್ಟಿದ್ದಕ್ಕಾಗಿ ಇಡೀ ರಾಜ್ಯಕ್ಕೆ ಸಿಹಿ ಹಂಚುವ ಏರ್ಪಾಡು ಮಾಡುತ್ತಾನೆ. ಎಲ್ಲರೂ ಆನಂದದಿಂದ ಕುಣಿದು ಕುಪ್ಪಳಿಸಬೇಕೆಂದು ಆಜ್ಞೆ ಮಾಡುತ್ತಾನೆ. ಆಗ ಸಿದ್ಧಾರ್ಥನು "ಆನಂದ ಅಂತರಂಗದಿಂದ ಹೊಮ್ಮಬೇಕು. ಆಜ್ಞೆ ಮಾಡುವುದರಿಂದ ಆನಂದ ಬರುತ್ತದೆಯೇ?" ಪ್ರಜೆಗಳು ನಾನಾ ವಿಧದ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಮಹಾರಾಜರಿಗೆ ಮೊಮ್ಮಗು ಹುಟ್ಟಿದ ತಕ್ಷಣ ಅವರು ಸಂತಸ ಹಂಚಿಕೊಳ್ಳಲು ಆಗುವುದೇ? ಎಂದು

ಕೇಳುತ್ತಾನೆ. ಜನರು ಮಹಾರಾಜರ ಸಂತಸದಲ್ಲಿ ಭಾಗಿಯಾಗುವಂತೆ ರಾಜರು ಪ್ರಜೆಗಳ ದುಃಖದಲ್ಲೂ ಭಾಗಿಯಾಗಬೇಕು ಎಂದು ಹೇಳುತ್ತಾನೆ.ಈ ಜೀವನ ನಶ್ವರರವಾದದ್ದು. ಪ್ರಜೆಗಳು ನೋವು ಸಂಕಟಗಳಿಂದ ನರಳುತ್ತಿರುವಾಗ ನಾನು ಸುಖದ ಭ್ರಮೆಯಲ್ಲಿ ಮುಳುಗಿರುವುದು ಹೇಗೆ? ಜನರ ನೋವು ದುಃಖ ತುಂಬಿದ ಮುಖಗಳೇ ಕಣ್ಣೆದುರು ಕಾಣುವಾಗ ನಾನು ಹೇಗೆ ನೆಮ್ಮದಿಯಿಂದ ಇರಲು ಸಾಧ್ಯ? ಜನರ ನೋವು ಸಂಕಟಗಳಿಗೆ ಕಾರಣವನ್ನು ಹುಡುಕಬೇಕು, ಪರಿಹಾರವನ್ನು ಕಾಣಬೇಕು ಎಂದು ತಿಳಿದುಕೊಂಡು ವೈಯಕ್ತಿಕ ಸುಖ ಭೋಗಗಳನ್ನು ತ್ಯಜಿಸಿ ಜ್ಞಾನದ ಬೆಳಕನ್ನು ಕಾಣಲು ಅವನ ಮನಸ್ಸು ಸಿದ್ಧವಾಗುತ್ತದೆ. ತಂದೆ, ತಾಯಿ, ಹೆಂಡತಿ, ಮಗು, ಅರಮನೆ ಎಲ್ಲವನ್ನು ತ್ಯಜಿಸಿ ಶಾಶ್ವತವಾದ ಸುಖವನ್ನು ಹುಡುಕಿಕೊಂಡು ಸಿದ್ದಾರ್ಥನು ಮುಂದೆ ಸಾಗುವನು.

- **ಭಿತ್ತಿ ಪತ್ರ ರಚಿಸುವುದು**

ಭಿತ್ತಿ ಪತ್ರದ ಚೌಕಟ್ಟಿನ ಕುರಿತು ಚರ್ಚಿಸುವುದು.

- ಸಂಕ್ಷಿಪ್ತವಾಗಿರಬೇಕು
- ಮಾಹಿತಿಗಳಿರಬೇಕು
- ಆಕರ್ಷಣೀಯವಾಗಿರಬೇಕು

**ಭಿತ್ತಿ ಪತ್ರ ಹೀಗೂ ಇರಬಹುದಲ್ಲವೇ?**

**ಬನ್ನಿರಿ !!ನೋಡಿರಿ!!!ಪ್ರೋತ್ಸಾಹಿಸಿರಿ!!**

ವಿದ್ಯಾದಾಯಿನಿ ಪ್ರೌಢಶಾಲೆ ಕಾಸರಗೋಡು

**ಮುನ್ನಡೆಸು ಬೆಳಕಿನೆಡೆಗೆ (ನಾಟಕ ಪ್ರದರ್ಶನ )**

- ರಚನೆ : ಲೀಲಾ ಮಣ್ಣಾಲ
- ನಿರ್ದೇಶನ : ರಾಮ್ ಕುಮಾರ್
- ಸ್ಥಳ : ಶಾಲಾ ವೇದಿಕೆ
- ತಾರೀಕು : 8 - 02 - 2025
- ಸಮಯ : ಅಪರಾಹ್ನ 3.00 ರಿಂದ 4.00 ತನಕ

ಎಲ್ಲರಿಗೂ ಆದರದ ಸ್ವಾಗತ

- **ಅಭಿನಯಿಸುವುದು**

ನಾಟಕದ ಪಾತ್ರಗಳನ್ನು ಹಂಚಿಕೊಂಡು ವಿದ್ಯಾರ್ಥಿಗಳು ತರಗತಿಯಲ್ಲಿ ಅಭಿನಯಿಸಲಿ. ಐಸಿಟಿ ಬಳಸಿ ಹಿನ್ನೆಲೆ ಸಂಗೀತ ನೀಡಲಿ.